ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 28 ಮಂಗಳವಾರ 2023

ಸಂಪುಟ: 43 | ಸಂಚಿಕೆ: 310 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮತ್ತೆ ಬಿಜೆಪಿ ಅಧಿಕಾರಕ್ಕೆ ತಂದರೆ ಕರ್ನಾಟಕದಲ್ಲಿ ಮತ್ತಷ್ಟು ಅಭಿವೃದ್ಧಿ ಪರ್ವ

ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣ ಉದ್ಘಾಟನೆಯೂ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಕ್ಕೆ ಪ್ರಧಾನಿ ಮೋದಿ ಚಾಲನೆ



ಬೆಂಗಳೂರು, ಫೆ.27(ಕೆಎಂಶಿ)– ಕರ್ನಾಟಕದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ತಂದರೆ ಇನ್ನೂ ಹೆಚ್ಚಿನ ಅಭಿವೃದ್ಧಿ ಪರ್ವ ಕಾಣುತ್ತೀರಿ ಎಂದು ಪ್ರಧಾನಿ ನರೇಂದ್ರ ಮೋದಿ ಇಂದಿಲ್ಲಿ ತಿಳಿಸಿದ್ದಾರೆ. ರಾಜ್ಯ ವಿಧಾನಸಭಾ ಚುನಾವಣೆಗೂ ಮುನ್ನ ಮೇಲಿಂದ ಮೇಲೆ ರಾಜ್ಯ ಪ್ರವಾಸ ಕೈಗೊಳ್ಳುತ್ತಿರುವ ಮೋದಿ, ಇಂದು ಶಿವಮೊಗ್ಗ ಮತ್ತು ಬೆಳಗಾವಿಯಲ್ಲಿ ರೋಡ್ ಶೋ ಹಾಗೂ ಬೃಹತ್ ಜನಸ್ತೋಮವನ್ನುದ್ದೇಶಿಸಿ ಮಾತನಾಡಿ, ಮತ್ತೆ ಡಬಲ್ ಇಂಜಿನ್ ಸರ್ಕಾರಕ್ಕೆ ಒತ್ತು ಕೊಟ್ಟರು. ಡಬಲ್ ಇಂಜಿನ್ ಸರ್ಕಾರವಿದ್ದರೆ, ರಾಜ್ಯದ ಅಭಿವೃದ್ಧಿಯನ್ನು ನೀವು ಕಣ್ಣಾರೆ ಕಾಣುತ್ತೀರಿ. ಕರ್ನಾಟಕ ಮತ್ತು ಕೇಂದ್ರ ಸರ್ಕಾರ ಜಂಟಿಯಾಗಿ ರಾಜ್ಯದಲ್ಲಿ ರಸ್ತೆ, ರೈಲು, ವಿಮಾನ ಸಂಪರ್ಕಕ್ಕೆ ಒತ್ತು ಕೊಟ್ಟು, ಹವಾಯಿ ಚಪ್ಪಲಿ ಹಾಕುವ ವ್ಯಕ್ತಿಯು ವಿಮಾನದಲ್ಲಿ ಸಂಚರಿಸುವ ಅವಕಾಶ ಮಾಡಿಕೊಟ್ಟಿದ್ದೇವೆ. ನಮ್ಮದು ಬಡವರ ಪರ ಸರ್ಕಾರ, ಈ ಹಿಂದೆ ಹಾರಾಟಕ್ಕಾಗಿ ವಿಮಾನಗಳನ್ನು ವಿದೇಶದಿಂದ ಖರೀದಿ ಮಾಡಲಾಗುತ್ತಿತ್ತು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸ್ವದೇಶಿ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದೆ.

ಬಡವರೂ ಕೂಡ ವಿಮಾನದಲ್ಲಿ ಹಾರಾಟ ಮಾಡಬೇಕೆಂಬುದು ನಮ್ಮ ಸರ್ಕಾರದ ಉದ್ದೇಶ. ಇದಕ್ಕಾಗಿ ಉಡಾನ್ ಯೋಜನೆ ಜಾರಿಗೊಳಿಸಿದ್ದೇವೆ. ಹಿಂದಿನ ಸರ್ಕಾರಗಳು ಸಣ್ಣ ಸಣ್ಣ ಗ್ರಾಮಗಳನ್ನು ನಿರ್ಲಕ್ಷಿಸಿದ್ದವು. ಆದರೆ ಡಬಲ್ ಇಂಜಿನ್ ಸರ್ಕಾರ ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಯನ್ನು ಹೊಂದಿದೆ. ಇದು ನಮ್ಮ ಸರ್ಕಾರದ ಕೆಲಸದ ಪರಿಯಾಗಿದೆ ಎಂದರು. ಕರ್ನಾಟಕದಲ್ಲಿರುವ ಪ್ರವಾಸೋದ್ಯಮ



ವನ್ನು ಅಭಿವೃದ್ಧಿ ಜೊತೆಗೆ ಸಂಪನ್ಮೂಲ ವೃದ್ಧಿಗಾಗಿ ಮೂಲ ಸೌಕರ್ಯಕ್ಕೆ ಒತ್ತು ಕೊಟ್ಟಿದ್ದೇವೆ. ಈ ಹಿಂದೆ ಒಂದೆರಡು ವಿಮಾನ ನಿಲ್ದಾಣ ಹೊಂದಿದ್ದ ಕರ್ನಾಟಕದಲ್ಲಿ ಈಗ ಬಹುತೇಕ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ವಿಮಾನ ನಿಲ್ದಾಣ ಸ್ಥಾಪನೆಗೊಳ್ಳಲಿವೆ. ರೈಲ್ವೆ ಸಂಪರ್ಕವನ್ನು ಹೆಚ್ಚಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ ಸಂಪರ್ಕ, ಕರ್ನಾಟಕದ

▶ 8ನೇ ಪುಟಕ್ಕೆ

ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಮಾ.11ಕ್ಕೆ ಪ್ರಧಾನಿಗಳಿಂದ ಉದ್ಘಾಟನೆ

- ಮುಖ್ಯಮಂತ್ರಿ ಬೊಮ್ಮಾಯಿ ಅಧಿಕೃತ ಘೋಷಣೆ
- ಇದೇ ವೇಳೆ ಧಾರವಾಡದಲ್ಲಿ ಐಐಟಿ ಉದ್ಘಾಟನೆ
- ಮೋದಿಯವರಿಂದ ರಾಜ್ಯ, ದೇಶಕ್ಕೆ ಮಹಾಕೊಡುಗೆ

ಬೆಂಗಳೂರು: ಬೆಂಗಳೂರು–ಮೈಸೂರು ದಶಪಥ ರಸ್ತೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು, ಮಾರ್ಚ್ 11ಕ್ಕೆ ಲೋಕಾರ್ಪಣೆ ಮಾಡಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದ್ದಾರೆ. ಶಿವಮೊಗ್ಗ ವಿಮಾನ ನಿಲ್ದಾಣ ಲೋಕಾರ್ಪಣೆ ಮಾಡಿದ ನಂತರ ಮಾತನಾಡಿದ ಮುಖ್ಯಮಂತ್ರಿಯವರು, ದಶಪಥ ರಸ್ತೆಯ ಉದ್ಘಾಟನೆಯ ಜೊತೆಗೆ ಧಾರವಾಡದಲ್ಲಿ ಐಐಟಿ

▶ 8ನೇ ಪುಟಕ್ಕೆ



ಚುನಾವಣಾ ರಾಜಕಾರಣದಿಂದ ನಿವೃತ್ತಿಗೆ ತನ್ವೀರ್ ಸೇಠ್ ನಿರ್ಧಾರ



- ಕಳೆದ ವರ್ಷದ ಡಿಸೆಂಬರ್‌ನಲ್ಲೇ ವರಿಷ್ಠರಿಗೆ ಪತ್ರ
- ಆದರೆ ಕೊನೆವರೆಗೂ ಕಾಂಗ್ರೆಸ್ಸಿಗನಾಗಿರುವ ವಾಗ್ದಾನ
- ಆರೋಗ್ಯದ ಕಾರಣ ನೀಡಿ ಸ್ಪರ್ಧೆಗೆ ನಿರಾಕರಣೆ
- ಪಕ್ಷದ ನಾಯಕರಿಂದ ನಿರಂತರ ಒತ್ತಡ; ಸೇಠ್ ತೀರ್ಮಾನ ಇದುವರೆಗೆ ಅಚಲ
- ಸಿದ್ದರಾಮಯ್ಯರೇ ಎನ್.ಆರ್.ಕ್ಷೇತ್ರದಿಂದ ಸ್ಪರ್ಧಿಸಿದರೆ ಗೆಲ್ಲಿಸುವ ಶಪಥ
- ತನ್ವೀರ್ ಸ್ಪರ್ಧೆ ಸಾಧ್ಯವಾಗದೇ ಇದ್ದರೆ ಅಯೂಬ್‌ಖಾನ್ ಕಣಕ್ಕಿಳಿಯುವ ಸಾಧ್ಯತೆ.

ಮೈಸೂರು, ಫೆ.27– ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಸತತವಾಗಿ ಐದು ಬಾರಿ ಗೆಲುವು ಸಾಧಿಸಿ ಸೋಲಿಲ್ಲದ ಸರದಾರನಾಗಿರುವ ಶಾಸಕ ತನ್ವೀರ್ ಸೇಠ್ ಚುನಾವಣಾ ರಾಜಕೀಯದಿಂದ ಹಿಂದೆ ಸರಿಯುವ ನಿರ್ಧಾರ ಕೈಗೊಂಡಿದ್ದಾರೆ.

ತಾವು ಚುನಾವಣಾ ರಾಜಕೀಯದಿಂದ ಹಿಂದೆ ಸರಿಯುವ ಬಗ್ಗೆ ಕಳೆದ ಡಿಸೆಂಬರ್‌ನಲ್ಲಿ, ಬೆಳಗಾವಿ ಅಧಿವೇಶನದ ವೇಳೆ ಎಐಸಿಸಿ ಮತ್ತು ಕೆಪಿಸಿಸಿ ನಾಯಕರಿಗೆ ಲಿಖಿತವಾಗಿಯೇ ತಿಳಿಸಿರುವ ತನ್ವೀರ್, ಚುನಾವಣಾ ರಾಜಕಾರಣದಿಂದ ನಿವೃತ್ತಿ ಪಡೆಯಲು ಅವಕಾಶ ಕಲ್ಪಿಸುವಂತೆ ಕೋರಿಕೊಂಡಿದ್ದಾರೆ. ಜೊತೆಗೆ ತಾವು ಚುನಾವಣೆಯಲ್ಲಿ ಸ್ಪರ್ಧಿಸದಿದ್ದರೂ, ಜೀವನದ ಕೊನೆವರೆಗೂ ಕಾಂಗ್ರೆಸ್‌ನಲ್ಲೇ ಇರುವುದಾಗಿ ವರಿಷ್ಠರಿಗೆ ಭರವಸೆ ನೀಡಿದ್ದಾರೆ. ಚುನಾವಣಾ ರಾಜಕಾರಣದಿಂದ ಹಿಂದೆ ಸರಿಯುವ ತನ್ವೀರ್ ಸೇಠ್ ನಿರ್ಧಾರದ ಹಿನ್ನೆಲೆಯಲ್ಲಿ ರಾಜ್ಯದ ಉಸ್ತುವಾರಿ ಹೊಣೆ ಹೊತ್ತಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ ಚರ್ಚೆ ನಡೆಸಿದ್ದು, ತಮ್ಮ ನಿರ್ಧಾರ ಕೈಬಿಡುವಂತೆ ತನ್ವೀರ್ ಸೇಠ್‌ಗೆ ಸಲಹೆ ನೀಡಿದ್ದಾರೆ. ಆದರೆ ತನ್ವೀರ್, ತನ್ನ ಮೇಲೆ ಮಾರಣಾಂತಿಕ ಹಲ್ಲೆ ನಡೆದ ನಂತರ ತಾವು ಇನ್ನೂ ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಶಾಸಕನಾಗಿ ಕ್ಷೇತ್ರದ ಜನರಿಗೆ ನನ್ನ

▶ 8ನೇ ಪುಟಕ್ಕೆ

> “ ನನ್ನ ಮೇಲೆ ಮಾರಣಾಂತಿಕ ಹಲ್ಲೆ ನಡೆದ ನಂತರ ಆರೋಗ್ಯ ಕ್ಷೀಣಿಸಿದೆ. ನಾನು ಇನ್ನೂ ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಈ ಪರಿಸ್ಥಿತಿಯಲ್ಲಿ ಶಾಸಕನಾಗಿ ಕೆಲಸ ಮಾಡುವುದು ಸಾಧ್ಯವಾಗದು ಎಂದು ಭಾವಿಸಿದ್ದೇನೆ. ಹೀಗಾಗಿ ಚುನಾವಣಾ ರಾಜಕಾರಣದಿಂದ ನಿವೃತ್ತಿ ಪಡೆಯಲು ಅವಕಾಶ ಕೊಡಿ ಎಂದು ಎಐಸಿಸಿ ಮತ್ತು ಕೆಪಿಸಿಸಿ ವರಿಷ್ಠರಿಗೆ ಕಳೆದ ಡಿಸೆಂಬರ್‌ನಲ್ಲೇ ಲಿಖಿತ ಮನವಿ ಸಲ್ಲಿಸಿದ್ದೇನೆ. ಆದರೆ ವರಿಷ್ಠರು ಚುನಾವಣೆಯಲ್ಲಿ ಸ್ಪರ್ಧಿಸಲೇಬೇಕು ಎಂದು ಒತ್ತಡ ಹೇರುತ್ತಿದ್ದಾರೆ. ನಾನು ಚುನಾವಣಾ ರಾಜಕಾರಣದಿಂದ ಮಾತ್ರ ನಿವೃತ್ತಿ ಹೊಂದಲಿದ್ದು, ಜೀವನದ ಕೊನೆವರೆಗೂ ಕಾಂಗ್ರೆಸ್ಸಿಗನಾಗೇ ಇರುತ್ತೇನೆ. ಈ ವಿಚಾರವನ್ನೂ ಕೂಡ ವರಿಷ್ಠರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದೇನೆ. ಈವರೆಗೂ ವರಿಷ್ಠರು ನನ್ನ ಸ್ಪರ್ಧೆ ವಿಚಾರದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳದೇ ನನ್ನನ್ನೇ ಸ್ಪರ್ಧಿಸುವಂತೆ ಹೇಳುತ್ತಿದ್ದಾರೆ. ಮುಂದೆ ಏನಾಗುತ್ತದೋ ನೋಡೋಣ. ಕಾರ್ಯಕರ್ತರ ಒತ್ತಡದಿಂದಾಗಿ ಟಿಕೆಟ್‌ಗಾಗಿ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದೆ. ನಾನು ಕಾಂಗ್ರೆಸ್‌ನ ಹಾಲಿ ಶಾಸಕನಾಗಿದ್ದು, ಟಿಕೆಟ್‌ಗೆ ಅರ್ಜಿ ಸಲ್ಲಿಸದಿದ್ದರೆ ತಪ್ಪು ಸಂದೇಶ ರವಾನೆಯಾಗುತ್ತದೆ ಎಂಬ ಕಾರಣಕ್ಕಾಗಿ ಅರ್ಜಿ ಸಲ್ಲಿಸಿದ್ದೇನೆ. ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂಬುದು ನನ್ನ ಅಚಲ ನಿರ್ಧಾರವಾಗಿದ್ದು, ನಿಷ್ಠಾವಂತ ಕಾಂಗ್ರೆಸ್ಸಿಗನಾಗಿದ್ದು, ವರಿಷ್ಠರ ಸೂಚನೆಗಾಗಿ ಕಾಯುತ್ತಿದ್ದೇನೆ. ಇನ್ನು ನಮ್ಮ ಕುಟುಂಬದಿಂದ ಯಾರೂ ಚುನಾವಣಾ ರಾಜಕಾರಣಕ್ಕೆ ಬರುವಂತಹ ವಾತಾವರಣ ಈಗ ಇಲ್ಲ. ಹೀಗಾಗಿ ಕುಟುಂಬದವರಿಗೆ ಅವಕಾಶ ಕೊಡಿ ಎಂದು ನಾನು ಕೇಳಿಲ್ಲ, ಕೇಳುವುದೂ ಇಲ್ಲ. ವರಿಷ್ಠರು ಯಾರಿಗೆ ಟಿಕೆಟ್ ನೀಡಿದರೂ ಅವರ ಗೆಲುವಿಗಾಗಿ ಶ್ರಮಿಸುತ್ತೇನೆ.
>
> – ತನ್ವೀರ್ ಸೇಠ್, ಎನ್.ಆರ್.ಕ್ಷೇತ್ರದ ಶಾಸಕ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಟೋಲ್ ಸಂಗ್ರಹ ಮುಂದೂಡಿಕೆಗೆ ಸಂಸದ ಪ್ರತಾಪ್‌ಸಿಂಹ ಮನವಿ



ಮೈಸೂರು, ಫೆ.27–ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಮೊದಲ ಹಂತದ ಟೋಲ್ ಸಂಗ್ರಹ ಮುಂದೂಡುವಂತೆ ತಾವು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಮನವಿ ಮಾಡಿರುವುದಾಗಿ ಸಂಸದ ಪ್ರತಾಪ್ ಸಿಂಹ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಇದಕ್ಕೂ ಮುನ್ನ ಅವರು ತಮ್ಮ ಫೇಸ್ ಬುಕ್ ಖಾತೆಯಲ್ಲಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸೇವಾ ರಸ್ತೆಗಳ ಕಾಮಗಾರಿ ಪೂರ್ಣಗೊಳ್ಳುವವರೆಗೂ ಟೋಲ್ ಪಡೆಯುವುದಿಲ್ಲ ಎಂದು ಹೇಳಿದ್ದರು. ಮಾರ್ಚ್ 15ರ ನಂತರ ಟೋಲ್ ಸಂಗ್ರಹಿಸಲು ಉದ್ದೇಶಿಸಲಾಗಿದೆ. ಸರ್ವೀಸ್ ರಸ್ತೆ ಕಾಮಗಾರಿ ಪೂರ್ಣಗೊಳ್ಳುವವರೆಗೆ ದ್ವಿಚಕ್ರ ವಾಹನ ಹಾಗೂ ತ್ರಿಚಕ್ರ ವಾಹನಗಳಿಗೆ ಎಕ್ಸ್‌ಪ್ರೆಸ್ ವೇನಲ್ಲಿ ಅವಕಾಶವಿರಲಿದೆ. ಸರ್ವೀಸ್ ರಸ್ತೆ ಪೂರ್ಣಗೊಂಡ ಬಳಿಕ ಅಪಘಾತ ಮುಕ್ತ ರಸ್ತೆಯನ್ನಾಗಿಸುವ ಉದ್ದೇಶದಿಂದಾಗಿ

▶ 8ನೇ ಪುಟಕ್ಕೆ

ಕೆ.ಆರ್.ನಗರ ರವಿಶಂಕರ್, ಹುಣಸೂರು ಮಂಜುನಾಥ್, ಕೋಟೆ ಅನಿಲ್ ಚಿಕ್ಕಮಾದು, ನರಸೀಪುರ ಬೋಸ್ ಹೆಸರು ಅಂತಿಮ?



ರವಿಶಂಕರ್



ಹೆಚ್.ಪಿ.ಮಂಜುನಾಥ್



ಅನಿಲ್



ಸುನೀಲ್ ಬೋಸ್

- ಕೆ.ಆರ್.ನಲ್ಲಿ ಎಂ.ಕೆ.ಸೋಮಶೇಖರ್ ಜೊತೆ ರಾಜೀವ್, ಪ್ರದೀಪ್‌ಕುಮಾರ್ ಹೆಸರು ಪ್ರಸ್ತಾಪ
- ಚಾಮುಂಡೇಶ್ವರಿಯಲ್ಲಿ ಮಾವಿನಹಳ್ಳಿ ಸಿದ್ದೇಗೌಡರಿಗೆ 'ಕೈ' ಟಿಕೆಟ್ ಸಾಧ್ಯತೆ
- ಮಂಡ್ಯ ಜಿಲ್ಲೆಯಲ್ಲಿ ಹಳಬರು, ಹೊಸಬರ ಹೆಸರು ಚಲಾವಣೆ

ಬೆಂಗಳೂರು, ಫೆ.27(ಕೆಎಂಶಿ)– ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಸಂಪೂರ್ಣವಾಗಿ ಸಜ್ಜಾಗುತ್ತಿದ್ದು, ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆಗೆ ಸಿದ್ಧತೆಗಳು ನಡೆದಿವೆ. ಈಗಾಗಲೇ ಹಲವಾರು ಕ್ಷೇತ್ರಗಳ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗಿದೆ ಎಂದು ಬಲ್ಲ ಮೂಲಗಳು ತಿಳಿಸಿವೆ. ಮೈಸೂರು ಜಿಲ್ಲೆಯ ಕೆ.ಆರ್. ನಗರ ಕ್ಷೇತ್ರದಲ್ಲಿ ಕಳೆದ ಚುನಾವಣೆಯಲ್ಲಿ ಪರಾಭವಗೊಂಡಿದ್ದ ರವಿಶಂಕರ್ ಅವರ ಹೆಸರನ್ನೇ ಅಂತಿಮಗೊಳಿಸಲಾಗಿದೆ. ಹುಣಸೂರಿನಲ್ಲಿ ಹಾಲಿ ಶಾಸಕ ಹೆಚ್.ಪಿ. ಮಂಜುನಾಥ್, ಹೆಚ್.ಡಿ.ಕೋಟೆಗೆ ಹಾಲಿ ಶಾಸಕ ಅನಿಲ್‌ಚಿಕ್ಕಮಾದು ಹೆಸರು ಅಂತಿಮಗೊಂಡಿದ್ದು, ತಿ.ನರಸೀಪುರ ಕ್ಷೇತ್ರದಲ್ಲಿ ತಮ್ಮ ಪುತ್ರ ಸುನೀಲ್ ಬೋಸ್‌ಗೆ ಟಿಕೆಟ್ ಕೊಡಿಸುವಲ್ಲಿ ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಯಶಸ್ವಿಯಾಗಿದ್ದಾರೆನ್ನಲಾಗಿದೆ. ಆದರೆ ಅವರು ನಂಜನಗೂಡಿನ ಟಿಕೆಟ್ ಪಡೆಯಲು ಪ್ರಯತ್ನಿಸುತ್ತಿದ್ದು, ಇವರಿಗೆ ಮಾಜಿ ಸಂಸದ ಆರ್.ಧ್ರುವನಾರಾಯಣ್ ಪ್ರಬಲ ಪೈಪೋಟಿ ನೀಡುತ್ತಿದ್ದಾರೆ. ಈ ಕ್ಷೇತ್ರದ ಟಿಕೆಟ್ ಅಂತಿಮಗೊಳಿಸುವುದು ವರಿಷ್ಠರಿಗೆ ತಲೆನೋವಾಗಿ ಪರಿಣಮಿಸಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹಾಲಿ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡರಿಗೆ ಈ ಹಿಂದೆ ಪರಮಾಪ್ತರಾಗಿದ್ದ ಮಾವಿನಹಳ್ಳಿ ಸಿದ್ದೇಗೌಡ ಕಾಂಗ್ರೆಸ್ ಸೇರ್ಪಡೆಯಾಗಿದ್ದು, ಪ್ರತಿಷ್ಠಿತ ಚಾಮುಂಡೇಶ್ವರಿ ಕ್ಷೇತ್ರದ ಟಿಕೆಟ್ ಅನ್ನು ಮಾವಿನಹಳ್ಳಿ ಸಿದ್ದೇಗೌಡರಿಗೆ ಕೊಡಿಸುವಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಯಶಸ್ವಿಯಾಗಿದ್ದಾರೆ ಎಂದು ಹೇಳಲಾಗುತ್ತಿದೆ.

▶ 8ನೇ ಪುಟಕ್ಕೆ

ವಿಧಾನಸಭಾ ಚುನಾವಣಾ ಪೂರ್ವ ಸಮೀಕ್ಷೆಗೆ ಮೈಸೂರಿಗೆ ಬಂದ ಮುಂಬೈ ಖಾಸಗಿ ಕಂಪನಿ ಉದ್ಯೋಗಿ ನಾಪತ್ತೆ



ಮೈಸೂರು, ಫೆ. 27– ರಾಷ್ಟ್ರೀಯ ಸುದ್ದಿವಾಹಿನಿಗಳಿಗೆ ಕರ್ನಾಟಕ ವಿಧಾನಸಭೆಯ ಚುನಾವಣಾ ಪೂರ್ವ ಸಮೀಕ್ಷೆ ನಡೆಸಲು ಬಂದಿದ್ದ ಮುಂಬೈ ಮೂಲದ ಖಾಸಗಿ ಕಂಪನಿಯೊಂದರ ಉದ್ಯೋಗಿ ಮೈಸೂರಿನಲ್ಲಿ ನಿಗೂಢವಾಗಿ ನಾಪತ್ತೆಯಾಗಿದ್ದಾರೆ. ಮುಂಬೈನಲ್ಲಿರುವ 'ಆಕ್ಸಿಸ್ ಮೈ ಇಂಡಿಯಾ' ಎಂಬ ಖಾಸಗಿ ಸಮೀಕ್ಷಾ ಕಂಪನಿಯು ತನ್ನ ಬೆಂಗಳೂರು ಶಾಖೆ ಮೂಲಕ ಕರ್ನಾಟಕ ವಿಧಾನಸಭಾ ಚುನಾವಣಾ ಪೂರ್ವ ಸಮೀಕ್ಷೆ ನಡೆಸುತ್ತಿದೆ. ಶಿವರಾಜ್ ಎಂಬುವರ ನೇತೃತ್ವದಲ್ಲಿ 6 ಮಂದಿಯ ತಂಡ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳ ಸಮೀಕ್ಷೆಗಾಗಿ ಬಂದಿದ್ದು, ಈ ತಂಡದ ಮುಖ್ಯಸ್ಥ ಶಿವರಾಜ್(28) ಫೆ. 26ರಂದು ಬೆಳಗ್ಗೆಯಿಂದ ನಿಗೂಢವಾಗಿ ನಾಪತ್ತೆಯಾಗಿದ್ದಾರೆ. ಶಿವರಾಜ್ ನೇತೃತ್ವದಲ್ಲಿ ಆನಂದಕುಮಾರ್, ಪಿ.ಎಸ್. ಮಲ್ಲಿಕಾರ್ಜುನ, ಮಂಜುನಾಥ ಬೀರಪ್ಪ ಗೋಡೆ, ಗಿರೀಶ್ ನಾಯಕ್, ಮಂಜುನಾಥ್ ಹಡಪದ್ ಅವರನ್ನೊಳಗೊಂಡ ತಂಡ ಫೆಬ್ರವರಿ 24ರಂದು ರಾತ್ರಿ ಮೈಸೂರಿಗೆ ಆಗಮಿಸಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಇರುವ ನಂದಿನಿ ಲಾಡ್ಜ್‌ನಲ್ಲಿ ವಾಸ್ತವ್ಯ ಹೂಡಿತ್ತು. ಈ ತಂಡವು ಫೆ. 25ರಂದು ಚಾಮರಾಜ ಮತ್ತು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಗಳ ಸಮೀಕ್ಷೆ ನಡೆಸಿತ್ತು.

▶ 6ನೇ ಪುಟಕ್ಕೆ

ಈಗ ವಿಶ್ವವಿದ್ಯಾನಿಲಯಗಳೆಂದರೆ ಹಾಸ್ಯಾಸ್ಪದ ಎನ್ನುವಂತಾಗಿದೆ

- ಸಂಸದ ವಿ.ಶ್ರೀನಿವಾಸ ಪ್ರಸಾದ್ ವಿಷಾದ
- ಮಹಾರಾಜ ಕಾಲೇಜಿನ ಪ್ರೊ.ಬಿ.ಎನ್.ಯಶೋಧ, ಡಾ.ಜಿ.ಹೆಚ್.ನಾಗರಾಜ್ ಅವರಿಗೆ ಅಭಿನಂದನೆ

ಮೈಸೂರು,ಫೆ.27(ಪಿಎಂ)– ವಿಶ್ವವಿದ್ಯಾನಿಲಯಗಳು ಎಂದರೆ ಇಂದು ಹಾಸ್ಯಾಸ್ಪದ ಎನ್ನುವಂತಾಗಿದೆ. ಅವುಗಳಿಗೆ ಬೆಲೆಯೇ ಇಲ್ಲವೇನೋ ಎನ್ನುವಂತಹ ಸನ್ನಿವೇಶ ನಿರ್ಮಾಣವಾಗಿದೆ ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ವಿಷಾದಿಸಿದರು.

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಹಾಗೂ ಅಭಿನಂದನಾ ಸಮಿತಿ, ಸಂಶೋಧನಾ ವಿದ್ಯಾರ್ಥಿಗಳ ಸಂಯುಕ್ತಾಶ್ರಯದಲ್ಲಿ ಮಹಾರಾಜ ಕಾಲೇಜು ಪ್ರಾಂಶುಪಾಲರಾದ ಪ್ರೊ.ಬಿ.ಎನ್. ಯಶೋಧ ಮತ್ತು ಆಡಳಿತಾಧಿಕಾರಿ ಡಾ.ಜಿ.ಹೆಚ್.ನಾಗರಾಜ್ ಅವರಿಗೆ 'ಸಾರ್ಥಕ ಸಾಧಕರಿಗೆ ಬೀಳ್ಕೊಡುಗೆ' ಶೀರ್ಷಿಕೆಯಡಿ ಸೋಮವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿಶ್ವವಿದ್ಯಾನಿಲಯಗಳಲ್ಲಿ ಬೋಧಕರು, ಬೋಧಕೇತರ ನೇಮಕಾತಿಯಲ್ಲಿ ಬಹಳಷ್ಟು ಅಧಿಕಾರ ದುರುಪಯೋಗವಾಗುತ್ತಿದೆ. ಆರ್ಥಿಕ ಸಂಪನ್ಮೂಲ ಕ್ರೋಢೀಕರಣವಿಲ್ಲದೆ ಸಂಗೀತ ವಿವಿಯಲ್ಲಿ ನೇಮಕಾತಿ ಆಗಿದ್ದವರನ್ನು ಕೈಬಿಟ್ಟರು. ವಿಶ್ವ ಮಟ್ಟದಲ್ಲಿ ಸ್ಪರ್ಧೆ ಮಾಡುವ ಒಂದು ವಿಶ್ವವಿದ್ಯಾನಿಲಯ ಕೂಡ ದೇಶದಲ್ಲಿ ಇಲ್ಲ. ಹಾಗಾಗಿ ಸರ್ಕಾರ ಸಾಕಷ್ಟು ಅವಲೋಕಿಸಿ ನಮ್ಮ ವಿವಿಗಳು ಅಂತಾರಾಷ್ಟ್ರೀಯ ಮಟ್ಟದ ಗುಣಮಟ್ಟ ಹೊಂದಬೇಕೆಂಬ ನಿಟ್ಟಿನಲ್ಲಿ ಅನೇಕ ಬದಲಾವಣೆ ತರಲು ಮುಂದಾಗಿದೆ ಎಂದು ತಿಳಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯಿಂದ ಮೈಸೂರು ವಿವಿ ರಾಜ್ಯದಲ್ಲಿ ಪ್ರಪ್ರಥಮವಾಗಿ ಆರಂಭಗೊಂಡಿತು. ಮೈಸೂರು ವಿವಿ ಅತ್ಯಂತ ಪ್ರತಿಷ್ಠೆ ಹೊಂದಿದೆ. ನಾನೂ ಇದೇ ವಿವಿ ವಿದ್ಯಾರ್ಥಿ. ಆದರೆ ವಿಶ್ವವಿದ್ಯಾನಿಲಯದ ಅಂದಿನ ಪ್ರತಿಷ್ಠೆ ಇಂದು ಉಳಿದಿದೆಯೇ? ಎಂಬ ಪ್ರಶ್ನೆ ಕಾಡುವಂತಾಗಿದೆ. ಇದೊಂದೇ ವಿವಿಯಲ್ಲ, ಬೇರೆಲ್ಲಾ ವಿವಿಗಳ ವಿಚಾರದಲ್ಲೂ ಇದೇ ಪ್ರಶ್ನೆ ಮುನ್ನೆಲೆಗೆ ಬರುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸರ್ಕಾರ ಉನ್ನತ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದೆ. ವಿವಿಗಳಲ್ಲಿ ಆಳವಾದ ಅಧ್ಯಯನ, ಸಂಶೋಧನೆ ನಡೆಯಬೇಕೆಂಬ ಆಶಯ ಹೊಂದಿದೆ. ಈ ಹಿನ್ನೆಲೆಯಲ್ಲಿ ಯುಜಿಸಿ ಪ್ರತಿ ಜಿಲ್ಲೆಗೊಂದು ವಿವಿ ಇರಬೇಕೆಂಬ ಮಾನದಂಡ ರೂಪಿಸಿದೆ. ಹಾಗಾಗಿ ರಾಜ್ಯದಲ್ಲಿ 7 ಹೊಸ ವಿವಿಗಳ ಸ್ಥಾಪನೆಗೆ ಸರ್ಕಾರ ಮುಂದಾಗಿದೆ. ನಾವು ಓದುವಾಗ ವಿವಿಗಳ ವ್ಯವಸ್ಥೆ ಉತ್ತಮವಾಗಿತ್ತು. ನೀತಿ ನಿಯಮಾವಳಿಗಳ ಪಾಲನೆ ಆಗುತ್ತಿತ್ತು. ಆದರೆ ಇಂದು ಸಿಂಡಿಕೇಟ್ ಸಭೆಗಳಲ್ಲಿ ಏನು ಚರ್ಚೆ ನಡೆಯುತ್ತವೆ ಎಂದೇ ಗೊತ್ತಾಗದ ಸನ್ನಿವೇಶವಿದೆ ಎಂದರು.

ಇತಿಮಿತಿ ಇರಲಿ: ಚಳವಳಿ, ಪ್ರತಿಭಟನೆಗಳಲ್ಲಿ ಸಂಶೋಧನಾ ವಿದ್ಯಾರ್ಥಿಗಳು ಇತಿಮಿತಿ ಕಾಯ್ದುಕೊಳ್ಳಬೇಕು. ಅನಗತ್ಯವಾಗಿ ಆಡಳಿತದಲ್ಲಿ

▶ 6ನೇ ಪುಟಕ್ಕೆ



ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಸೋಮವಾರ ಮಹಾರಾಜ ಕಾಲೇಜಿನ ಪ್ರೊ.ಬಿ.ಎನ್.ಯಶೋಧ ಮತ್ತು ಡಾ.ಜಿ.ಹೆಚ್.ನಾಗರಾಜ್ ಅವರನ್ನು ಅಭಿನಂದಿಸಲಾಯಿತು.

ಸುದೀರ್ಘ ರಾಜಕೀಯ ಪಯಣದ ಬಗ್ಗೆ 'ನೆನಪುಗಳು' ಪುಸ್ತಕ ರಚನೆ

ಮೈಸೂರು,ಫೆ.27(ಪಿಎಂ)– ನನ್ನ 50 ವರ್ಷಗಳ ಸುದೀರ್ಘ ರಾಜಕೀಯ ಪಯಣದ ಬಗ್ಗೆ 'ನೆನಪುಗಳು' ಶೀರ್ಷಿಕೆಯಡಿ ಪುಸ್ತಕ ಬರೆಯುತ್ತಿದ್ದೇನೆ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ತಿಳಿಸಿದರು. ಇನ್ನು ಒಂದು ವರ್ಷ, ನಾಲ್ಕು ತಿಂಗಳು ನನ್ನ ಸಂಸದ ಸ್ಥಾನದ ಅವಧಿ ಮುಗಿದರೆ, ನನ್ನ ಚುನಾವಣಾ ರಾಜಕಾರಣಕ್ಕೆ 50 ವರ್ಷಗಳಾಗಲಿವೆ. ನೀವು ನಂಬುತ್ತೀರೋ ಇಲ್ಲವೋ ಈ ಸುದೀರ್ಘ ಅವಧಿಯಲ್ಲಿ ಯುವ ಜನರು, ವಿದ್ಯಾರ್ಥಿಗಳ ಕಾರ್ಯಕ್ರಮದಲ್ಲಿ ಸತತವಾಗಿ ಭಾಗವಹಿಸಿದ್ದೇನೆ. ರಾಜ್ಯದ ಎಲ್ಲಾ

▶ 8ನೇ ಪುಟಕ್ಕೆ

ಬಳಕೆಯಲ್ಲಿದ್ದರೆ ಮಾತ್ರವೇ ಭಾಷೆಯ ಉಳಿವು

● ವಿಶ್ರಾಂತ ಕುಲಪತಿ ಡಾ. ಚಿದಾನಂದಗೌಡರ ಕಿವಿಮಾತು
● 'ಇ-ಕನ್ನಡ ಕಮ್ಮಟ-2023' ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದಂತೆ ಗಂಭೀರ ವಿಚಾರ-ವಿನಿಮಯ

ಮೈಸೂರು, ಫೆ.27(ಎಂಟಿವೈ)- ಭಾಷಾ ಬಳಕೆ ಕ್ಷೀಣಿಸಿದರೆ ಸಂಸ್ಕೃತಕ್ಕೆ ಬಂದ ಸ್ಥಿತಿ ಕನ್ನಡ ಭಾಷೆಗೂ ಒದಗಿ ಬರುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ ವಿಷಾದಿಸಿದ್ದಾರೆ.

ಮೈಸೂರಿನ ಆಡಳಿತ ತರಬೇತಿ ಸಂಸ್ಥೆ (ಎಟಿಐ) ಸಭಾಂಗಣದಲ್ಲಿ ಸೋಮವಾರ ನಡೆದ 'ಇ-ಕನ್ನಡ ಕಮ್ಮಟ-2023'ಅನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಳಕೆಯಿಂದಲೇ ಭಾಷೆಗಳ ಉಳಿವು ಅವಲಂಬಿತವಾಗಿರುತ್ತದೆ. ಹೆಚ್ಚು ಹೆಚ್ಚಾಗಿ ಭಾಷೆ ಬಳಸಿದಂತೆ ಅದು ಇನ್ನಷ್ಟು ಗಟ್ಟಿಗೊಳ್ಳುತ್ತಾ ಸಾಗುತ್ತದೆ. ಭಾಷೆಯನ್ನೇ ಬಳಸದಿದ್ದರೆ, ಅದರ ರಕ್ಷಣೆ ಹೇಗೆ ಸಾಧ್ಯ. ಸಂಸ್ಕೃತ ಬಳಕೆ ಕ್ಷೀಣಿಸಿದ್ದರಿಂದಲೇ ಆ ಭಾಷೆಯ ಸ್ಥಿತಿ ಹೇಗಿದೆ ಎಂದು ಅವಲೋಕಿಸಬೇಕು. ಸಂಸ್ಕೃತದಂತೆ ಕನ್ನಡ ಭಾಷೆಗೂ ಅವನತಿಯ ಸ್ಥಿತಿ ಒದಗಿ ಬರದಂತೆ ನೋಡಿಕೊಳ್ಳಬೇಕಾದ ಕರ್ತವ್ಯ ಎಲ್ಲರದ್ದಾಗಿದೆ. ಈ ಕುರಿತು ಪೂರ್ಣಚಂದ್ರ ತೇಜಸ್ವಿ ಹಿಂದೆಯೇ ಎಚ್ಚರಿಸಿದ್ದರು. ಅದನ್ನು ನಿರ್ಲಕ್ಷಿಸಬಾರದು ಎಂದರು.

ಕನ್ನಡ ಭಾಷೆ, ಕನ್ನಡಿಗರು ಮತ್ತು ತಂತ್ರಾಂಶಗಳು ಒಟ್ಟಾಗಿ ಸಾಗಿದಾಗ ಮಾತ್ರ ಕನ್ನಡದ ಬೆಳವಣಿಗೆ ಸಾಧ್ಯವಾಗುತ್ತದೆ. ಇಂದು ತಂತ್ರಾಂಶಗಳು ವೇಗವಾಗಿ ಸಾಗುತ್ತಿವೆ. ಅವುಗಳ ಮೂಲಕ ಕನ್ನಡ ಬಳಸುವ ಕೆಲಸವು ಹೆಚ್ಚಾಗಬೇಕು. ಒಂದು ಭಾಷೆಯ ಅಳಿವು-ಉಳಿವು ಅದರ ಬಳಕೆಯ ಮೇಲೆ ಅವಲಂಬಿತವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಪುಸ್ತಕ ಕೊಡುಗೆ ನೀಡುವುದು ಸೂಕ್ತ: ಪುಸ್ತಕ ಓದುವ ಹವ್ಯಾಸವನ್ನು ಹೆಚ್ಚಿಸಿಕೊಳ್ಳಬೇಕು. ಸಭೆ, ಸಮಾರಂಭ, ವಿವಾಹ ಸೇರಿದಂತೆ ಕೆಲವು ಕಾರ್ಯಕ್ರಮಗಳಲ್ಲಿ ಉಡುಗೊರೆಯಾಗಿ ಪುಸ್ತಕ ನೀಡುವುದು ಒಳ್ಳೆ ಹವ್ಯಾಸ ಅದಕ್ಕಾಗಿಯೇ ನಾನು ವಿವಾಹಕ್ಕೆ ಹೋದಾಗ ವಧು-ವರರಿಗೆ ಪುಸ್ತಕವನ್ನೇ ಉಡುಗೊರೆ ನೀಡುತ್ತೇನೆ ಎಂದರು.



ಇತ್ತೀಚಿನ ದಿನಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನವಾದ ಬ್ಲಾಕ್‌ಚೈನ್ ಬಳಕೆ ಹೆಚ್ಚಾಗಿದೆ. ಹಲವು ರಾಷ್ಟ್ರಗಳು ಈ ತಂತ್ರಜ್ಞಾನವನ್ನು ಬಳಸುತ್ತಿವೆ. ಇದು ಮೌಲ್ಯಾಧಾರಿತ ತಂತ್ರಜ್ಞಾನವಾಗಿದೆ. ಕೆಲವೊಮ್ಮೆ ಇಂಟರ್‌ನೆಟ್ ಆಧಾರಿತ ವೆಬ್‌ನಲ್ಲಿ ಇರುವ ಮಾಹಿತಿ ನಂಬಿಕೆಗೆ ಅರ್ಹವೂ ಹಾಗೂ ಅನರ್ಹವಾಗಿ ಆಗಿರಬಹುದು. ಆದರೆ, ಬ್ಲಾಕ್ ಚೈನ್ ತಂತ್ರಜ್ಞಾನ ನಂಬಿಕೆ ಗಳಿಸಿದೆ ಎಂದರು.

ಇ-ಯೋಜನೆ ಉಪಯುಕ್ತಕಾರಿ: ಇದಕ್ಕೂ ಮುನ್ನ ಇ-ಆಡಳಿತ ಕೇಂದ್ರದ ಇ-ಕನ್ನಡ ಯೋಜನೆಯ ಯೋಜನಾ ನಿರ್ದೇಶಕ ಎಚ್.ಎಲ್.ಪ್ರಭಾಕರ್ ಮಾತನಾಡಿ, ತಾಂತ್ರಿಕ ಸಿಬ್ಬಂದಿಯು ಕನ್ನಡಕ್ಕೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದರು. ಆದರೆ ಇದಕ್ಕೆ ಯಾವುದೇ ಚೌಕಟ್ಟು ಇರುತ್ತಿರಲಿಲ್ಲ. ಚೌಕಟ್ಟು ನೀಡಲು ಮತ್ತು ಸಮುದಾಯದಲ್ಲಿ ವ್ಯವಸ್ಥಿತವಾಗಿ ತೆಗೆದುಕೊಂಡು ಹೋಗಲೆಂದು ಇ- ಯೋಜನೆಯನ್ನು ಆರಂಭಿಸಲಾಗಿದೆ. ಕನ್ನಡಕ್ಕೆ ಸಂಬಂಧಿಸಿದ ಎಲ್ಲ ತಂತ್ರಾಂಶಗಳನ್ನೂ ಚೌಕಟ್ಟಿನೊಳಗೆ ತರಲು ಉದ್ದೇಶಿಸಲಾಗಿದೆ. ಆಡಳಿತ ಹಾಗೂ ಈಗಿನ ಇ (ವಿದ್ಯುನ್ಮಾನ) ಜಗತ್ತಿನಲ್ಲಿ ಕನ್ನಡ ಹೇಗಿರಬೇಕು ಎನ್ನುವುದರ ವರದಿಯನ್ನು ಕಮ್ಮಟದಲ್ಲಿ ಸಿದ್ಧಪಡಿಸಲಾಗುತ್ತದೆ ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ಸಲಹೆಗಾರ (ಇ-ಆಡಳಿತ) ಬೇಳೂರು ಸುದರ್ಶನ ಮಾತನಾಡಿ, ಸಮುದಾಯದೊಂದಿಗೆ ಸೇರಿ ತಂತ್ರಾಂಶದ ಕೆಲಸಗಳನ್ನು ಮಾಡಿದಾಗ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಇದಕ್ಕಾಗಿ ಜ್ಞಾನ ಹಾಗೂ ತಂತ್ರಜ್ಞಾನ ಒಟ್ಟಿಗೆ ಹೋಗಬೇಕು. ಮಾನದಂಡದಲ್ಲಿ ಏಕರೂಪತೆ ತರಬೇಕಾಗುತ್ತದೆ. ಆಗ ಅದು ಜನರಿಗೆ ಸುಲಭವಾಗಿ ಅರ್ಥವಾಗುತ್ತದೆ. ಇಷ್ಟು ವರ್ಷ ಪ್ರಯತ್ನಪಟ್ಟರೂ ನಾವಿನ್ನೂ ಆರಂಭಿಕ ಹಂತದ ಚಟುವಟಿಕೆಗಳಲ್ಲೇ ಕಾಲ ಕಳೆಯುತ್ತಿದ್ದೇವೆ. ಇನ್ನೂ ಹೆಚ್ಚಿನ ಕೆಲಸಗಳು ನಡೆಯಬೇಕಿದೆ. ಡಿಜಿಟಲ್ ವೇದಿಕೆಯಲ್ಲಿ ಕನ್ನಡವನ್ನು ಸರಿಯಾಗಿ ಬಳಸುವಂತಾಗಬೇಕು. ಇ-ಬುಕ್‌ಗಳು ಹೆಚ್ಚಾಗುತ್ತಿದ್ದು, ಭಾಷೆ- ಬರವಣಿಗೆಗೆ ಸಂಬಂಧಿಸಿದ ಕೆಲಸಗಳನ್ನು ಪ್ರಕಾಶಕರ ಜೊತೆಗೂಡಿ ಮಾಡಬೇಕಾಗುತ್ತದೆ. ದೃಷ್ಟಿದೋಷವುಳ್ಳವರು ಸೇರಿದಂತೆ ಎಲ್ಲ ವರ್ಗದವರಿಗೂ ತಂತ್ರಾಂಶಗಳು ಲಭ್ಯವಾಗುವಂತೆ ಇರಬೇಕು. ಈ ನಿಟ್ಟಿನಲ್ಲಿ ಕನಿಷ್ಠ ಐದು ವರ್ಷಗಳ ದಿಕ್ಸೂಚಿಯನ್ನು ರೂಪಿಸುವುದು ನಮ್ಮ ಉದ್ದೇಶವಾಗಿದೆ. ಅದನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದರು.

ಭಾಷಾಂತರ ನಿರ್ದೇಶನಾಲಯದ ನಿರ್ದೇಶಕ ಎಂ.ವೆಂಕಟೇಶ್ ಮಾತನಾಡಿ, ನಮ್ಮಲ್ಲಿ ಕನ್ನಡವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಪರಿಪೂರ್ಣ ಇಲಾಖೆ ಇಲ್ಲದಿರುವುದು ದುರಂತ. ಕೆಲಸಗಳಾಗುತ್ತಿವೆಯಾದರೂ ಒಂದೇ ಸೂರಿನಲ್ಲಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಆದರೆ, ಇತ್ತೀಚೆಗೆ ಕನ್ನಡ ಭಾಷೆ ಅಧಿಕೃತವಾಗಿ ಎಲ್ಲ ಹಂತದಲ್ಲೂ ಅನುಷ್ಠಾನಗೊಳಿಸುವ ಕನ್ನಡ ಸಮಗ್ರ ಭಾಷಾ ಅಭಿವೃದ್ಧಿ ವಿಧೇಯಕಕ್ಕೆ ಅನುಮೋದನೆ ದೊರೆತಿರುವುದು ಬಲ ನೀಡಿದಂತಾಗಿದೆ. ಇದು ಕನ್ನಡ ಭಾಷೆಯ ಸಮಗ್ರ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್ ಮಾತನಾಡಿ, ಗ್ರಾಮೀಣ ಭಾಗದ ಬ್ಯಾಂಕ್‌ಗಳಲ್ಲೂ ಕನ್ನಡ ಮಾತನಾಡುವ ಸಿಬ್ಬಂದಿ ಇಲ್ಲದಿರುವುದನ್ನು ಗಮನಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಕನ್ನಡ ಸಮಗ್ರ ಭಾಷಾ ಅಭಿವೃದ್ಧಿ ವಿಧೇಯಕ ಕನ್ನಡಕ್ಕೆ ಕಾನೂನಿನ ಬಲ ನೀಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.2.2023 ಮಂಗಳವಾರ, ಮಳೆ ನಕ್ಷತ್ರ: ಶತಭಿಷ, 19.02.2023ರಿಂದ 04.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ರೋಹಿಣಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯ್ಡಿಸವ್, ಪುರುಷರಲ್ಲಿ ಬಂಜೆತನ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ.

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ ಚಂದ್ರ ಮಂಡಲಾರೋಹಣ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೇಪೇಟೆ, ಬೆಳಗ್ಗೆಯಿಂದ.

■ **ಶ್ರೀ ದಿಗಂಬರ ಜೈನ ಸಮಾಜ ಮತ್ತು ಪದ್ಮಶ್ರೀ ಜೈನ ಮಹಿಳಾ ಸಮಾಜ:** ಫಾಲ್ಗುಣ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಶ್ರೀಮತಿ ಸುಮಾ ಪ್ರಸಾದ್ ಅವರಿಂದ ಗಾಥ : 401 ರಿಂದ 425 ಪ್ರವಚನ, ಸ್ಥಳ: ಶ್ರೀ ಶಾಂತೀಶ್ವರ ಸ್ವಾಮಿ ಬಸದಿ (ಕೋಟೆ ಬಸದಿ), ಬೆಳಗ್ಗೆ 6 ಗಂಟೆಯಿಂದ.

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಎಸ್‌ಜೆಸಿಇ ಇಂಜಿನಿಯರಿಂಗ್ ಕಾಲೇಜು:** ಅಡ್ವಾನ್ಸ್ಡ್ ಮೆಟೀರಿಯಲ್ಸ್ ಫಾರ್ ಹೆಲ್ತ್, ಎನರ್ಜಿ ಅಂಡ್ ಎನ್‌ವಿರ್ನಾಮೆಂಟ್ ಕುರಿತು ಅಂತಾ ರಾಷ್ಟ್ರೀಯ ಸಮ್ಮೇಳನ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಡಾ.ಲೀ ಡಿ.ವಿಲ್ಸನ್, ಪ್ರಾಸ್ತಾವಿಕ ಭಾಷಣ: ಡಾ.ವಿ.ಕೆ. ಚೌರಾಶಿಯಾ, ಗೌರವ ಅತಿಥಿಗಳು: ಎನ್. ಅಶೋಕ್ ಬಾಬು, ಡಾ.ಸಬಿತಾ ಮಾಧ್ವಿಸಿಂಗ್, ಅಧ್ಯಕ್ಷತೆ: ಜೆಎಸ್‌ಎಸ್ ವಿವಿ ಕುಲಪತಿ ಡಾ. ಎ.ಎನ್. ಸಂತೋಷ್ ಕುಮಾರ್, ಸ್ಥಳ: ಐಎಸ್ ಸೆಮಿನಾರ್ ಹಾಲ್, ಗೋಲ್ಡನ್ ಜ್ಯೂಬಿಲಿ ಭವನ, ಬೆಳಗ್ಗೆ 10.30ಕ್ಕೆ.

■ **ಶ್ರೀ ಛಾಯಾದೇವಿ ಕಾಲೇಜು ಶಿಕ್ಷಣ ಸಂಸ್ಥೆ :** ರಾಷ್ಟ್ರೀಯ ವಿಜ್ಞಾನ ದಿನಾಚರಣೆ, ಉದ್ಘಾಟನೆ: ರಾಜ್ಯ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ. ಲಕ್ಷ್ಮಿನಾರಾಯಣ ಶೆಟ್ಟಿ, ಮುಖ್ಯ ಅತಿಥಿಗಳು: ಕೆ.ಎಂ.ಬಸವೇಗೌಡ, ಅಧ್ಯಕ್ಷತೆ: ಸಂಸ್ಥೆ ಅಧ್ಯಕ್ಷ ಡಾ.ಬಿ.ಬಾನುಪ್ರಕಾಶ್, ಉಪಸ್ಥಿತರು: ಡಾ. ಅಂತೋಣಿ ಪಾಲ್‌ರಾಜ್ ಸಿ., ಸ್ಥಳ:ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ನಗರ:** ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ, ಕೃಷ್ಣರಾಜ ವಿಧಾನಸಭಾ ಕ್ಷೇತ್ರ, ರಾಷ್ಟ್ರ ಧ್ವಜಾರೋಹಣ: ಶಾಸಕ ಎಸ್.ಎ.ರಾಮದಾಸ್, ನಾಡ ಧ್ವಜಾರೋಹಣ: ಮೇಯರ್ ಶಿವಕುಮಾರ್, ಪರಿಷತ್ತಿನ ಧ್ವಜಾರೋಹಣ: ನಗರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ಶಿವಕುಮಾರ್, ಉಪಸ್ಥಿತರು: ಸಹಾಯಕ ಪೊಲೀಸ್ ಆಯುಕ್ತ ಎಸ್.ಇ.ಗಂಗಾಧರಸ್ವಾಮಿ, ಸ್ಥಳ: ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಬೆಳಗ್ಗೆ 8.30ಕ್ಕೆ; ಸಮ್ಮೇಳನಾಧ್ಯಕ್ಷರ ಮೆರವಣಿಗೆ, ಮೆರವಣಿಗೆ ಚಾಲನೆ : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಖ್ಯ ಅತಿಥಿಗಳು : ಪಾಲಿಕೆ ಆಯುಕ್ತ ಲಕ್ಷ್ಮಿಕಾಂತರೆಡ್ಡಿ, ಉಪಮೇಯರ್ ಶ್ರೀಮತಿ ಜಿ. ರೂಪಾ, ಸ್ಥಳ: ಬಸವ ಪುತ್ಥಳಿ, ಜೆಎಸ್‌ಎಸ್ ಮಹಾವಿದ್ಯಾಪೀಠ ಮುಂಭಾಗ, ಬೆಳಗ್ಗೆ 9ಕ್ಕೆ; ಉದ್ಘಾಟನಾ ಸಮಾರಂಭ, ಸಾನ್ನಿಧ್ಯ: ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಆಶಯ ನುಡಿ : ಸಮ್ಮೇಳನದ ಪ್ರಧಾನ ಸಂಚಾಲಕ ಎಂ.ಚಂದ್ರಶೇಖರ್, ಉದ್ಘಾಟನೆ : ಕುವೆಂಪು ಭಾಷಾ ಭಾರತಿ ವಿಶ್ರಾಂತ ಅಧ್ಯಕ್ಷ ಡಾ. ಪ್ರಧಾನ್ ಗುರುದತ್, ಅಧ್ಯಕ್ಷತೆ: ಶಾಸಕ ಎಸ್.ಎ. ರಾಮದಾಸ್, ಅಮ್ಮಸಂದ್ರ ಸುರೇಶ್ ಅವರ ಕೃತಿ ಬಿಡುಗಡೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ: ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಪುಸ್ತಕ ಮಳಿಗೆ ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಚಿತ್ರಕಲಾ ಪ್ರದರ್ಶನ ಉದ್ಘಾಟನೆ: ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಸಮ್ಮೇಳನಾಧ್ಯಕ್ಷರ ಕುರಿತು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಮ್ಮೇಳನಾಧ್ಯಕ್ಷರ ನುಡಿ: ಹಿರಿಯ ಲೇಖಕ ಎಲ್. ಶಿವಲಿಂಗಪ್ಪ, ಮುಖ್ಯ ಅತಿಥಿಗಳು: ಕೆ. ರಘುರಾಂ ವಾಜಪೇಯಿ, ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಎಂ.ಡಿ. ಸುದರ್ಶನ್, ಪ್ರೊ. ಬಿ.ಎನ್. ಯಶೋಧ, ಪ್ರೊ. ಹೆಚ್.ಸಿ. ದೇವರಾಜೇಗೌಡ, ಪುರುಷೋತ್ತಮ್, ನಾರಾಣ್, ಗುರುಪಾದಸ್ವಾಮಿ, ಎಂ.ಪ್ರದೀಪ್ ಕುಮಾರ್, ಜಿ.ಹೆಚ್. ನಾಗರಾಜು, ಎ.ಪಿ. ನಾಗೇಶ್, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ರಾಷ್ಟ್ರೀಯ ವಿಜ್ಞಾನ ದಿನಾಚರಣೆ, ಜೈವಿಕ ತಂತ್ರಜ್ಞಾನ ಸಂಶೋಧನಾ ಪ್ರಾಧ್ಯಾಪಕ ಪ್ರೊ. ಟಿ.ಪಿ. ಸಿಂಗ್ ಅವರಿಂದ ಸೂಕ್ಷ್ಮಜೀವಿ ಸೋಂಕುಗಳ ವಿರುದ್ಧ ಸಹಜ ರೋಗ ನಿರೋಧಕ ಪ್ರೋಟಿನ್‌ಗಳ ಚಿಕಿತ್ಸಾ ಅನ್ವಯಿಕತೆ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಎಸ್.ಎನ್.ಹೆಗ್ಡೆ, ಉಪಸ್ಥಿತರು: ಮೈಸೂರು ವಿವಿ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಡೀನ್ ಪ್ರೊ. ಹೆಚ್.ಟಿ. ಬಸವರಾಜಪ್ಪ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಮುಜಾಫರ್ ಹೆಚ್. ಅಸ್ಸಾದಿ, ಸ್ಥಳ: ಕ್ರಾಫರ್ಡ್ ಭವನ, ಮೈಸೂರು ವಿವಿ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ-ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ- ಡಾ. ಟಿ.ಎಸ್. ಗೋಪಾಲ್, 6.40 ಅರಿವಿನ ಶಿಖರ- ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ- ಸಿ.ವಿಶ್ವನಾಥ್, ಕೆ.ಟಿ. ಉದಯಕಿರಣ್, ಕೆ.ಬಿ.ಸುನೀತಾ ಆಚಾರ್ಯ, ವ್ಯಾಖ್ಯಾನ- ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ-ದೂರ ಸರಿದರು ಕಾದಂಬರಿಯ ಪ್ರಸ್ತುತಿ- ಉಮೇಶ್.ಎಸ್., 8.45 ಕರೆಗೊಂದು ಗೀತೆ, 10.00 ಅವಧರಿಸು ಬಾ ಅಮರನಾರೇಯಣ-ಕಾರ್ಯಕ್ರಮ ಸರಣಿ ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ- ಟಿ.ಎಸ್. ವಸಂತಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ-ಡಾ. ಎನ್. ರಘು, 10.30 ನಮ್ಮ ಆರೋಗ್ಯ -ಕ್ಯಾನ್ಸರ್ ಜಾಗೃತಿ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು- ಪ್ರಣವ ಹೆಲ್ತ್ ಕೇರ್, ಕುವೆಂಪುನಗರ, ಮೈಸೂರು, ಭಾಗವಹಿಸುವ ತಜ್ಞರು- ಎಂ.ಎಸ್. ಗಿರೀಶ್ **ಮಧ್ಯಾಹ್ನ:** 12.30 ದೇವರನಾಮ-ವಾಣೀ ಅರವಿಂದ್, 12.45 ಮಹಾಭಾರತ ರಾಮಾಯಣಗಳ ಮರುಸೃಷ್ಟಿ- ಮಾತನಾಡುತ್ತಾರೆ ಕೃಷ್ಣ ತಿಪ್ಪೂರು, 1.20 ಭಾವಗೀತೆಗಳು- ಎಂ.ಡಿ. ವೆಂಕಟೇಶ್, ಸಿ. ವಿಶ್ವನಾಥ್, ಸ್ಟ್ಯಾನ್ಲೀ ಪಾರ್ಕರ್, 3.00 ಅದಿತಿ ಕೃಷ್ಣ ಪ್ರಕಾಶ್-ವಯೋಲಿನ್ ವಾದನ, 4.00 ಕಥಾ ಕಾಲಕ್ಷೇಪ "ಭಕ್ತ ಮಾರ್ಕಾಂಡೇಯ", ಪ್ರಸ್ತುತಿ- ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ- ಕಿಸಾನ್ ವಾಣಿ, 9.15 ಯಕ್ಷಗಾನದ ಹಾಡುಗಳು-ಶ್ರೀ ಕೃಷ್ಣ ಸಂಧಾನ ಪ್ರಸಂಗದ ಹಾಡು- ಚಂದ್ರಕಾಂತರಾವ್, 9.30 ಎಂ. ಎಸ್.ಗೋಪಾಲಕೃಷ್ಣನ್-ವಯೋಲಿನ್ ವಾದನ, 10.00 ಗಮಕ ವಾಚನ, ವಾಚನ-ವಸಂತಾ ವೆಂಕಟೇಶ್, ವ್ಯಾಖ್ಯಾನ- ಡಾ.ಎನ್.ಕೆ.ರಾಮಶೇಷನ್

■ **ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ :** ರಾಷ್ಟ್ರೀಯ ವಿಜ್ಞಾನ ದಿನಾಚರಣೆ, ಅಧ್ಯಕ್ಷತೆ: ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕಿ ಶ್ರೀಮತಿ ಎಲ್. ಲತಾ, ಮುಖ್ಯ ಭಾಷಣ : ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು : ಸಂಖ್ಯಾಶಾಸ್ತ್ರಜ್ಞ ಎಸ್.ಜಿ. ಸೀತಾರಾಂ, ಪರೀಕ್ಷಾ ಪರಿಕರ ವಿತರಣೆ : ಸಮಿತಿ ಅಧ್ಯಕ್ಷ ಎಚ್.ವಿ. ಮುರಳೀಧರ್, ಸ್ಥಳ: ಸರ್ಕಾರಿ ಪ್ರೌಢಶಾಲೆ, ರೈಲ್ವೆ ಕಾರ್ಯಾಗಾರ, ಮಧ್ಯಾಹ್ನ 2ಕ್ಕೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ವಿಚಾರ ಸಂಕಿರಣ ಮತ್ತು ಸಂವಾದ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವೆ ಶ್ರೀಮತಿ ವಿ.ಆರ್. ಶೈಲಜಾ, ವಿಷಯ ಮಂಡನೆ: ಪ್ರೊ. ಹೆಚ್.ಎಸ್. ಅಂಬಿಕಾ, ಪ್ರೊ.ಮೈಸೂರು ಕೃಷ್ಣಮೂರ್ತಿ, ಮುಖ್ಯ ಅತಿಥಿಗಳು : ಪತ್ರಿಕೋದ್ಯಮ ವಿಭಾಗದ ಅಧ್ಯಕ್ಷೆ ಡಾ. ಎಂ.ಎಸ್. ಸಪ್ನಾ, ಡಾ. ವಿಜಯಕುಮಾರಿ ಎಸ್. ಕರಿಕಲ್, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಮಾನಸಗಂಗೋತ್ರಿ, ಮಧ್ಯಾಹ್ನ 3ಕ್ಕೆ.

■ **ನರೆಡ್ಕೋ ಮೈಸೂರು:** ನರೆಡ್ಕೋ ಪ್ರಶಸ್ತಿ ಪ್ರದಾನ ಸಮಾರಂಭ, ಉಪಸ್ಥಿತರು: ಮೇಯರ್ ಶಿವಕುಮಾರ್, ಮಹಾರಾಜ ಕುಮಾರಿ ಶ್ರೀಮತಿ ಕಾಮಾಕ್ಷಿದೇವಿ ಒಡೆಯರ್, ಮುಡಾ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ನರೆಡ್ಕೋ ನ್ಯಾಷನಲ್ ಅಧ್ಯಕ್ಷ ರಾಜನ್ ಭಂಡೆಲ್ಕರ್, ಉಪಾಧ್ಯಕ್ಷ ಪ್ರೇಮ್‌ಕುಮಾರ್, ಸ್ಥಳ: ಹೋಟೆಲ್ ಸದರನ್ ಸ್ಟಾರ್, ವಿನೋಬಾ ರಸ್ತೆ, ಸಂಜೆ 7ಕ್ಕೆ.

■ **ಕ್ಯಾತಮಾರನಹಳ್ಳಿ ಗ್ರಾಮಸ್ಥರು:** ಹುಲಿಯಮ್ಮ ಜಾತ್ರಾ ಮಹೋತ್ಸವ, ಮಹಿಳೆಯರು ದೇವಾಲಯಕ್ಕೆ ತಂಬಿಟ್ಟಿನ ಆರತಿ ತಂದು ದೇವಿಗೆ ಪೂಜೆ, ಸ್ಥಳ: ಕ್ಯಾತಮಾರನಹಳ್ಳಿ ದೇವಸ್ಥಾನ ಆವರಣ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ:** ರಾಷ್ಟ್ರೀಯ ವಿಜ್ಞಾನ ದಿನ ಆಚರಣೆ, ಹಿರಿಯ ಪ್ರಧಾನ ವಿಜ್ಞಾನಿ ಡಾ. ಎಸ್. ನಾಗರಾಜನ್ ಅವರಿಂದ ಮಸಾಲೆಗಳು ಮತ್ತು ಆರೋಗ್ಯ ಪ್ರಯೋಜನಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.


ಚಂದ್ರವಾಡಿಯಲ್ಲಿಂದು, ನಂಜನಗೂಡು ತಾಲೂಕು

■ **ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ :** ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ : ಗ್ರಾಮದ ಮುಖಂಡ ಸಿ.ಪಿ. ಗುರುಮಲ್ಲಪ್ಪ, ಬೆಳಗ್ಗೆ 10 ರಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸಂಜೆ 5ಕ್ಕೆ ವೈದ್ಯಾಧಿಕಾರಿ ಡಾ. ಎಂ.ಎಸ್. ಮಂಜುನಾಥ್ ಅವರಿಂದ ಆರೋಗ್ಯದ ಅರಿವು ಕುರಿತು ಉಪನ್ಯಾಸ ಕಾರ್ಯಕ್ರಮ, ಅಧ್ಯಕ್ಷತೆ: ಉಪನ್ಯಾಸಕ ಕೆ.ಎಸ್. ಭಕ್ತವತ್ಸಲ, ಉಪಸ್ಥಿತರು: ಶ್ರೀಮತಿ ಭ್ರಮರಾಂಭ, ರೂಪಾ ಇಂಧುದರಸ್ವಾಮಿ.

ಆಕಾಶವಾಣಿಯಲ್ಲಿ 'ಮೆಚ್ಚಿನ' ಚಿತ್ರಗೀತೆ ಮಜಾ ನೀಡಿದರೆ; ಈಗ ಟಿವಿಯ 'ಮಚ್ಚಿನ' ಗೀತೆಗಳು ಆತಂಕ ಮೂಡಿಸುತ್ತಿವೆ!

ಆಕಾಶವಾಣಿ ಕೇಳುಗರ ಬಳಗದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ವಿಷಾದ

ಮೈಸೂರು, ಫೆ. 27-ನಗರದ ಎಂಜಿನಿಯರುಗಳ ಸಂಸ್ಥೆ ಸಭಾಂಗಣದಲ್ಲಿ ಭಾನುವಾರ ಸಮುದ್ಯತಾ ಶ್ರೋತೃ ಸಂಘದ 12ನೇ ವಾರ್ಷಿಕೋತ್ಸವ ಹಾಗೂ ಎಫ್‌ಎಮ್ 100.6, ಮೈಸೂರು ಆಕಾಶವಾಣಿ ಕೇಳುಗರ ಬಳಗದ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈನಾ ಲೋಕೇಶ್ ಅವರ 'ಮತ್ತೆ ಬರುವ ಮಿತ್ರ' ಕವನ ಸಂಕಲನ ಬಿಡುಗಡೆ ಮಾಡಿ ಮಾತನಾಡಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೊದಲು ಆಕಾಶವಾಣಿಯಲ್ಲಿ ಕೇಳುಗರ ಕೋರಿಕೆಯ ನಿಮ್ಮ 'ಮೆಚ್ಚಿನ ಗೀತೆ'ಗಳು ಬರುತ್ತಿದ್ದವು. ಮನೆ ಮಂದಿಗೆಲ್ಲಾ ಮುದ ನೀಡುತ್ತಿದ್ದವು. ಆದರೆ ಈಗ ಟಿವಿಗಳಲ್ಲಿ 'ಮಚ್ಚಿನ ಗೀತೆ'ಗಳನ್ನು ನೋಡುವ ಸಮಯ ಬಂದಿದೆ ಎಂದು ವಿಷಾದಿಸಿದರು.



ದೃಶ್ಯ ಮಾಧ್ಯಮಗಳು ಮೌಲ್ಯವನ್ನು ಕಳೆದುಕೊಳ್ಳುತ್ತಿವೆ. ಆಕಾಶವಾಣಿಯಲ್ಲಿ ಬರುವ ಕೃಷಿ ರಂಗ ಕಾರ್ಯಕ್ರಮವು ಇಂದಿಗೂ ಪರಿಣಾಮಕಾರಿಯಾಗಿ ಕೇಳುಗರನ್ನು ಸೆಳೆಯುತ್ತಿದೆ. ಇನ್ನು ಸುದ್ದಿಯ ನಿಖರತೆ ಬಗ್ಗೆ ಮಾತನಾಡುವುದಾದರೆ ಆಕಾಶವಾಣಿಯಲ್ಲಿ ಬಂದರೆ ಅದನ್ನು ದಿಟ ಸುದ್ದಿ ಎಂದು ಜನ ನಂಬುತ್ತಾರೆ. ಅಷ್ಟು ಪ್ರಭಾವವನ್ನು ಸಮಾಜದಲ್ಲಿ ಬೀರಿದೆ. ಇನ್ನೊಂದು ಮುಖ್ಯವಾದ ವಿಷಯವೆಂದರೆ ಡಾ. ರಾಜಕುಮಾರ್ ಅವರನ್ನು ಕಾಡುಗಳ್ಳ ವೀರಪ್ಪನ್ ಅಪಹರಿಸಿದಾಗ ಪಾರ್ವತಮ್ಮ ರಾಜಕುಮಾರ್ ಅವರ ಸಂದೇಶವನ್ನು ಕಾಡಿಗೆ ತಲುಪಿಸಿದ್ದು ಆಕಾಶವಾಣಿ ಎಂದರು.

ಇನ್ನು ಸಾಹಿತ್ಯವೂ ಮುಪ್ಪಿನವರ ಮುಡಿಪಾಗಿದೆ. ಇದರಲ್ಲಿ ಯುವಜನತೆಯನ್ನು ಸೆಳೆಯುವುದು ಸವಾಲಾಗಿ ಪರಿಣಮಿಸಿದೆ. ಏಕೆಂದರೆ ಯುವಕರು ಮಾದಕ ವ್ಯಸನಗಳಿಗೆ ದಾಸರಾಗುತ್ತಿದ್ದಾರೆ. ಇದರಿಂದ ಅವರನ್ನು ಸಾಹಿತ್ಯ, ಸಂಸ್ಕೃತಿಯೆಡೆಗೆ ಕರೆತರುವುದು ಕಷ್ಟವಾಗಿದೆ ಎಂದು ಅವರು ವಿಷಾದಿಸಿದರು. ಮುಖ್ಯ ಅತಿಥಿಯಾಗಿದ್ದ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ದೂರದರ್ಶನ ಎಂದರೆ ಅದನ್ನು ನೋಡುತ್ತಲೇ ಇರಬೇಕು. ಆದರೆ ರೇಡಿಯೋವನ್ನು ಕೇಳುತ್ತಲೇ ನಮ್ಮ ಕೆಲಸದಲ್ಲಿ ತೊಡಗಬಹುದು. ಹಾಗಾಗಿ ಆಕಾಶವಾಣಿ ಗೆಳೆಯನಿದ್ದಂತೆ ಎಂದು ಅಭಿಪ್ರಾಯಪಟ್ಟರು.

ಆಕಾಶವಾಣಿ ವಿಶೇಷವಾಗಿ ಸಾಹಿತ್ಯ, ಸಂಸ್ಕೃತಿ, ಪ್ರಚಲಿತ ವಿದ್ಯಮಾನಗಳು, ಸಂವಾದ ಚರ್ಚೆ- ಈ ಎಲ್ಲವನ್ನು ಕಟ್ಟಿಕೊಡುವ ದೊಡ್ಡ ಕ್ರಿಯಾಶೀಲ ಶಕ್ತಿಯಾಗಿ ಹೊರಹೊಮ್ಮಿದೆ. ಪ್ರತಿಯೊಂದು ಅಭಿವೃದ್ಧಿ ಪರ ನುಡಿಗಳು ಹಾಗೂ ನಮಗೆಲ್ಲ ಧ್ವನಿ ಕೊಡುವ ಮೂಲಕ ಆಕಾಶವಾಣಿ ತನ್ನ ಘನತೆ, ಗೌರವವನ್ನು ಹೆಚ್ಚಿಸಿಕೊಳ್ಳುವುದರ ನಿಟ್ಟಿನಲ್ಲಿ ಕೇಳುಗರು ಕಿವಿ ನಿಮಿರಿಸಿಕೊಂಡು ಕೇಳುವ ಮಾಧ್ಯಮವಾಗಿದೆ ಎಂದು ಅವರು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮೈಸೂರು ಆಕಾಶವಾಣಿ ಹಿರಿಯ ಉದ್ಘೋಷಕ ಡಾ.ಮೈಸೂರು ಉಮೇಶ್ ಮಾತನಾಡಿ, ಹಲವಾರು ಒತ್ತಡಗಳ ನಡುವೆಯೂ ಆಕಾಶವಾಣಿ ಉಳಿಯಬೇಕಾಗಿದೆ ಎಂದರು.

ಆಕಾಶವಾಣಿ ನಿವೃತ್ತ ಕಾರ್ಯಕ್ರಮ ನಿರ್ವಾಹಕ ಎಸ್.ಸುಬ್ರಹ್ಮಣ್ಯ, ಪ್ರತಿಭಾವಂತ ವಿದ್ಯಾರ್ಥಿ ಜೆ. ಪ್ರಜ್ವಲ್ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು. ಟಿ.ನರಸೀಪುರ ತಾಲೂಕು ಹನುಮನಾಳು ಶಿಲ್ಪಿ ರಮೇಶ್ ಅವರಿಗೆ ಸದ್ಭವನಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕವಯತ್ರಿ ಡಾ. ಕೆ.ಎನ್.ಲಾವಣ್ಯಪ್ರಭಾ, ಮುಕ್ತ ವಿವಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಆರ್.ಎಚ್.ಪವಿತ್ರಾ ಕೃತಿ ಕುರಿತು ಮಾತನಾಡಿದರು. ಸಂಘದ ಅಧ್ಯಕ್ಷ ಕಣ್ಣೂರು ವಿ.ಗೋವಿಂದಾಚಾರಿ ಮಾತನಾಡಿ, ಮೈಸೂರು ಆಕಾಶವಾಣಿಯು ಕೇಳುಗರಿಗೆ ಪ್ರಶಸ್ತಿ ನೀಡುವುದನ್ನು ಪುನಾರಂಭಿಸಬೇಕು ಎಂದು ಮನವಿ ಮಾಡಿದರು.

ಕವಿ ಮೈನಾ ಲೋಕೇಶ್, ಕಾಳಿಹುಂಡಿ ಶಿವಕುಮಾರ್, ರಾಜಲಕ್ಷ್ಮಿ ಇನ್ನಿತರರು ಉಪಸ್ಥಿತರಿದ್ದರು. ಪಾರ್ವತಿ ವಟ್ಟಂ ನಿರೂಪಿಸಿದರು. ಚಂದ್ರಕಲಾ ಕುಮಾರ್ ವಂದಿಸಿದರು. ಮೈಸೂರು ಆಕಾಶವಾಣಿಯ ನಿವೃತ್ತ ಸಹಾಯಕ ನಿರ್ದೇಶಕ ಶ್ರೀನಿವಾಸ್, ನಿವೃತ್ತ ಕಾರ್ಯಕ್ರಮ ನಿರ್ವಾಹಕ ಶಂಕರಪ್ಪ ಸೇರಿದಂತೆ ಸಿಬ್ಬಂದಿ, ಆಕಾಶವಾಣಿಯ ಕೇಳುಗರು ಪಾಲ್ಗೊಂಡಿದ್ದರು.

ಕಲ್ಯಾಣ ಮಂಟಪದಲ್ಲಿ ಮುಯ್ಯಿ ಬ್ಯಾಗ್ ಕಳವು

ಹಣ, ಚಿನ್ನಾಭರಣದೊಂದಿಗೆ ಖದೀಮರು ಪರಾರಿ

ಮೈಸೂರು, ಫೆ.27-ಮದುವೆ ಮಂಟಪದಲ್ಲಿ ವಧುವಿಗೆ ಬಂದಿದ್ದ ಮುಯ್ಯಿ ಕವರ್‌ಗಳು ಹಾಗೂ ಚಿನ್ನಾಭರಣವಿದ್ದ ಬ್ಯಾಗ್ ಕಳುವಾಗಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಕನಕಗಿರಿ ನಿವಾಸಿ ಎನ್.ಕೃಷ್ಣ (51) ಎಂಬುವರ ಪುತ್ರಿ ಕೀರ್ತಿಶ್ರೀ ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಈಕೆಯ ತಂಗಿ ನಯನಶ್ರೀ ವಿವಾಹ ಫೆ.21 ಮತ್ತು 22ರಂದು ವಿದ್ಯಾರಣ್ಯಪುರಂನ ಅಂಬಾರಿ ಕನ್ವೆನ್ಷನ್ ಹಾಲ್‌ನಲ್ಲಿ ನಡೆದಿದ್ದು, ಫೆ.21ರಂದು ಸಂಜೆ ಆರತಕ್ಷತೆ ವೇಳೆ ವಧುವಿಗೆ ಬಂದ ಮುಯ್ಯಿ ಕವರ್‌ಗಳನ್ನು ಪಡೆಯಲು 61 ಗ್ರಾಂ ತೂಕದ ಚಿನ್ನಾಭರಣವಿದ್ದ ಬ್ಯಾಗ್ ಹಿಡಿದು ವೇದಿಕೆ ಮೇಲೆ ಕೀರ್ತಿಶ್ರೀ ನಿಂತಿದ್ದರು. ರಾತ್ರಿ 8.20ರ ಸುಮಾರಿನಲ್ಲಿ ಕಲ್ಯಾಣ ಮಂಟಪಕ್ಕೆ ಡೆಕೋರೇಷನ್ ಮಾಡಿದ ಹುಡುಗ ಹೂವಿನ ಹಾರವನ್ನು ರೂಂನಲ್ಲಿಟ್ಟು, ಅದು ಸರಿಯಾಗಿದೆಯೇ ನೋಡಿ ಎಂದು ಹೇಳಿದಾಗ ಕೀರ್ತಿಶ್ರೀ ವೇದಿಕೆಯಲ್ಲೇ ಬ್ಯಾಗ್ ಇಟ್ಟು ರೂಂಗೆ ಹೋಗಿ-ಬರುವಷ್ಟರಲ್ಲಿ ಚಿನ್ನಾಭರಣ ಹಾಗೂ ಮುಯ್ಯಿ ಕವರ್‌ಗಳಿದ್ದ ಬ್ಯಾಗ್ ಅನ್ನು ಕಳವು ಮಾಡಲಾಗಿದೆ.

ಈ ಸಂಬಂಧ ಫೆ.24ರಂದು ಸಂಜೆ ಕೀರ್ತಿ ತಂದೆ ಕೃಷ್ಣ ನೀಡಿದ ದೂರನ್ನು ದಾಖಲಿಸಿಕೊಂಡಿರುವ ವಿದ್ಯಾರಣ್ಯಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮ.ಬೆಟ್ಟದಲ್ಲಿ ಮಾ.1ರಂದು ಬಿಜೆಪಿ ವಿಜಯ ಸಂಕಲ್ಪ ಯಾತ್ರೆಗೆ ಚಾಲನೆ

ಮೈಸೂರು,ಫೆ.27(ಎಂಟಿವೈ)- ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜನರ ಬೆಂಬಲ ಕೋರಲು ರಾಜ್ಯದ ನಾಲ್ಕು ದಿಕ್ಕುಗಳಿಂದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಹೊರಡಲಿದ್ದು, ಮಾ.1ರಂದು ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಿಂದ ಯಾತ್ರೆ-1 ಆರಂಭವಾಗಲಿದೆ ಎಂದು ವಿಜಯ ಸಂಕಲ್ಪ ಯಾತ್ರೆಯ ಮೈಸೂರು ವಿಭಾಗದ ಸಂಚಾಲಕರೂ ಆಗಿರುವ ಪಕ್ಷದ ರಾಜ್ಯ ಉಪಾಧ್ಯಕ್ಷ ಎಂ. ರಾಜೇಂದ್ರ ತಿಳಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ನಾಲ್ಕು ದಿಕ್ಕುಗಳಿಂದ ವಿಜಯ ಸಂಕಲ್ಪ ಯಾತ್ರೆ ಆಯೋಜಿಸಲಾಗಿದೆ. ಹಳೆ ಮೈಸೂರು ಭಾಗದಲ್ಲಿ ಸಂಚರಿಸಲಿರುವ ಯಾತ್ರೆಗೆ ಮಲೆಮಹದೇಶ್ವರ ಬೆಟ್ಟದಲ್ಲಿ ಮಾ.1ರಂದು ಬೆಳಿಗ್ಗೆ 11 ಗಂಟೆಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಚಾಲನೆ ನೀಡಲಿದ್ದಾರೆ. ಸೋಲಿಗ ಸಮುದಾಯದವರು ಒಳಗೊಂಡಂತೆ 15 ರಿಂದ 20 ಸಾವಿರ ಕಾರ್ಯಕರ್ತರು ಪಾಲ್ಗೊಳ್ಳುವ ಈ ಸಭೆಯಲ್ಲಿ ಸಚಿವರಾದ ವಿ. ಸೋಮಣ್ಣ, ವಿ.ಸುನೀಲ್ ಕುಮಾರ್, ಕೋಟಾ ಶ್ರೀನಿವಾಸ ಪೂಜಾರಿ, ಆರಗ ಜ್ಞಾನೇಂದ್ರ, ಕೆ.ಗೋಪಾಲಯ್ಯ, ಎಸ್.ಅಂಗಾರ, ಸಂಸದ ವಿ.ಶ್ರೀನಿವಾಸ ಪ್ರಸಾದ್, ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ, ಶಾಸಕ ಎನ್.ಮಹೇಶ್, ರಾಜ್ಯ ಉಪಾಧ್ಯಕ್ಷ ನಿರ್ಮಲ್‌ಕುಮಾರ್ ಸುರಾನ ಸೇರಿದಂತೆ ರಾಜ್ಯದ ಮುಖಂಡರು ಭಾಗವಹಿಸಲಿದ್ದಾರೆ. ವಿಜಯ ಸಂಕಲ್ಪ ಯಾತ್ರೆಯ ಮೊದಲ ತಂಡವು 58 ವಿಧಾನಸಭಾ ಕ್ಷೇತ್ರಗಳಲ್ಲಿ 18 ಕಡೆ ಸಭೆ, 35 ರಿಂದ 40ಕಡೆ ರೋಡ್ ಶೋ ನಡೆಸಲಾಗುತ್ತದೆ ಎಂದು ತಿಳಿಸಿದರು.



ಮಾ.1 ರಿಂದ 2ರವರೆಗೆ ಹನೂರು, ಕೊಳ್ಳೇಗಾಲ, ಚಾಮರಾಜನಗರ, ಗುಂಡ್ಲುಪೇಟೆ, ನಂಜನಗೂಡಿನಲ್ಲಿ ಯಾತ್ರೆ ಸಂಚರಿಸಲಿದೆ. ಮಾ.3 ರಿಂದ 5 ರವರೆಗೆ ಮೈಸೂರು ಗ್ರಾಮಾಂತರ ಹಾಗೂ ಮೈಸೂರು ನಗರದ ಮೂಲಕ ಸಾಗಿ ಮಂಡ್ಯ, ಹಾಸನ, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ ಮೂಲಕ ದಾವಣಗೆರೆಯ ಹರಿಹರದಲ್ಲಿ ವಿಜಯ ಸಂಕಲ್ಪ ಯಾತ್ರೆ ಸಂಪನ್ನಗೊಳ್ಳುತ್ತದೆ. ದಾವಣಗೆರೆಯಲ್ಲಿ ನಾಲ್ಕು ತಂಡಗಳ ಯಾತ್ರೆ ಸೇರುತ್ತವೆ. ಸಮಾರೋಪ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭಾಗಿಯಾಗಲಿದ್ದಾರೆ ಎಂದು ವಿವರಿಸಿದರು.

150 ಸ್ಥಾನ ಖಚಿತ: ಮುಂಬರುವ ಚುನಾವಣೆಯಲ್ಲಿ ಬಿಜೆಪಿಗೆ 150 ಸ್ಥಾನ ಲಭಿಸುವುದು ಖಚಿತ. ಪ್ರಧಾನಿ ನರೇಂದ್ರಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಆಗಮನದಿಂದಾಗಿ ಕಾಂಗ್ರೆಸ್ ನಾಯಕರಲ್ಲಿ ನಡುಕ, ಸೋಲಿನ ಭೀತಿ ಉಂಟಾಗಿದೆ. ಕೇಂದ್ರ, ರಾಜ್ಯ ಸರ್ಕಾರಗಳ ಅಭಿವೃದ್ಧಿ ಮುಂದಿಟ್ಟುಕೊಂಡು ಚುನಾವಣೆ ಎದುರಿಸಲಿದ್ದೇವೆ. ಅಭಿವೃದ್ಧಿ ಮತ್ತು ಚುನಾವಣೆಯಲ್ಲಿ ಗೆಲ್ಲಬೇಕೆಂಬ ಕಾರಣಕ್ಕಾಗಿ ಮೋದಿ-ಅಮಿತ್ ಶಾ ಜೋಡಿ ಹೆಚ್ಚಾಗಿ ಬರುತ್ತಿರುವುದರಿಂದ ಕರ್ನಾಟಕದಲ್ಲಿ ಬಿಜೆಪಿ ಪರವಾದ ಗಾಳಿ ಬೀಸುತ್ತಿದೆ ಎಂದರು.

ಇದನ್ನು ಸಹಿಸದ ಕಾಂಗ್ರೆಸ್ಸಿಗರು ಸುಳ್ಳು ಆರೋಪಗಳನ್ನು ಮಾಡುವ ಮೂಲಕ ಜನರ ಗಮನವನ್ನು ಬೇರೆಡೆಗೆ ಸೆಳೆಯುತ್ತಿದ್ದಾರೆ. ಕಾಂಗ್ರೆಸ್ ನಾಯಕರು ಮೋದಿ ಅಬ್ಬರಕ್ಕೆ ಹೆದರಿ ಅಪಪ್ರಚಾರದಲ್ಲಿ ತೊಡಗಿದ್ದಾರೆ. ಬಿಜೆಪಿ ಸಂಘಟನೆ ಗಟ್ಟಿಯಾಗಿರುವ ಕಾರಣ ವ್ಯಕ್ತಿಗತವಾಗಿ ಚುನಾವಣೆ ಎದುರಿಸಲ್ಲ. ಯಾರೇ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದರೂ ಪಕ್ಷದ ಹೆಸರಿನಲ್ಲಿ ಪ್ರಚಾರ ಮಾಡಲಾಗುವುದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದಲಿತರು, ಹಿಂದುಳಿದ ವರ್ಗಗಳಿಗೆ ಹಲವಾರು ಯೋಜನೆಗಳನ್ನು ನೀಡಿವೆ. ಬಜೆಟ್‌ನಲ್ಲಿ ದಲಿತರ ಕಲ್ಯಾಣಕ್ಕಾಗಿ 28 ಸಾವಿರ ಕೋಟಿ ರೂ. ಅನುದಾನವನ್ನು ಮೀಸಲಿಟ್ಟಿದೆ. ಮೈಸೂರು ಭಾಗದಲ್ಲಿ ಅಭಿವೃದ್ಧಿ ವಿಚಾರವನ್ನು ಮುಂದಿಟ್ಟುಕೊಂಡು ಜನರ ಬಳಿಗೆ ಹೋಗುತ್ತೇವೆ. ಮೈಸೂರು-ಬೆಂಗಳೂರು ನಡುವಿನ ದಶಪಥ ರಸ್ತೆ, ಮೈಸೂರು ವಿಮಾನ ನಿಲ್ದಾಣ ವಿಸ್ತರಣೆ, ಮೈಸೂರು-ಕುಶಾಲನಗರ ರಾಷ್ಟ್ರೀಯ ಹೆದ್ದಾರಿ, ಹೊಸ ರೈಲುಗಳ ಸಂಪರ್ಕ ಸೇರಿದಂತೆ ಹತ್ತಾರು ಯೋಜನೆಗಳ ಬಗ್ಗೆ ಜನರಿಗೆ ತಿಳಿಸಲಾಗುವುದು ಎಂದರು.


ಸುದ್ದಿಗೋಷ್ಠಿಯಲ್ಲಿ ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಪಕ್ಷದ ಮೈಸೂರು ನಗರ ಅಧ್ಯಕ್ಷ ಟಿ.ಎಸ್.ಶ್ರೀವತ್ಸ, ಗ್ರಾಮಾಂತರ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ಮಡಹಳ್ಳಿ ಮಹೇಶ್, ಮಾಧ್ಯಮ ಸಂಚಾಲಕ ಗೋಪಾಲಯ್ಯ, ಮೈಸೂರು ನಗರ ಮಾಧ್ಯಮ ವಕ್ತಾರರಾದ ಮಹೇಶ್ ರಾಜೇ ಅರಸ್, ಪ್ರದೀಪ್ ಕುಮಾರ್ ಇದ್ದರು.

ಸ್ಕೂಟರ್ ಡಿಕ್ಕಿಯಲ್ಲಿದ್ದ ನಗದು, ಚಿನ್ನಾಭರಣ ಕಳವು

ಮೈಸೂರು, ಫೆ.27-ಮಹಿಳೆಯ ಸ್ಕೂಟರ್ ಡಿಕ್ಕಿಯಲ್ಲಿದ್ದ ಚಿನ್ನಾಭರಣ, ನಗದು ಕಳವು ಮಾಡಿರುವ ಘಟನೆ ಮೈಸೂರಿನ ಹೊರವಲಯದ ಆಲನಹಳ್ಳಿಯಿಂದ ವರದಿಯಾಗಿದೆ.

ಗಿರಿದರ್ಶಿನಿ ಬಡಾವಣೆ ನಿವಾಸಿ ಎಸ್.ಕಾವ್ಯಶ್ರೀ(35) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ತಿ.ನರಸೀಪುರ ಮುಖ್ಯ ರಸ್ತೆಯಲ್ಲಿರುವ ಎಸ್‌ಬಿಐಗೆ ಸುಜುಕಿ ಲೈಟ್ಸ್ ಸ್ಕೂಟರ್‌ನಲ್ಲಿ (ಕೆಎ 55 ಎಸ್ 6929) ತೆರಳಿದ್ದರು. ಅವರು ಬ್ಯಾಂಕ್‌ಗೆ ಹೋಗಿ ಹಿಂತಿರುಗುವಷ್ಟರಲ್ಲಿ ಸ್ಕೂಟರ್‌ನ ಡಿಕ್ಕಿಯಲ್ಲಿ ಇಟ್ಟಿದ್ದ ಪರ್ಸ್ ಕಳುವಾಗಿದ್ದು, ಅದರಲ್ಲಿ 7.5 ಗ್ರಾಂ ತೂಕದ 3 ಚಿನ್ನದ ಉಂಗುರ, ಎಟಿಎಂ ಕಾರ್ಡ್, ಡಿಎಲ್, ಸ್ಕೂಟರ್ ಆರ್‌ಸಿ ಕಾರ್ಡ್, ಸ್ಕೌಟ್ ಮತ್ತು ಗೈಡ್ಸ್ ಮೈಸೂರು ದಕ್ಷಿಣ ವಲಯದ 20 ಸಾವಿರ ರೂ. ನಮೂದಿಸಿದ್ದ ಚೆಕ್, ಬ್ಯಾಂಕ್ ಪಾಸ್‌ಬುಕ್ ಹಾಗೂ 8 ಸಾವಿರ ರೂ. ನಗದು ಇತ್ತು ಎಂದು ಅವರು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಆಲನಹಳ್ಳಿ ಪೊಲೀಸ್ ಠಾಣೆಯವರು ತನಿಖೆ ಮುಂದುವರೆಸಿದ್ದಾರೆ.

ದಿನೇಶ್ ಶಂಕರನಾರಾಯಣ್ ನಿಧನ



ಮೈಸೂರು, ಫೆ.27-ಮೈಸೂರಿನ ಯಾದವಗಿರಿ ನಿವಾಸಿಯೂ ಆಗಿದ್ದ ಅಮೆರಿಕೆಯ ಮೆಂಫಿಸ್ ನಗರದಲ್ಲಿ ವಾಸಿಸುತ್ತಿದ್ದ ದಿನೇಶ್ ಶಂಕರನಾರಾಯಣ್(61) ಅವರು ಅಲ್ಪಕಾಲದ ಅನಾರೋಗ್ಯದಿಂದಾಗಿ ಮೆಂಫಿಸ್ ನಗರದಲ್ಲಿ ನಿಧನರಾಗಿದ್ದಾರೆ. ದಿನೇಶ ಅವರು ಪತ್ನಿ, ತಾಯಿ, ಅಪಾರ ಬಂಧುವರ್ಗ ಮತ್ತು ಗೆಳೆಯರನ್ನು ಅಗಲಿದ್ದಾರೆ. ಫೆ.27ರಂದು ಸೋಮವಾರ ಅವರ ಅಂತ್ಯಸಂಸ್ಕಾರ ಮೆಂಫಿಸ್ ನಗರದ ಫ್ಯೂನರಲ್ ಸರ್ವೀಸ್‌ನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ದಿನೇಶ್ ಅವರ ತಂದೆ ದಿವಂಗತ ಕೆ.ಶಂಕರ ನಾರಾಯಣ್ ಅವರು ಸಹ ನಗರದ ಯಾದವಗಿರಿಯ ನಿವಾಸಿಯಾಗಿದ್ದು ಮಂಡ್ಯದ ಮೈಸೂರು ಅಸಿಟೇಟ್ಸ್ ಅಂಡ್ ಕೆಮಿಕಲ್ ಹಾಗೂ ಊಟಿಯ ಹಿಂದೂಸ್ಥಾನ್ ಫೋಟೋ ಫಿಲಂ ಕಾರ್ಖಾನೆಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಕೆಲಸ ಮಾಡಿದ್ದರು.

ಟಿ.ತಿಮ್ಮೇಗೌಡ



ಮೈಸೂರು, ಫೆ.27- ಲೋಕೋಪಯೋಗಿ ಇಲಾಖೆಯ ನಿವೃತ್ತ ಎಂಜಿನಿಯರ್, ಮೈಸೂರು ಜಯಲಕ್ಷ್ಮಿಪುರಂ ನಿವಾಸಿ ಟಿ.ತಿಮ್ಮೇಗೌಡ (95) ಸೋಮವಾರ ನಿಧನರಾದರು. ಇವರು ಮೂಲತಃ ನಾಗಮಂಗಲ ತಾಲೂಕಿನ ಹೊಣಕೆರೆ ಗ್ರಾಮದವರಾಗಿದ್ದು, ನಿವೃತ್ತಿಯ ನಂತರ ಮೈಸೂರಿನ ಹರಿಹರಾನಂದ ಭಾರತಿ ಆಶ್ರಮ ಹಾಗೂ ನಾರಾಯಣಾನಂದ ವಿಶ್ವಯೋಗಾಶ್ರಮದ ಟ್ರಸ್ಟಿಯಾಗಿ ಸೇವೆ ಸಲ್ಲಿಸಿದ್ದರು. ಇವರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರು, ಸಂಸ್ಕೃತಿ ಚಿಂತಕ ಪ್ರೊ. ಎಂ. ಕೃಷ್ಣೇಗೌಡ ಅವರ ಮಾವ. ಇವರ ಅಂತ್ಯಸಂಸ್ಕಾರವು ಮಂಗಳವಾರ (ಫೆ.28) ಬೆಳಗ್ಗೆ 11 ಗಂಟೆಗೆ ಮೈಸೂರು ವಿಜಯನಗರದ ಚಿತಾಗಾರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿವಮೊಗ್ಗ ಏರ್‌ಪೋರ್ಟ್ ಇನ್ನೆರಡು ವರ್ಷಗಳಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಶಿವಮೊಗ್ಗ, ಫೆ.27– ಮಲೆನಾಡಿನ ಹೆಬ್ಬಾಗಿಲು ಶಿವಮೊಗ್ಗದ ಏರ್ ಪೋರ್ಟ್ ಇನ್ನೆರಡು ವರ್ಷಗಳಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಇಂದು ಶಿವಮೊಗ್ಗ ವಿಮಾನ ನಿಲ್ದಾಣ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದ ಅವರು 2014ರ ನಂತರ ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಬಂದ ಮೇಲೆ ದೇಶದಲ್ಲಿ ವಿಮಾನ ನಿಲ್ದಾಣ ಗಳು, ಆಸ್ಪತ್ರೆಗಳು, ವೈದ್ಯಕೀಯ ಶಿಕ್ಷಣ ಸಂಸ್ಥೆ, ನೀರಿನ ಸಂಪರ್ಕ, ವಿದ್ಯುತ್ ಸಂಪರ್ಕ, ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಬಡವರಿಗಾಗಿ ಮನೆ ನಿರ್ಮಾಣ, ಶೌಚಾಲಯ ಹೀಗೆ ಮೂಲಭೂತ ಸೌಕರ್ಯಗಳಲ್ಲಿ ಕಳೆದ ಏಳೆಂಟು ವರ್ಷಗಳಲ್ಲಿ ಸಾಕಷ್ಟು ಪ್ರಗತಿಯಾಗಿದೆ ಎಂದರು.

ಇಂದು ಭಾರತ ದೇಶ ಆರ್ಥಿಕವಾಗಿ ಸಬಲವಾಗಿದ್ದು, ಇಡೀ ಪ್ರಪಂಚ ನಮ್ಮತ್ತ ನೋಡುತ್ತಿದೆ. ಜಿ20 ಅಧ್ಯಕ್ಷ ಸ್ಥಾನ ಭಾರತಕ್ಕೆ ಸಿಕ್ಕಿರುವುದು ಇದಕ್ಕೆ ಸಾಕ್ಷಿ ಎಂದರು.ತಂತ್ರಜ್ಞಾನ, ಸಂಶೋಧನೆಯಲ್ಲಿ ಕರ್ನಾಟಕ ನಂಬರ್ 1 ಇದೆ, ವಿಜಯಪುರ, ಹಾಸನ ವಿಮಾನ ನಿಲ್ದಾಣಗಳ ಕಾಮಗಾರಿ ಪ್ರಗತಿಯಲ್ಲಿದೆ ಎಂದರು.

ಆರ್ಥಿಕತೆಗೆ ಹೊಸ ದಿಕ್ಕು: ಶಿವಮೊಗ್ಗ ವಿಮಾನ ನಿಲ್ದಾಣದಿಂದ ಕೇವಲ ಸಂಚಾರಕ್ಕೆ ಮಾತ್ರವಲ್ಲದೆ ಯುವಜನತೆಗೆ ಉದ್ಯೋಗ, ಆರ್ಥಿಕತೆಗೆ ಹೊಸ ದಿಕ್ಕು, ಹೊಸ ಅವಕಾಶಗಳನ್ನು ತೆರೆಯಲಿದೆ ಎಂದರು. ರಾಜ್ಯ ದಲ್ಲಿ ಏರ್‌ಪೋರ್ಟ್‌ಗಳ ಜಾಲ ಸೃಷ್ಟಿಯಾಗುತ್ತಿದೆ. ಬಂದರುಗಳ ಅಭಿವೃದ್ಧಿ ಹಾಗೂ ವಿಸ್ತರಣೆ ಆಗುತ್ತಿದೆ. ಅದೇ ರೀತಿಯಲ್ಲಿ ಹೈವೇ ರಸ್ತೆಗಳು ಕೂಡಾ ಉದ್ಘಾಟನೆ ಆಗುತ್ತಿದೆ. ಇವೆಲ್ಲವೂ ಡಬಲ್ ಇಂಜಿನ್ ಸರ್ಕಾರದ ಕೊಡುಗೆಯಾಗಿದೆ ಎಂದು ಹೇಳಿದರು. ಯಡಿಯೂರಪ್ಪನವರು ಹುಟ್ಟಾ ಹೋರಾಟಗಾರರು, ಅವರು ಶಿಕಾರಿಪುರದಿಂದ ಏಳು ಬಾರಿ ಆಯ್ಕೆಯಾಗಿ, ರೈತರಿಗಾಗಿ, ನೀರಾವರಿ, ಬಗರ್ ಹುಕುಂಗೆ ಹೋರಾಟ ಮಾಡಿದರು. ಅವರು ನಮ್ಮ ಮಾರ್ಗದರ್ಶಕರು ಎಂದು ಶ್ಲಾಘಿಸಿದರು. ಸೂರ್ಯ–ಚಂದ್ರರು ಇರುವವರೆಗೂ ಕರ್ನಾಟಕ ಇತಿಹಾಸದಲ್ಲಿ ಯಡಿಯೂರಪ್ಪನವರ ಹೆಸರು ಶಾಶ್ವತವಾಗಿ ಉಳಿಯುತ್ತದೆ, ಮಲೆನಾಡಿಗೆ ಪ್ರದೇಶಕ್ಕೆ ಯಡಿಯೂರಪ್ಪ ಒಂದು ಕಾಣಿಕೆ ಎಂದರು.



ಕಮಲಾಕೃತಿಯ ಶಿವಮೊಗ್ಗ ಏರ್‌ಪೋರ್ಟ್‌ನ ವಿಹಂಗಮ ನೋಟ...

ಹವಾಯಿ ಚಪ್ಪಲಿ ಧರಿಸುವ ಕಡು ಬಡವರೂ ವಿಮಾನದಲ್ಲಿ ಪ್ರಯಾಣಿಸಬೇಕು!

ಇದು ನಮ್ಮ ಸರ್ಕಾರದ ಧ್ಯೇಯ: ಪ್ರಧಾನಿ ಮೋದಿ



ಶಿವಮೊಗ್ಗ, ಫೆ.27–ಶಿವಮೊಗ್ಗ ವಿಮಾನ ನಿಲ್ದಾಣವನ್ನು ಉದ್ಘಾಟನೆ ಮಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಸಮಾರಂಭದಲ್ಲಿ ರಾಷ್ಟ್ರಕವಿ ಕುವೆಂಪು ಅವರನ್ನು ಸ್ಮರಿಸಿ, ಕನ್ನಡದಲ್ಲಿಯೇ ಭಾಷಣ ಆರಂಭಿಸಿದರು.

ಶಿವಮೊಗ್ಗದ ಜನರ ಬಹುದಿನಗಳ ಬೇಡಿಕೆ ಈಡೇರಿದೆ. ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ ಎಂದು ಮೋದಿಯವರು ಭಾಷಣ ಆರಂಭಿಸಿದರು. ಶಿವಮೊಗ್ಗದಿಂದ ನಾನು ಬೆಳಗಾವಿಗೆ ಹೋಗಬೇಕಿದೆ. ಶಿವಮೊಗ್ಗದ ಬಹುದಿನದ ಬೇಡಿಕೆ ಈಗ ಈಡೇರಿದೆ. ಶಿವಮೊಗ್ಗಕ್ಕೆ ವಿಮಾನ ನಿಲ್ದಾಣ ದೊರೆತಿದೆ. ಇಂದು ಸಾಕಷ್ಟು ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದ್ದೇನೆ ಎಂದರು. ಈ ವೇಳೆ ಯಡಿಯೂರಪ್ಪ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ತಿಳಿಸಿದ ಮೋದಿಯವರು, ನೆರೆದಿದ್ದ ಜನರಿಗೆ ತಮ್ಮ ಮೊಬೈಲ್ ಟಾರ್ಚ್ ಆನ್ ಮಾಡಿ ಬಿಎಸ್ ಯಡಿಯೂರಪ್ಪನವರಿಗೆ ಹುಟ್ಟುಹಬ್ಬದ ಶುಭಾಶಯ ತಿಳಿಸಲು ಹೇಳಿದರು. ಬಳಿಕ ಬಿ.ಎಸ್. ಯಡಿಯೂರಪ್ಪ ಅವರನ್ನು ಕೊಂಡಾಡಿದರು.

ಇಂದು ಯಡಿಯೂರಪ್ಪ ಅವರ ಜನ್ಮದಿನವಾಗಿದೆ. ಬಿಎಸ್‌ವೈ ವಿಧಾನಸಭೆಯಲ್ಲಿ ಭಾಷಣ ಮಾಡಿದರು. ಇದು ಎಲ್ಲರಿಗೂ ಪ್ರೇರಣೆ ನೀಡುವಂಥದ್ದಾಗಿದೆ. 50 ವರ್ಷಗಳಿಂದ ಯಡಿಯೂರಪ್ಪನವರು ಜನಸೇವೆಯಲ್ಲಿದ್ದಾರೆ. ಕರ್ನಾಟಕದ ಅ––ಭಿವೃದ್ಧಿ ರಥದಲ್ಲಿ ಅಭಿವೃದ್ಧಿ ಪಥವಿದೆ. ಡಬಲ್ ಇಂಜಿನ್ ಸರ್ಕಾರದಿಂದ ಅಭಿವೃದ್ಧಿಯ ರಥ ಸಾಗುತ್ತಿದೆ. ವಿಮಾನಯಾನ ಕ್ಷೇತ್ರದಲ್ಲಿ ಭಾರತ ಸಾಕಷ್ಟು ಅಭಿವೃದ್ಧಿ ಹೊಂದಿದೆ ಎಂದು ತಿಳಿಸಿದರು

2014ಕ್ಕಿಂತ ಮೊದಲು ಕೇವಲ ದೊಡ್ಡ ನಗರಗಳಿಗೆ ಮಾತ್ರ ವಿಮಾನ ನಿಲ್ದಾಣ ಸೀಮಿತವಾಗಿತ್ತು. ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಸಣ್ಣಪುಟ್ಟ ನಗರಗಳಲ್ಲಿಯೂ ಏರ್ ಪೋರ್ಟ್ ಮಾಡಲಾಗುತ್ತಿದೆ. ಬಿಜೆಪಿ ಸರ್ಕಾರ ಬಡವರ ಕಲ್ಯಾಣಕ್ಕಾಗಿ ಶ್ರಮಿಸುತ್ತಿದೆ. ಹವಾಯಿ ಚಪ್ಪಲಿ ಧರಿಸುವ ಕಡು ಬಡವರು ಕೂಡ ವಿಮಾನದಲ್ಲಿ ಪ್ರಯಾಣಿಸಬೇಕು. ಇದು ಬಿಜೆಪಿ ಸರ್ಕಾರದ ಧ್ಯೇಯವಾಗಿದೆ. ಹಳ್ಳಿಹಳ್ಳಿಗೂ ಏರ್‌ಪೋರ್ಟ್ ಸಂಪರ್ಕ ಸಾಧ್ಯವಾಗಬೇಕು. ಹೀಗಾಗಿಯೇ 74 ವಿಮಾನ ನಿಲ್ದಾಣ ನಿರ್ಮಿಸಿದ್ದೇವೆ ಎಂದರು. ಶಿವಮೊಗ್ಗ ಪಶ್ಚಿಮ ಘಟ್ಟದಲ್ಲಿ ಬರುವ ಮಲೆನಾಡಿನ ಹೆಬ್ಬಾಗಿಲು. ಇಲ್ಲಿ ನದಿ, ವನ್ಯ ಸಂಪತ್ತು ಅದ್ಭುತವಾಗಿದೆ. ಇಲ್ಲಿ ಜೋಗ್ ಜಲಪಾತ, ಆನೆಗಳ ಬಿಡಾರವೂ ಇದೆ. ಆಗುಂಬೆಯ ಸೂರ್ಯಾಸ್ತ ಯಾರೂ ಮರೆಯೋದಕ್ಕೆ ಸಾಧ್ಯವಿಲ್ಲ. ಗಂಗಾ ಸ್ನಾನ, ತುಂಗಾ ಪಾನ ಎಂದು ಉಕ್ತಿಯೇ ಇದೆ. ಸಿಗಂದೂರು ಚೌಡೇಶ್ವರಿ, ಕೋಟೆ ಆಂಜನೇಯ ದೇವಸ್ಥಾನವಿದೆ. ಇಲ್ಲಿಗೆ ವಿಮಾನ ಪ್ರಯಾಣದ ಸಂಪರ್ಕ ಅವಶ್ಯಕವಾಗಿದೆ. ಶಿವಮೊಗ್ಗ ವಿಮಾನ ನಿಲ್ದಾಣದಿಂದ ಅಭಿವೃದ್ಧಿ ಆಗಲಿದೆ. ಶಿವಮೊಗ್ಗ–ಶಿಕಾರಿಪುರ–ರಾಣೆಬೆನ್ನೂರು ಹೊಸ ರೈಲು ಮಾರ್ಗ ನಿರ್ಮಾಣವಾದರೆ ಸಾಕಷ್ಟು ಲಾಭವಾಗಲಿದೆ. ಹಾವೇರಿವರೆಗೂ ಜನರಿಗೆ ಸಂಪರ್ಕ ಸಾಧ್ಯವಾಗುತ್ತದೆ ಎಂದು ಹೇಳಿದರು.

ಇದೇ ವೇಳೆ ಕಾಂಗ್ರೆಸ್ ವಿರುದ್ಧ ಮೋದಿಯವರು ವಾಗ್ದಾಳಿ ನಡೆಸಿದರು. ಕಾಂಗ್ರೆಸ್‌ನವರು ಅಭಿವೃದ್ಧಿಯನ್ನು ಮಾಡಲೇ ಇಲ್ಲ. ಬಡವರ ಪರ ಬಿಜೆಪಿ ಕೆಲಸ ಮಾಡುತ್ತಿದೆ. ಶಿವಮೊಗ್ಗ ಪಶ್ಚಿಮ ಘಟ್ಟದ ಹೆಬ್ಬಾಗಿಲು. ಈ ಮಲೆನಾಡು ಭಾಗದ ಅಭಿ ವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ. ಸಣ್ಣ ಸಣ್ಣ ನಗರಗಳನ್ನು ಕಾಂಗ್ರೆಸ್ ನಿರ್ಲಕ್ಷ್ಯ ಮಾಡಿತ್ತು ಎಂದರು. ಬಳಿಕ ರೈಲ್ವೆ ಮಾರ್ಗ, ಹೆದ್ದಾರಿ ಯೋಜನೆಗಳು, ಅವುಗಳ ಪ್ರಯೋಜನ ಬಗ್ಗೆ ಮೋದಿ ವಿವರಿಸಿದರು.

ನನ್ನ 60ನೇ, 80ನೇ ಹುಟ್ಟುಹಬ್ಬಗಳು ಸ್ಮರಣೀಯ: ಯಡಿಯೂರಪ್ಪ

ಶಿವಮೊಗ್ಗ, ಫೆ.27– ಪ್ರಧಾನಿ ಮೋದಿ ಶಿವಮೊಗ್ಗ ಏರ್‌ಪೋರ್ಟ್ ಉದ್ಘಾಟಿಸಿದ್ದಾರೆ. ಅದಕ್ಕೆ ವಿಶ್ವಮಾನವ ಸಂದೇಶವನ್ನು ತಮ್ಮ ಸಾಹಿತ್ಯದ ಮೂಲಕ ಸಾರಿದ ಖ್ಯಾತ ಕವಿ, ಸಾಹಿತಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕುವೆಂಪು ಅವರ ಹೆಸರಿಡಲಾಗಿದೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಹುಟ್ಟುಹಬ್ಬದ ದಿನವೇ ಏರ್‌ಪೋರ್ಟ್ ಉದ್ಘಾಟನೆಯಾಗಿದೆ. 449 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಶಿವಮೊಗ್ಗ ವಿಮಾನ ನಿಲ್ದಾಣವನ್ನು ಪ್ರಧಾನಿ ನರೇಂದ್ರ ಮೋದಿ ಇಂದು ಉದ್ಘಾಟನೆ ಮಾಡಿದರು. ಸಿಎಂ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಬಿಎಸ್‌ವೈ ಸಾಥ್ ನೀಡಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಸಂಸದ ಬಿ.ವೈ.ರಾಘವೇಂದ್ರ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತಿತರರು ಹಾಜರಿದ್ದರು.

ನೇಗಿಲ ಕಾಣಿಕೆ: ಸಮಾವೇಶದಲ್ಲಿ ನರೇಂದ್ರ ಮೋದಿಯವರು ಕರ್ನಾಟಕ ರಾಜ್ಯದಲ್ಲಿ ರೈತ ಬಜೆಟ್ ಮಂಡಿಸಿದ್ದ ಬಿ.ಎಸ್. ಯಡಿಯೂರಪ್ಪಗೆ ನೇಗಿಲ ಕಾಣಿಕೆ ನೀಡಿ ಗೌರವ ಸಮರ್ಪಣೆ ಮಾಡಿದ್ದು, ಹಸಿರು ಶಾಲು ಹೊದಿಸಿ, ಪೇಟ ತೊಡಿಸಿ, ಸನ್ಮಾನ ಮಾಡಿದ್ದಾರೆ.

ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ: ಪ್ರಧಾನಿ ಮೋದಿ ಏರ್‌ಪೋರ್ಟ್ ಜೊತೆಗೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೂ ಚಾಲನೆ ನೀಡಿದ್ದಾರೆ. 7,165 ಕೋಟಿ ಮೌಲ್ಯದ ಯೋಜನೆಗಳನ್ನು ಉದ್ಘಾಟಿಸಿದ್ದಾರೆ. 995 ಕೋಟಿ ವೆಚ್ಚದ 96 ಕಿ.ಮೀ. ಉದ್ದದ ರೈಲು ಮಾರ್ಗಕ್ಕೆ ಅಡಿಗಲ್ಲು ಹಾಗೂ ಶಿವಮೊಗ್ಗ–ಶಿಕಾರಿಪುರ–ರಾಣೆಬೆನ್ನೂರು ರೈಲು ಮಾರ್ಗಕ್ಕೆ ಶಂಕುಸ್ಥಾಪನೆ, 105 ಕೋಟಿ ವೆಚ್ಚದಲ್ಲಿ ಕೋಟೆಗಂಗೂರಿನಲ್ಲಿ ರೈಲ್ವೇ ಕೋಚಿಂಗ್ ಡಿಪೋ, 953 ಕೋಟಿ ಮೊತ್ತದ ಬಹುಗ್ರಾಮ ಕುಡಿಯುವ ನೀರು



ಯೋಜನೆಗೆ ಶಂಕುಸ್ಥಾಪನೆ ಮಾಡಿದ್ದಾರೆ.

66.44 ಕೋಟಿ ವೆಚ್ಚದ ಬೈಂದೂರು–ರಾಣೆಬೆನ್ನೂರು ರಸ್ತೆ ಬೈಪಾಸ್, 96.20 ಕೋಟಿ ವೆಚ್ಚದಲ್ಲಿ ತೀರ್ಥಹಳ್ಳಿ–ಮಲ್ಪೆ ದ್ವಿಪಥ ರಸ್ತೆ ಅಗಲೀಕರಣ ಮತ್ತು ಶಿವಮೊಗ್ಗ–ಮಂಗಳೂರು ರಸ್ತೆ ಭಾರತೀಪುರ ಬಳಿ ರಸ್ತೆ ನಿರ್ಮಾಣ, 896.16 ಕೋಟಿ ವೆಚ್ಚದ 44 ಸ್ಮಾರ್ಟ್‌ಸಿಟಿ ಯೋಜನೆಗಳ ಉದ್ಘಾಟನೆ ಮಾಡಲಿದ್ದಾರೆ. 45 ಕೋಟಿ ವೆಚ್ಚದ ಶಿಮುಲ್ ಹಾಲು, ಮೊಸರು ಮತ್ತು ಮಜ್ಜಿಗೆ ಪ್ಯಾಕಿಂಗ್ ಘಟಕ, ಎಪಿಎಂಸಿ ಆವರಣದಲ್ಲಿ 8 ಕೋಟಿ ವೆಚ್ಚದ ಮ್ಯಾಮ್‌ಕೋಸ್ ಆಡಳಿತ ಕಚೇರಿ, ಮೇಗರವಳ್ಳಿ–ಆಗುಂಬೆವರೆಗೆ 96 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ, ನೂರಾರು ಕೋಟಿ ವೆಚ್ಚದ ಕಾಮಗಾರಿಗಳ ಉದ್ಘಾಟನೆ ಮಾಡಿದ್ದಾರೆ. ತಮ್ಮ 60ನೇ ವರ್ಷದ ಹುಟ್ಟುಹಬ್ಬಕ್ಕೆ ಮಾಜಿ ಪ್ರಧಾನಿ ದಿವಂಗತ ಅಟಲ್ ಬಿಹಾರಿ ವಾಜಪೇಯಿಯವರು ಬಂದಿದ್ದರು. ಇದೀಗ 80ನೇ ವರ್ಷದ ಹುಟ್ಟುಹಬ್ಬಕ್ಕೆ ಪ್ರಧಾನಿ ನರೇಂದ್ರ ಮೋದಿಯವರು ಬಂದು ಶಿವಮೊಗ್ಗ ವಿಮಾನ ನಿಲ್ದಾಣ ಉದ್ಘಾಟಿಸಿರುವುದು ಎರಡೂ ಹುಟ್ಟುಹಬ್ಬವೂ ವಿಶೇಷವಾಗಿದೆ ಎಂದರು.

ದೇಶವೇ ಮೆಚ್ಚಿದ ಆದರ್ಶ ವ್ಯಕ್ತಿ ಪ್ರಧಾನಿ ಮೋದಿ

ಶಿವಮೊಗ್ಗ, ಫೆ.27–ಇಂದು ನನ್ನ ಪಾಲಿನ ಸಾರ್ಥಕತೆಯ ದಿನವಾಗಿದೆ. ಇಂದು ನೂತನ ವಿಮಾನ ನಿಲ್ದಾಣ ಉದ್ಘಾಟಿಸಿದ ಪ್ರಧಾನಮಂತ್ರಿಗಳು ದೇಶವೇ ಮೆಚ್ಚಿದ ಆದರ್ಶ ವ್ಯಕ್ತಿಯಾಗಿದ್ದಾರೆಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೋಮವಾರ ಹೇಳಿದ್ದಾರೆ.

ಶಿವಮೊಗ್ಗದಲ್ಲಿ ನೂತನ ಏರ್‌ಪೋರ್ಟ್ ಉದ್ಘಾಟನಾ ಸಮಾರಂಭ ಸಮಾವೇಶದಲ್ಲಿ ಯಡಿಯೂರಪ್ಪ ಅವರು ತಮ್ಮ ಭಾಷಣದ ವೇಳೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರನ್ನು ಕೊಂಡಾಡಿದರು.

ಕೊಟ್ಟ ಮಾತಿನಂತೆ ಏರ್‌ಪೋರ್ಟ್ ನಿರ್ಮಾಣ ಮಾಡಿ ಉದ್ಘಾಟನೆ ಮಾಡಿದ್ದಾರೆ. ಈ ದಿನ ಬಹಳ ವೈಶಿಷ್ಟ್ಯಪೂರ್ಣವಾದದ್ದು ಮಲೆನಾಡು ಭಾಗದ ಜನರ ಕನಸು ನನಸಾಗುತ್ತಿರುವ ಶುಭ ಸಂಕೇತ. ಮೋದಿ ಆಶೀರ್ವಾದದಿಂದ ನಾಡಿನ ಜನರ ಸೇವೆ ಮಾಡಲು ಅವಕಾಶ ಸಿಕ್ಕಿದೆ. ಇಂತಹ ಅವಕಾಶ ನನಗೆ ಸಿಕ್ಕಿದ್ದಕ್ಕೆ ಜನರಿಗೆ ನಾನು ಋಣಿಯಾಗಿದ್ದೇನೆ.

ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಮಾತಿನಂತೆ ಕೆಲಸ ಮಾಡಿದ್ದೇನೆ. ಸಾಮಾಜಿಕ ನ್ಯಾಯವನ್ನು ಎಲ್ಲರಿಗೂ ಒದಗಿಸಿಕೊಟ್ಟಿದ್ದೇನೆ. ಮೋದಿ ನೇತೃತ್ವದಲ್ಲಿ ಡಬಲ್ ಇಂಜಿನ್ ಸರ್ಕಾರದಿಂದ ಸಾಕಷ್ಟು ಅಭಿವೃದ್ಧಿಯಾಗಿದೆ ಎಂದರು. ಇದೇ ವೇಳೆ ತಾವು ರಾಜ್ಯದಲ್ಲಿ ಬಿಜೆಪಿ ಕಟ್ಟಿದ ದಿನಗಳನ್ನು, ಬಿಜೆಪಿ ಆಡಳಿತವನ್ನು ಯಡಿಯೂರಪ್ಪ ಅವರು ಸ್ಮರಿಸಿದರು.

ಬೆಳಗಾವಿಯಿಂದಲೇ ದೇಶದ ಎಲ್ಲ ರೈತರ ಬ್ಯಾಂಕ್ ಖಾತೆಗೆ ಪಿಎಂ ಕಿಸಾನ್ ಸಮ್ಮಾನ್ ಹಣ ಜಮೆ ಮಾಡಿದ ಪ್ರಧಾನಿ ಮೋದಿ

ಬೆಳಗಾವಿ, ಫೆ.27– ಪ್ರಧಾನಿ ನರೇಂದ್ರ ಮೋದಿ ಬೆಳಗಾವಿಯಲ್ಲಿಂದು ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ರೈತರ ಖಾತೆಗಳಿಗೆ 13ನೇ ಕಂತಿನ ಹಣವನ್ನು ಜಮೆ ಮಾಡಿದರು. 8 ಕೋಟಿಗೂ ಅಧಿಕ ರೈತರ ಖಾತೆಗಳಿಗೆ ತಲಾ 2 ಸಾವಿರದಂತೆ ಒಟ್ಟಾರೆ ರೂ. 16,800 ಕೋಟಿ ಹಣವನ್ನು ನೇರವಾಗಿ ವರ್ಗಾವಣೆ ಮಾಡುವ ಮೂಲಕ ಹೋಳಿ ಗಿಫ್ಟ್ ನೀಡಿದರು.

ಇದೇ ವೇಳೆ ಜಲ ಜೀವನ್ ಮಿಷನ್ ಯೋಜನೆಯಡಿ ರೂ. 2,240 ಕೋಟಿ ಮೊತ್ತದ ಜಲಜೀವನ್ ಮಿಷನ್ ಯೋಜನೆಗೆ ಶಂಕುಸ್ಥಾಪನೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿದರು. ನಂತರ ಮಾತನಾಡಿದ ಪ್ರಧಾನಿ, ಬೆಳಗಾವಿಯಿಂದ ದೇಶದ ಎಲ್ಲ ರೈತರ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆಯಾಗಿದೆ. 50 ಸಾವಿರ ಕೋಟಿಗೂ ಹೆಚ್ಚು ಹಣ ಮಹಿಳೆಯರ ಖಾತೆಗೆ ಹಣ ತಲುಪಿದೆ. ದೇಶದಲ್ಲಿ ಅತಿ ಹೆಚ್ಚು ಸಣ್ಣ ರೈತರಿದ್ದು, ಈ ಯೋಜನೆಯಿಂದ ಅವರಿಗೆ ಅನುಕೂಲವಾಗಲಿದೆ. ಯಾವುದೇ ಭ್ರಷ್ಟಾಚಾರವಿಲ್ಲದೆ ಹಣ ರೈತರ ಕೈ ಸೇರುತ್ತಿದೆ ಮೊಬೈಲ್ ನಲ್ಲಿ ಮೆಸೇಜ್ ಪರಿಶೀಲಿಸಿ ಎಂದರು.

2014ರ ನಂತರ ಕೃಷಿ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆ



ಆಗಿದೆ. ಕೃಷಿಯಲ್ಲಿ ಆಧುನಿಕ ಬದಲಾವಣೆ ತರಲಾಗುತ್ತಿದೆ. ಪ್ರಸ್ತುತ ವರ್ಷ ಕೃಷಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಪ್ರಾಕೃತಿಕ ಸಹಜ ಕೃಷಿ ಕಾಯಕ್ಕೆ ಆಧ್ಯತೆ ನೀಡಲಾಗುತ್ತಿದೆ. ಸಿರಿ ಧಾನ್ಯ ಬೆಳೆಗಳ ಬೆಳವಣಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಕರ್ನಾಟಕದಲ್ಲಿ ರೈಲ್ವೆ ಕಾಮಗಾರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಬೆಳಗಾವಿ ರೈಲು ನಿಲ್ದಾಣ ಆಶ್ಚರ್ಯ ಮತ್ತು ಅಭಿಮಾನ ಉಂಟು ಮಾಡುವಷ್ಟು ಅಧುನೀಕರಣಗೊಳಿಸಲಾಗಿದೆ. ಡಬಲ್ ಎಂಜಿನ್ ಸರ್ಕಾರದ ಕಾರಣ ಮನೆ ಮನೆಗಳಿಗೆ ಕುಡಿಯುವ ನೀರು ಪೂರೈಸಲಾಗುತ್ತಿದೆ.


ಕಾಂಗ್ರೆಸ್ ಕುಟುಂಬದ ರಾಜಕಾರಣ ದೇವರಾಜ್ ಅರಸ್, ವೀರೇಂದ್ರ ಪಾಟೀಲರ ಅಪಮಾನ ಮಾಡಿದೆ. ಮಲ್ಲಿಕಾರ್ಜುನ ಖರ್ಗೆ ಅವರಿಗೆ ಗೌರವಿಸುತ್ತೇನೆ. ಆದರೆ, ಕಾಂಗ್ರೆಸ್‌ನಲ್ಲಿ ಅವರಿಗೆ ಸೂಕ್ತ ಗೌರವ ದೊರೆಯುತ್ತಿಲ್ಲ. ರಿಮೋಟ್ ಕಂಟ್ರೋಲ್ ಮೂಲಕ ನಿಯಂತ್ರಿಸಲಾಗುತ್ತಿದೆ. ಕಾಂಗ್ರೆಸ್ ಪಕ್ಷ ನಿರಾಸೆಯ ಭಾವದಲ್ಲಿ ನರಳುತ್ತಿದೆ ಎಂದು ಟೀಕಿಸಿದರು. ಬೆಳಗಾವಿ ಜನತೆ ನೀಡಿದ ಅಭೂತಪೂರ್ವ ಸ್ವಾಗತಕ್ಕೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುವುದಾಗಿ ತಿಳಿಸಿದರು. ಬೆಳಗಾವಿ ಜನತೆ ತೋರಿದ ಅಗಮ್ಯ ಪ್ರೀತಿಯನ್ನು ಕರ್ನಾಟಕದ ಅಭಿವೃದ್ಧಿಯ ಮೂಲಕ ಬಡ್ಡಿಸಹಿತ ಋಣ ತೀರಿಸುವುದಾಗಿ ಭರವಸೆ ನೀಡಿದರು.

ಪ್ರಧಾನಿಗೆ ಐತಿಹಾಸಿಕ ಸ್ವಾಗತ: ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಮಾತನಾಡಿ. ಪ್ರಧಾನಿಯವರಿಗೆ ರೋಡ್ ಶೋ ಮೂಲಕ ಕೋರಿದ ಭವ್ಯ ಸ್ವಾಗತ ಐತಿಹಾಸಿಕವಾಗಿದೆ. ಕಿಸಾನ್ ಸಮ್ಮಾನ್ ಯೋಜನೆಯ ಮೂಲಕ ರೈತರಿಗೆ ನೇರವಾಗಿ ಹಣ ಸಂದಾಯವಾಗುವುದು ವಿಶ್ವದಲ್ಲಿಯೇ ಮಾದರಿಯಾಗಿದೆ. ಬೆಳೆವಿಮೆ ಯೋಜನೆಯ ಈ ವರ್ಷ ಅತೀ ಹೆಚ್ಚು ಬಿಡುಗಡೆ ಆಗಿದೆ. ರೈತರಿಗಾಗಿ ವಿಶೇಷ ಯೋಜನೆಗಳ ಎಂ.ಎಚ್.ಪಿ. ಜಾರಿಗೊಳಿಸಲಾಗಿದೆ. ನೂತನ ರೈಲು ನಿಲ್ದಾಣ, ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ದಾಖಲಾರ್ಹ ಕೆಲಸ, ಹುಬ್ಬಳ್ಳಿ ಅಂಕೋಲ, ಧಾರವಾಡ– ಬೆಳಗಾವಿ ರೈಲು ಮಾರ್ಗ ಶೀಘ್ರದಲ್ಲಿ ನಿರ್ಮಾಣವಾಗಲಿದೆ. ಎಂದು ತಿಳಿಸಿದರು.

ಹೆಚ್ಚಿನ ಪಿಂಚಣಿಗೆ ಅರ್ಜಿ ಸಲ್ಲಿಸಲು ಮೇ3ರ ತನಕ ಕಾಲಾವಕಾಶ

ನವದೆಹಲಿ: ಉದ್ಯೋಗಿಗಳ ಪಿಂಚಣಿ ಯೋಜನೆ (ಇಪಿಎಸ್) ಅಡಿಯಲ್ಲಿ ಅಧಿಕ ಪಿಂಚಣಿ ಪಡೆಯಲು ಉದ್ಯೋಗಿಗಳು ಹಾಗೂ ಉದ್ಯೋಗದಾತ ಸಂಸ್ಥೆಗಳು ಜಂಟಿಯಾಗಿ ಅರ್ಜಿ ಸಲ್ಲಿಸಲು ನೀಡಿದ ಕಾಲಾವಕಾಶವನ್ನು ಇಪಿಎಫ್‌ಒ ಮೇ 3ರ ತನಕ ವಿಸ್ತರಿಸಿದೆ. ಈ ಹಿಂದೆ 2023ರ ಮಾರ್ಚ್ 3ರ ತನಕ ಅರ್ಜಿ ಸಲ್ಲಿಕೆಗೆ ಕಾಲಾವಕಾಶ ನೀಡಲಾಗಿತ್ತು ಇಪಿಎಫ್‌ಒ ಪೋರ್ಟಲ್ ನಲ್ಲಿ ಇದಕ್ಕಾಗಿ ಅರ್ಜಿ ಸಲ್ಲಿಸಲು ಯುಆರ್‌ಎಲ್ ಸಕ್ರಿಯಗೊಳಿಸಲಾಗಿದ್ದು,ಅದರಲ್ಲಿ ಅಧಿಕ ಪಿಂಚಣಿ ಪಡೆಯಲು ಅರ್ಜಿ ಸಲ್ಲಿಕೆಗೆ ಮೇ 3, 2023 ಕೊನೆಯ ದಿನಾಂಕವಾಗಿದೆ. ಉದ್ಯೋಗಿಗಳ ಪಿಂಚಣಿ ಯೋಜನೆ (ಇಪಿಎಸ್) ಅಡಿಯಲ್ಲಿ ನಿವೃತ್ತಿ ಬಳಿಕ ಅಧಿಕ ಪಿಂಚಣಿ ಪಡೆಯಲು ಯಾರು ಅರ್ಹರಾಗಿದ್ದರೋ ಅಂಥ ಉದ್ಯೋಗಿಗಳಿಗೆ ಇಪಿಎಫ್‌ಒ ಫೆ.20ರಂದು ಮಾರ್ಗಸೂಚಿ ಬಿಡುಗಡೆಗೊಳಿಸಿತ್ತು. ಸುಪ್ರೀಂಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಅಧಿಕ ಪಿಂಚಣಿ ಕೋರಿ ಅರ್ಜಿ ಸಲ್ಲಿಸಲು ಇಪಿಎಫ್ ಒ ಅವಕಾಶ ನೀಡಿತ್ತು. ಸುಪ್ರೀಂಕೋರ್ಟ್ ಇತ್ತೀಚಿನ ತೀರ್ಪು 2023ರ ಮಾರ್ಚ್ 3ರ ತನಕ ಅರ್ಜಿ ಸಲ್ಲಿಕೆಗೆ ಕಾಲಾವಕಾಶ ನೀಡಿತ್ತು.

ಪಡುವಾರಹಳ್ಳಿ ಜೋಡಿ ಮಾರಮ್ಮ ಜಾತ್ರಾ ಮಹೋತ್ಸವ ಸಂಪನ್ನ



ಮೈಸೂರು, ಫೆ.27 (ಎಂಕೆ)– ಸಾವಿರಾರು ಭಕ್ತರ ಹರಕೆ ಸಲ್ಲಿಕೆಯೊಂದಿಗೆ ಪಡುವಾರಹಳ್ಳಿ ಜೋಡಿ ಮಾರಮ್ಮ ಜಾತ್ರಾ ಮಹೋತ್ಸವ ಸಂಪನ್ನಗೊಂಡಿತು.

ಫೆ.25ರ ಮಧ್ಯರಾತ್ರಿ 2 ಗಂಟೆಯಿಂದ ವಿಶೇಷ ಪೂಜೆಯೊಂದಿಗೆ ಆರಂಭವಾದ 3 ದಿನಗಳ ಜಾತ್ರಾ ಉತ್ಸವದಲ್ಲಿ ಸಾವಿ ರಾರು ಭಕ್ತರು, ಗ್ರಾಮಸ್ಥರು ಭಾಗವಹಿಸಿ ಮಾರಮ್ಮನ ಕೃಪೆಗೆ ಪಾತ್ರರಾದರು. ಫೆ.27ರ ಮಧ್ಯಾಹ್ನ 3 ಗಂಟೆಯಿಂದ ಸಂಜೆ 7 ಗಂಟೆವರೆಗೆ ಪಡುವಾರಹಳ್ಳಿ ಪ್ರಮುಖ ಬೀದಿಗಳಲ್ಲಿ ನಡೆದ ಮೆರವಣಿಗೆಯಲ್ಲಿ ನೂರಾರು ಮಂದಿ ಭಕ್ತರು ಬಾಯಿಗೆ ಬೀಗ ಹರಕೆ ಸಲ್ಲಿಸಿದರು. ಬಳಿಕ ಜೋಡಿ ಮಾರಮ್ಮನಿಗೆ ವಿಶೇಷ ಪೂಜೆ ಸಲ್ಲಿಸಿ ಒಳಿತಾಗುವಂತೆ ಪ್ರಾರ್ಥಿಸಲಾಯಿತು. ನಂತರ ರಾತ್ರಿ 9 ಗಂಟೆಯಿಂದ ಮಾರಿಗುಡಿ ಆವರಣದಲ್ಲಿ 'ಕೃಷ್ಣಲೀಲಾ' ಪೌರಾಣಿಕ ನಾಟಕ ಪ್ರದರ್ಶನವಾಯಿತು.

ಬಾಡೂಟ: ಜೋಡಿ ಮಾರಮ್ಮ ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ್ದ ನೆಂಟರಿಷ್ಟರಿಗೆ ನಾಳೆ(ಫೆ.28) ಬಾಡೂಟದ ಸತ್ಕಾರ ನಡೆಯಲಿದೆ. ಮನೆಗಳಲ್ಲಿ ಬಾಡೂಟ ತಯಾರಿಸಿ ಎಲ್ಲರೂ ಒಟ್ಟಾಗಿ ಸವಿಯಲಿದ್ದಾರೆ. ನಾಡಕುಸ್ತಿ ಪಂದ್ಯಾವಳಿ ಆಯೋಜನೆ, ನಾಟಕ ಪ್ರದರ್ಶನ ಹಾಗೂ ಹರಕೆ ಸಲ್ಲಿಕೆಯೊಂದಿಗೆ ಜರುಗುವ ಪಡುವಾರಹಳ್ಳಿ ಜೋಡಿ ಮಾರಮ್ಮ ಜಾತ್ರಾ ಉತ್ಸವ ಹತ್ತು–ಹಲವು ವಿಶೇಷತೆಗಳನ್ನು ಹೊಂದಿದ್ದು, ಅಕ್ಕ–ಪಕ್ಕದ ಬಡಾವಣೆಗಳ ನಿವಾಸಿಗಳು ಸೇರಿದಂತೆ ಸಾವಿರಾರು ಮಂದಿ ಭಾಗವಹಿಸಿದ್ದರು.



ನಕ್ಕರೆ ಅದೇ ಸ್ವರ್ಗ

ಆತ : (ಗಡಿಯಾರದ ಅಂಗಡಿಗೆ ಹಿಂದಿನ ದಿನ ಖರೀದಿಸಿದ್ದ ಗಡಿಯಾರ ತಂದು ರೇಗಿ) ಏನ್ರಿ ಈ ಗಡಿಯಾರ 30 ನಿಮಿಷ ಹಿಂದೆ ಹೋಗುತ್ತದೆ. ಮೊದಲ ದಿನದಿಂದಲೇ.

ಅಂಗಡಿಯಾತ : ನೀವು ತೆಗೆದುಕೊಳ್ಳುವಾಗ 30 ರಷ್ಟು ಡಿಸ್ಕೌಂಟ್ ಬೋರ್ಡ್ ನೋಡಲಿಲ್ಲವೇ!

ಮೈಸೂರು ಮಿತ್ರ
ಮಂಗಳವಾರ, 28 ಫೆಬ್ರವರಿ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಸೋಲು ಎಂದರೇನು? ಏನಿಲ್ಲ, ಅದೊಂದು ಉತ್ತಮತೆಯ ಕಡೆಗೆ ಮೊದಲ ಹೆಜ್ಜೆ – ವೆಂಡಲ್ ಫಿಲಿಪ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡುಗೆ ಮಾಡುವವನು ಒಬ್ಬನಾದರೆ ಹದ ಹಿಡಿಯುವವರು ಒಂಭತ್ತು ಮಂದಿ

ನಿಮ್ಮ ಪತ್ರಗಳು

ಅಕ್ರಮಾದಿತ್ಯರು!

ಮಾನ್ಯರೆ,

ರಾಜ್ಯಾದ್ಯಂತ 493 ನಿರ್ಜೀವ ಕೆರೆಗಳನ್ನು ವಶಕ್ಕೆ ಪಡೆದು 52,000 ಮನೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ ಎಂದು ವಸತಿ ಸಚಿವ ವಿ. ಸೋಮಣ್ಣ ಕೊಚ್ಚಿಕೊಂಡಿದ್ದಾರೆ! ನಿರ್ಜೀವ ಕೆರೆಗಳನ್ನು ವಶಕ್ಕೆ ಪಡೆಯುವ ಮುನ್ನ ಆ ಕೆರೆಗಳನ್ನು ನಿರ್ಜೀವಗೊಳಿಸಿದವರನ್ನು ಹಾಗೂ ರಾಜಕಾಲುವೆಯನ್ನು ಒತ್ತುವರಿ ಮಾಡಿರುವ ಅಕ್ರಮಾದಿತ್ಯರನ್ನು ಪತ್ತೆಹಚ್ಚಿ ಹೆಡೆಮುರಿಕಟ್ಟಿ ಜೈಲಿಗಟ್ಟಬೇಕು ಅಥವಾ ನಿರ್ಜೀವಗೊಳಿಸಬೇಕು! ಇಲ್ಲದಿದ್ದರೆ ಈ ಅಕ್ರಮಾದಿತ್ಯರು ಕೆರೆ ಹಾಗೂ ರಾಜ ಕಾಲುವೆಗಳನ್ನು ನಿರ್ಜೀವಗೊಳಿಸಿದಂತೆ ರಾಜ್ಯದಲ್ಲಿರುವ ಎಲ್ಲಾ ಸರಕಾರಿ ಶಾಲೆ ಮತ್ತು ಸರಕಾರಿ ಆಸ್ಪತ್ರೆಗಳನ್ನೂ ನಿರ್ಜೀವಗೊಳಿಸಿಯಾರು!

ಸೋಮಣ್ಣನವರೇ.... ಪ್ರಕೃತಿ ಮುನಿದರೆ ನೀವು ನಿರ್ಮಿಸುವ 52,000 ಮನೆಗಳನ್ನೂ ನಿಸರ್ಗವೇ ನಿರ್ಜೀವಗೊಳಿಸಿ ವಶಪಡಿಸಿಕೊಂಡು ನಿಮ್ಮನ್ನು ನಿರ್ವಸತಿ ಸಚಿವರನ್ನಾಗಿ ಮಾಡಬಹುದು..ಹುಷಾರ್!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಹಿಟ್ ಅಂಡ್ ರನ್‌ಗೆ ಕಡಿವಾಣ ಅಗತ್ಯ

ಮಾನ್ಯರೆ,

ವಾಹನ ಅಪಘಾತಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ವಿಶೇಷವಾಗಿ ಹಿಟ್ ಅಂಡ್ ರನ್ ಪ್ರಕರಣಗಳಲ್ಲಿನ ಏರಿಕೆ ಕಳವಳಕಾರಿಯಾಗಿದೆ. ಇಂತಹ ಘಟನೆಗಳಿಂದ ಮನುಷ್ಯನಲ್ಲಿ ಮಾನವೀಯತೆ ಇದೆಯೋ ಇಲ್ಲವೋ ಎಂಬ ವಾತಾವರಣ ನಿರ್ಮಾಣವಾಗಿದೆ.

ಹಿಟ್ ಅಂಡ್ ರನ್ ಪ್ರಕರಣಗಳಲ್ಲಿ ಅಪರಾಧಿಗಳನ್ನು ಪತ್ತೆ ಹಚ್ಚಿ ಶಿಕ್ಷೆಗೊಳಪಡಿಸುವಲ್ಲಿ ಪೊಲೀಸರು ವಿಫಲರಾಗುತ್ತಿದ್ದು ಇಂತಹ ನಾಲ್ಕು ಪ್ರಕರಣಗಳು ಸಂಭವಿಸಿದರೆ ಒಂದರಲ್ಲೂ ಆರೋಪಿಯನ್ನು ಪತ್ತೆ ಹಚ್ಚದಿರುವುದು ದುರದೃಷ್ಟಕರವಾಗಿದೆ. ಅಂಕಿ ಅಂಶಗಳ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 2019 ರಿಂದ 2023ರ ಜನವರಿವರೆಗೆ 4,549 ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 1187 ಪ್ರಕರಣಗಳು ಪತ್ತೆಯಾಗದಿರುವುದು ಆತಂಕವನ್ನುಂಟು ಮಾಡಿದೆ.

ಹಿಟ್ ಅಂಡ್ ರನ್ ಪ್ರಕರಣಗಳಿಂದಾಗಿ 952 ಮಂದಿ ಪ್ರಾಣ ಕಳೆದುಕೊಂಡಿರುವುದು ಮತ್ತು 3807 ಮಂದಿ ಗಾಯಗೊಂಡಿರುವುದು ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಇಂತಹ ಪ್ರಕರಣಗಳು ವಾಹನ ಚಾಲಕರ ಅಜಾಗರೂಕತೆಯಿಂದ, ಮದ್ಯ ಸೇವನೆ ಮಾಡಿ ವಾಹನ ಚಲಾವಣೆ ಮಾಡುವುದರಿಂದ, 18 ವರ್ಷದೊಳಗಿನ ಯುವಕರ ವಾಹನ ಚಲಾವಣೆ, ಅಪಘಾತ ಸಂಭವಿಸಿದಾಗ ಎಲ್ಲಿ ಸಾರ್ವಜನಿಕರಿಂದ ಶಿಕ್ಷೆಗೊಳಗಾಬೇಕಾಗುತ್ತದೆ ಎಂಬ ಭಯವು ಮುಖ್ಯ ಕಾರಣವಾಗಿದೆ. ಬೆಂಗಳೂರು ಮಹಾನಗರದಲ್ಲಿ ಇಂತಹ ಘಟನೆಗಳು ಸಾಮಾನ್ಯವಾಗಿದೆ. ವಯಸ್ಸಾದ 71ರ ವೃದ್ಧನನ್ನು ಐದು ಕಿಮೀ ದೂರ ಎಳೆದುಕೊಂಡು ಹೋಗಿರುವುದು ನಮ್ಮ ಕಣ್ಣ ಮುಂದಿದೆ. ಜನವರಿ 2023ರಲ್ಲಿ ರಾಜ್ಯದಲ್ಲಿ ಒಟ್ಟು 125 ದಾಖಲಾದ ಹಿಟ್ ಅಂಡ್ ರನ್ ಪ್ರಕರಣಗಳಲ್ಲಿ 26 ಮಾರಣಾಂತಿಕ ಮತ್ತು 99 ಮಾರಣಾಂತಿಕವಲ್ಲದ ಪ್ರಕರಣಗಳು ಸಂಭವಿಸಿವೆ. ಇದರಲ್ಲಿ 109 ಪ್ರಕರಣಗಳು ಬೆಂಗಳೂರಿನಲ್ಲಿ ದಾಖಲಾಗಿರುವುದು ವಿಶೇಷ ಮತ್ತು ಯೋಚಿಸುವ ವಿಷಯವಾಗಿದೆ.

ಸರ್ಕಾರ ಹಿಟ್ ಅಂಡ್ ರನ್ ಪ್ರಕರಣಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಅವಶ್ಯಕತೆಯಿದ್ದು, ಶಾಲೆಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಈ ಕುರಿತಾಗಿ ಅರಿವು ಮೂಡಿಸಬೇಕು ಮತ್ತು ಶಾಲಾ ಪಠ್ಯಗಳಲ್ಲಿ ಅಪಘಾತ ಮತ್ತು ಹಿಟ್ ಅಂಡ್ ರನ್ ಪ್ರಕರಣಗಳ ಕುರಿತಾಗಿ ಪಠ್ಯವನ್ನು ಅಳವಡಿಸಬೇಕು. ಈ ಕುರಿತಾಗಿ ಕಾರ್ಯಾಗಾರಗಳನ್ನು ನಡೆಸಿ ಜನರಲ್ಲಿ ಇಂತಹ ಪ್ರಕರಣಗಳ ಬಗ್ಗೆ ತಿಳುವಳಿಕೆ ಮೂಡುವಂತೆ ಮಾಡಬೇಕು. ಹಿಟ್ ಅಂಡ್ ರನ್ ಪ್ರಕರಣಗಳಲ್ಲಿ ಅಪರಾಧಿಗೆ ಉಗ್ರ ಶಿಕ್ಷೆ ನೀಡುವಂತಾದರೆ, ಇಂತಹ ಪ್ರಕರಣಗಳ ಮೇಲೆ ಕಡಿವಾಣ ಹಾಕಬಹುದು ಮತ್ತು ಅಮಾಯಕ ಪಾದಚಾರಿಗಳ ಪ್ರಾಣ ಉಳಿಸಬಹುದಾಗಿದೆ.

–ರಾಸುಮ ಭಟ್, ಚಿಕ್ಕಮಗಳೂರು.

ಮೈಸೂರಲ್ಲಿ ಪುಂಡರ ಅಟ್ಟಹಾಸ!

ಮಾನ್ಯರೆ,

ಸೋಮವಾರ ಮಧ್ಯಾಹ್ನ 2.30ರ ಸಮಯದಲ್ಲಿ ಗೋಕುಲಂನ ತ್ರಿವೇಣಿ ಸರ್ಕಲ್‌ನಲ್ಲಿ ಹೋಗುತ್ತಿದ್ದ ಆಟೋವೊಂದರಲ್ಲಿ ಕುಳಿತ ವ್ಯಕ್ತಿ ದಿಢೀರ್ ಒಂದು ಬಾಟಲಿ ತೆಗೆದು ರಸ್ತೆಯಲ್ಲಿ, ಅದು ಸಾಕಷ್ಟು ವಾಹನಗಳು ಸಂಚರಿಸುತ್ತಿರುವಂತೆಯೇ ಬೇಕಂತಲೇ ಜೋರಾಗಿ ಎಸೆದ. ನಂತರ ಅವನಿದ್ದ ಆಟೋ ಸ್ವಲ್ಪ ಮುಂದೆ ಹೋಗಿ ನಿಂತಿತು. ಆದರೆ ಅಲ್ಲಿ ಹೋಗುತ್ತಿದ್ದ ಪಾದಚಾರಿಗಳು, ನಾನಾ ರೀತಿಯ ವಾಹನ ಸವಾರರು ದಂಗಾದರು. ಕೆಲಕ್ಷಣ ಒಂದು ರೀತಿ ಭಯದ ವಾತಾವರಣ ಉಂಟಾಯಿತು. ರಸ್ತೆಯಲ್ಲಿ ಒಡೆದ ಬಾಟಲಿ ಚೂರು ಚೆಲ್ಲಾಪಿಲ್ಲಿಯಾಗಿ ಬಿದ್ದವು. ವಾಹನ ಸವಾರರು ಅಲ್ಲಿ ಗಮನಿಸದೇ ಮುಂದೆ ಸಾಗಿದರೆ ಅನಾಹುತ ಗ್ಯಾರಂಟಿ. ಪಕ್ಕದಲ್ಲೇ ಬಾರ್ ಇದೆ. ಅಲ್ಲಿ ಸಿಸಿ ಕ್ಯಾಮರಾ ವಿದ್ದರೆ ದಯವಿಟ್ಟು ಪೊಲೀಸರು ಫುಟೇಜ್ ಸಂಗ್ರಹಿಸಿ, ಸೂಕ್ತ ಕ್ರಮ ಕೈಗೊಳ್ಳದಿದ್ದರೆ, ಇನ್ನಿತರರಿಗೆ ಇದು ಪ್ರೇರಣೆ ಆದೀತು.

–ರಾಮಚಂದ್ರ, ಹೆಬ್ಬಾಳು.


ರಾವಂದೂರಿನಲ್ಲಿ ಬಿಎಸ್‌ಎನ್‌ಎಲ್ ದೂರವಾಣಿ ಕೇಂದ್ರ ಸ್ಥಾಪಿಸಿ

ಮಾನ್ಯರೆ,

ಖಾಸಗಿ ಕಂಪನಿಗಳ ಭರಾಟೆಯಲ್ಲಿ ಅತ್ಯಂತ ಪರಿಣಾಮಕಾರಿ ರೀತಿಯಲ್ಲಿ ಸವಾಲೊಡ್ಡುತ್ತಿರುವ ಬಿಎಸ್‌ಎನ್‌ಎಲ್ ಕಂಪನಿಯು ಇನ್ನಷ್ಟು ತ್ವರಿತವಾಗಿ ಎಲ್ಲಾ ಕಡೆ ಬಲಗೊಳಿಸಬೇಕಾಗಿರುವುದು ಇಂದು ಅತ್ಯವಶ್ಯಕವಾಗಿದೆ. ಈ ಮೊದಲು ಪಿರಿಯಾಪಟ್ಟಣ ತಾಲೂಕಿನ ರಾವಂದೂರಿನಲ್ಲಿ ಬಿಎಸ್‌ಎನ್‌ಎಲ್ ದೂರವಾಣಿ ಕೇಂದ್ರವು ಸರ್ಕಾರಿ ಆಸ್ಪತ್ರೆಗೆ ಹೋಗುವ ಒಂದು ಖಾಸಗಿ ಮನೆಯಲ್ಲಿ ಸ್ಥಾಪಿತವಾಗಿ ಕಾರ್ಯನಿರ್ವಹಿಸುತ್ತಿತ್ತು. ಆದರೆ ಇತ್ತೀಚೆಗೆ ಅದು ಕಾಣೆಯಾಗಿದೆ. ಅಂದರೆ ಈಗ ಕಾರ್ಯನಿರ್ವಹಿಸುತ್ತಿಲ್ಲ. ಈ ಹೋಬಳಿ ಕೇಂದ್ರದ ಆಸುಪಾಸಿನ ತುಂಬಾ ಗ್ರಾಹಕರು ಬಿಎಸ್‌ಎನ್‌ಎಲ್‌ನಿಂದ ಈಗ ಖಾಸಗಿ ನೆಟ್‌ವರ್ಕ್‌ಗೆ ಬದಲಾಗಿದ್ದಾರೆ. ಎಲ್ಲಾ ತರಹದ ಅತ್ಯಾಕರ್ಷಕ ಉಡುಗೊರೆ ನೀಡುತ್ತಿರುವ ಬಿಎಸ್‌ಎನ್‌ಎಲ್ ಇಲ್ಲಿ ಕಾರ್ಯಾರಂಭ ಮಾಡಿದರೆ ತುಂಬಾ ಜನರಿಗೆ ಅನುಕೂಲವಾಗುತ್ತದೆ. ಹಾಗಾಗಿ ದಯಮಾಡಿ ಸಂಬಂಧಿಸಿದ ಅಧಿಕಾರಿಗಳು ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ, ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಈ ಮೂಲಕ ಕೋರಲಾಗಿದೆ.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ, ಪಿರಿಯಾಪಟ್ಟಣ ತಾ.

ಮೇಲಕ್ಕೆ!



ಮಾನ್ಯರೆ,

"ಸಿದ್ದರಾಮಯ್ಯನವರನ್ನು ಮೇಲಕ್ಕೆ ಕಳುಹಿಸಬೇಕು" ಎಂಬ ಅಶ್ವತ್ಥ (ಅಸ್ವಸ್ಥ?) ನಾರಾಯಣ ಅವರ ಹೇಳಿಕೆಗೆ ಪ್ರತಿಭಟನೆಗಳ ಮಹಾಪೂರ! ಆದರೆ ವಸ್ತುಸ್ಥಿತಿ ಏನು? ಮೇಲಕ್ಕೆ ಎಂದರೆ 'ಮೇಲ್ಮನೆಗೆ' ಎಂಬುದು ಅಶ್ವತ್ಥರ ಅಭಿಪ್ರಾಯವೇ ಹೊರತು, ಅದರಲ್ಲಿ ಕೆಟ್ಟ ಅರ್ಥವೇನೂ ಇರಲಿಕ್ಕಿಲ್ಲ!

ಓದು(ಡು): ವಿಪುಲವಾಗಿ ಹೊರಬರುತ್ತಿವೆ, ಪುಸ್ತಕಗಳು; ಓದುವವರೇ ಇಲ್ಲ! ಪುಸ್ತಕ ಎಂದರೆ ಈಗ ದೂರ ಓಡುವವರೇ ಎಲ್ಲ!

'ಕಾಲಾಯ...': ಹಳೆಗಾಲ ಹೋಯಿತು, ಇನ್ನು ಹೊಸ ಕಾಲ. ಸರ್ವತ್ರ ನಾರಿಯರ ಪಾರುಪತ್ಯ ಮತ್ತು ಪೌರೋಹಿತ್ಯ!

–ಸಿಪಿಕೆ, ಮೈಸೂರು.


ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

200 ರೂ. ಖರ್ಚಿನ ಪ್ರಯೋಗದಿಂದ ನೊಬೆಲ್ ಪುರಸ್ಕಾರಕ್ಕೆ ಪಾತ್ರರಾದ ಸರ್ ಸಿ.ವಿ.ರಾಮನ್

ಫೆ.28, ರಾಷ್ಟ್ರೀಯ ವಿಜ್ಞಾನ ದಿನ ನಿಮಿತ್ತ ಈ ವಿಶೇಷ ಲೇಖನ

ಭಾರತದಲ್ಲಷ್ಟೇ ಅಲ್ಲದೆ ಇಡೀ ಏಷ್ಯಾದಲ್ಲಿ ಮೊಟ್ಟ ಮೊದಲಿಗೆ ಭೌತ ವಿಜ್ಞಾನದಲ್ಲಿ ನೊಬೆಲ್ ಪ್ರಶಸ್ತಿ ಪಡೆದು ಭಾರತದ ಕೀರ್ತಿಯನ್ನು ಪ್ರಪಂಚದ ಉದ್ದಗಲಕ್ಕೂ ಬೆಳಗಿದ ಪ್ರಚಂಡ ಪ್ರತಿಭೆಯ ಸರ್ ಸಿ.ವಿ.ರಾಮನ್ ಯಾರಿಗೆ ತಾನೆ ಗೊತ್ತಿಲ್ಲ. ಅಗಾಧ ಪ್ರತಿಭೆಯ, ಅದ್ಭುತ ಆಲೋಚನಾ ಶಕ್ತಿಯ, ಅನನ್ಯ ಪ್ರಯೋಗಶೀಲತೆಯ, ಅಪ್ರತಿಮ ಸಾಧನೆಯ, ಅಪೂರ್ವ ವ್ಯಕ್ತಿತ್ವದ ವಿಜ್ಞಾನ ಲೋಕದ ಮಹಾಬೆಳಕು ಇವರು.

1928ನೇ ಇಸವಿಯು ಭಾರತವು ವಿಜ್ಞಾನ ಇತಿಹಾಸದ ಹೆದ್ದಾರಿಯಲ್ಲಿ ಮಹತ್ವದ ಮೈಲಿಗಲ್ಲು ಸ್ಥಾಪಿಸಿದ ವಿಶಿಷ್ಟ ವರ್ಷ. ಒಂದು ರೀತಿ ವಿಜ್ಞಾನ ಪ್ರಪಂಚದಲ್ಲಿ ಭಾರತಕ್ಕೆ ಸುವರ್ಣೋದಯವಾದ ವರ್ಷವದು. ಆ ವರ್ಷ ಫೆಬ್ರವರಿ 28 ರಂದು ಕನ್ನಡ ನಾಡಿನ ಬೆಂಗಳೂರಿನ ಪ್ರತಿಷ್ಠಿತ ಸೆಂಟ್ರಲ್ ಕಾಲೇಜಿನ ಭೌತಶಾಸ್ತ್ರ ಸಂಘದವರು ಸಿ.ವಿ. ರಾಮನ್ ಅವರನ್ನು ಉಪನ್ಯಾಸ ನೀಡಲು ಕರೆಸಿದ್ದರು. ಆ ಸಂದರ್ಭದಲ್ಲಿ ರಾಮನ್ನರು ಸೆಂಟ್ರಲ್ ಕಾಲೇಜಿನಲ್ಲಿ ಬೆಳಕನ್ನು ಕುರಿತು ತಮ್ಮದೇ ಆದ ಆವಿಷ್ಕಾರದ ಹೊಸ ಸಿದ್ಧಾಂತವನ್ನು ಪ್ರತಿಪಾದಿಸಿದರು. ಇದೇ ವಿಷಯ ಮುಂದೆ ಬೆಳಕಿನ ಬಗೆಗಿನ ಮಹತ್ವಪೂರ್ಣ ಸಂಶೋಧನೆಯಾಗಿ "ರಾಮನ್ ಪರಿಣಾಮ" ಎಂದು ಹೆಸರಾಗಿ ಅವರಿಗೆ ನೊಬೆಲ್ ಪುರಸ್ಕಾರ ತಂದುಕೊಟ್ಟದ್ದು ಈಗ ವಿಜ್ಞಾನ ಜಗತ್ತಿನ ಇತಿಹಾಸ. ಹಾಗೆಯೇ ಫೆಬ್ರವರಿ 28ರ ದಿನಕ್ಕೆ ವಿಶೇಷ ಮಹತ್ವ ನೀಡಿ ಪ್ರತಿವರ್ಷ ಅಂದು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸಲಾಗುತ್ತಿದೆ. ರಾಮನ್ ಪರಿಣಾಮದ ಬೆಳಕಿನ ಸಂಶೋಧನೆ ನಡೆದದ್ದು ಮತ್ತು ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಎರಡೂ ಒಂದೇ ದಿನ ಆಗಿರುವುದು ಹೆಚ್ಚು ಅರ್ಥಪೂರ್ಣವಾಗಿದೆ. ಈ ಹಿನ್ನೆಲೆಯಲ್ಲಿ ಫೆಬ್ರವರಿ 28ರ ರಾಷ್ಟ್ರೀಯ ವಿಜ್ಞಾನ ದಿನಾಚರಣೆಗೊಂದು ವಿಶಿಷ್ಟ ಮಹತ್ವವಿದೆ.

ಬೆಳಕಿನ ಆವಿಷ್ಕಾರದ ಹಾದಿಯಲ್ಲಿ ವಿಜ್ಞಾನ ವಿಶ್ವಕ್ಕೆ ಹೊಸಬೆಳಕು ನೀಡಿದ ಚಂದ್ರಶೇಖರ ವೆಂಕಟರಾಮನ್ ಜನಿಸಿದ್ದು 1888ರ ನವೆಂಬರ್ 7ರಂದು. ತಮಿಳುನಾಡಿನ ತಂಜಾವೂರು ಜಿಲ್ಲೆಯ ತಿರುಚಿನಾಪಳ್ಳಿ ಪಟ್ಟಣದ ಸಮೀಪದ ಅಯ್ಯನಪಟ್ಟಿ ಗ್ರಾಮ ಅವರ ಹುಟ್ಟೂರು. ತಂದೆ ಚಂದ್ರಶೇಖರ ಅಯ್ಯರ್ ವೃತ್ತಿಯಲ್ಲಿ ಭೌತಶಾಸ್ತ್ರ ಅಧ್ಯಾಪಕರು. ತಾಯಿ ಪಾರ್ವತಿ ಅಮ್ಮಾಳ್, ವಿದ್ಯಾವಂತ ಸುಸಂಸ್ಕೃತ ಕುಟುಂಬವಾದ್ದರಿಂದ ಬಾಲ್ಯದಲ್ಲೇ ರಾಮನ್ನರಿಗೆ ಒಳ್ಳೆ ಪರಿಸರ, ಪ್ರೋತ್ಸಾಹದ ವಾತಾವರಣವಿತ್ತು. ಹಾಗಾಗಿ ಚಿಕ್ಕಂದಿನಿಂದಲೇ ಪ್ರಚಂಡ ಪ್ರತಿಭೆಯಾಗಿ ಅರಳಿದ ರಾಮನ್ ತಮ್ಮ 11ನೇ ವಯಸ್ಸಿನಲ್ಲೇ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಮೊದಲ ರ‍್ಯಾಂಕಿನೊಂದಿಗೆ ಉತ್ತೀರ್ಣರಾಗಿದ್ದರು. ನಂತರ ಎರಡು ವರ್ಷಗಳಲ್ಲಿ ಯೂನಿವರ್ಸಿಟಿಯ ಇಂಟರ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿ ತಮ್ಮ 13ನೇ ವಯಸ್ಸಿಗೇ ಬಿ.ಎ. ವಿದ್ಯಾಭ್ಯಾಸಕ್ಕಾಗಿ ಮದರಾಸಿನ ಪ್ರತಿಷ್ಠಿತ ಪ್ರೆಸಿಡೆನ್ಸಿ ಕಾಲೇಜಿಗೆ ದಾಖಲಾಗಿದ್ದರು. ಆ ಕಾಲೇಜಿನಲ್ಲೇ ಅತ್ಯಂತ ಕಿರಿಯ ವಯಸ್ಸಿನ ವಿದ್ಯಾರ್ಥಿಯಾಗಿದ್ದ ಅವರು 1904ರಲ್ಲಿ ಇಂಗ್ಲಿಷ್‌ನೊಂದಿಗೆ ಭೌತಶಾಸ್ತ್ರ ಅಧ್ಯಯನ ಮಾಡಿ ಚಿನ್ನದ ಪದಕದೊಂದಿಗೆ ಬಿ.ಎ. ಪದವಿ ಗಳಿಸಿದರು. ಈ ನಡುವೆ ಅವರು ವಿದ್ಯಾರ್ಥಿ ದಿಶೆಯಲ್ಲೇ ತಮ್ಮನ್ನು ಸಂಶೋಧನಾತ್ಮಕ ಲೇಖನಗಳಲ್ಲಿ ತೊಡಗಿಸಿಕೊಂಡಿದ್ದರು. 1906 ನವೆಂಬರ್‌ನಲ್ಲಿ ಲಂಡನ್ನಿನ ಹೆಸರಾಂತ 'PHILOSOPHICAL MAGAZINE' ಪತ್ರಿಕೆಯಲ್ಲಿ ಪ್ರಥಮ ವೈಜ್ಞಾನಿಕ ಪ್ರಬಂಧ ಬರೆದು ವಿಜ್ಞಾನ ಪ್ರಪಂಚದ ಗಮನ ಸೆಳೆದ ಹೆಗ್ಗಳಿಕೆ ಅವರದು.



1907ಜನವರಿಯಲ್ಲಿ ಪದಕ ಮತ್ತು ಬಹುಮಾನದೊಡನೆ ಭೌತಶಾಸ್ತ್ರದಲ್ಲಿ ಪ್ರಥಮ ದರ್ಜೆಯಲ್ಲಿ ಎಂ.ಎ. ಪದವಿ ಪಡೆದ ರಾಮನ್ನರು ಅದೇ ವರ್ಷ ಐ.ಎಫ್.ಎಸ್. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದರು. ಆಗ ಅವರ ವಯಸ್ಸು ಕೇವಲ ಹತ್ತೊಂಬತ್ತು ಮಾತ್ರ. ಆ ವರ್ಷವೇ ಅವರು ತಮ್ಮ ಬಾಳ ಸಂಗಾತಿಯಾಗಿ ಲೋಕಸುಂದರಿ ಎಂಬಾಕೆಯನ್ನು ವಿವಾಹವಾದರು. ಅದೇ ಸಮಯಕ್ಕೆ ಅವರಿಗೆ ಕೊಲ್ಕತ್ತಾದ ಅಕೌಂಟೆಂಟ್ ಜನರಲ್ ಕಚೇರಿಯಲ್ಲಿ ಸಹಾಯಕ ಜನರಲ್ ಅಕೌಂಟೆಂಟ್ ಆಗಿ ಸರ್ಕಾರಿ ಹುದ್ದೆಯೂ ದೊರೆತಿತ್ತು.

ಸರ್ಕಾರಿ ಕೆಲಸದಲ್ಲಿದ್ದರೂ ಕುತೂಹಲ ಪ್ರವೃತ್ತಿಯ ರಾಮನ್ ಭೌತಶಾಸ್ತ್ರವನ್ನು ಬಿಡಲಾರದೆ ಹೋದರು. ಹಾಗಾಗಿ ಮಹೇಂದ್ರಲಾಲ್ ಸರಕಾರ್ ಎಂಬ ವೈದ್ಯರು ಸ್ಥಾಪಿಸಿದ್ದ ಕೊಲ್ಕತ್ತಾದ 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಕಲ್ಟಿವೇಷನ್ ಆಫ್ ಸೈನ್ಸ್' ಸಂಸ್ಥೆಗೆ ಅವರು ಸದಸ್ಯರಾಗಿ ಸೇರಿ ನಂತರ ಅಲ್ಲಿ ಕಾರ್ಯದರ್ಶಿಯೂ ಆದರು. ಸರ್ಕಾರಿ ಕೆಲಸದ ಜೊತೆ ಜೊತೆಯಲ್ಲೇ ಬಿಡುವಿನ ವೇಳೆಯಲ್ಲೆಲ್ಲಾ ಸಂಶೋಧನೆಯಲ್ಲಿ ಸಂಪೂರ್ಣ ನಿರತರಾದರು. ವಿದ್ಯಾರ್ಥಿಗಳಿಗೆ ವಿಜ್ಞಾನದ ವಿಷಯಗಳನ್ನು ಬೋಧಿಸುವುದರಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದ ಅವರು 1917ರಲ್ಲಿ ಕೊಲ್ಕತ್ತಾ ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ಪ್ರಾಧ್ಯಾಪಕರಾದರು. ತಮ್ಮ ಮೇಧಾವಿತನದಿಂದ ವಿಶ್ವವಿದ್ಯಾಲಯದ ಘನತೆಯನ್ನು ಹೆಚ್ಚಿಸಿದರು.

ಭೌತಶಾಸ್ತ್ರ ಬೋಧನೆಯ ಜೊತೆ ಜೊತೆಗೆ ಅದರ ಆಳಕ್ಕಿಳಿದು ಸಂಶೋಧನೆಯಲ್ಲಿ ತಲ್ಲೀನರಾಗಿದ್ದ ರಾಮನ್ನರು ಪಿಟೀಲು, ಮೃದಂಗ, ತಬಲ ಮುಂತಾದ ಸಂಗೀತ ವಾದ್ಯಗಳಿಂದ ಉಂಟಾಗುವ ಶಬ್ದ ಸ್ಪಂದನಗಳ ಬಗ್ಗೆ ವಿವರಣಾತ್ಮಕ ಲೇಖನಗಳನ್ನು ಬರೆದರು. ದೂರದ ಲಂಡನ್ನಿಗೂ ಹೋಗಿ ಅಲ್ಲಿನ ಪ್ರಸಿದ್ಧ ಫಿಸಿಕಲ್ ಸೊಸೈಟಿಯಲ್ಲಿ ಭಾಷಣ ಮಾಡಿ ಜಗತ್ತಿನ ಗಮನ ಸೆಳೆದರು. ಅಲ್ಲಿಂದ ವಾಪಸ್ ಭಾರತಕ್ಕೆ ಬಂದ ಅವರು ಸಂಶೋಧನಾ ಲೇಖನಗಳನ್ನು ಬರೆದು ಲಂಡನ್ನಿನ ರಾಯಲ್ ಸೊಸೈಟಿಗೆ ಕಳುಹಿಸಿದಾಗ ಅವುಗಳನ್ನು ಅಧ್ಯಯನ ಮಾಡಿದ ವಿದೇಶಿ ವಿಜ್ಞಾನಿಗಳು ರಾಮನ್ನರ ಬುದ್ಧಿವಂತಿಕೆ ಮೆಚ್ಚಿಕೊಂಡರು. ವಾಯು ಮಂಡಲದಲಿ ದ್ರವರೂಪದ ವಸ್ತುಗಳಲ್ಲಿ ಬೆಳಕು ಚದುರುವುದರ ಬಗ್ಗೆ, ಸಾಗರದ ನೀರಿನಲ್ಲಿ ತೋರುವ ವರ್ಣ ವೈವಿಧ್ಯವನ್ನು ಕುರಿತಂತೆ 'MOLECULAR DIFFRACTION OF LIGHT' ಪ್ರಬಂಧ ಬರೆದರು. ಇದನ್ನು ಕೊಲ್ಕತ್ತಾ ವಿ.ವಿಯೇ ವಿಶೇಷ ಆಸಕ್ತಿಯಿಂದ ಪ್ರಕಟಿಸಿತು.

ರಾಮನ್ನರ ವಿಜ್ಞಾನದ ಪ್ರಭೆ ಪ್ರಪಂಚದಾದ್ಯಂತ ಪಸರಿಸುತ್ತಿದ್ದಂತೆಯೇ 1921 ರಲ್ಲಿ ಇಂಗ್ಲೆಂಡಿನಲ್ಲಿ ಬೇಸಿಗೆಯ ವಿಜ್ಞಾನ ಮೇಳದಲ್ಲಿ ಭಾಗವಹಿಸಲು ಅವರಿಗೆ ವಿಶೇಷ ಆಹ್ವಾನ. ಇದು ರಾಮನ್ನರಿಗೆ ಮತ್ತು ಅವರು ಪ್ರತಿನಿಧಿಸುತ್ತಿದ್ದ ಭಾರತಕ್ಕೆ ಪ್ರಾಮುಖ್ಯತೆಯ ಗೌರವವಾಗಿತ್ತು. ಹಡಗಿನಲ್ಲಿ ಪ್ರಯಾಣ ಬೆಳೆಸಿದ ಅವರು ಸಮುದ್ರದ ನೀರನ್ನೇ ಕುತೂಹಲದಿಂದ ನೋಡುತ್ತಾ ಸಮುದ್ರದ ನೀರು ನೀಲಿಯಾಗಿರುವುದೇಕೆ? ಎಂಬ ಪ್ರಶ್ನೆಯನ್ನು ತಲೆಯಲ್ಲಿ ತುಂಬಿಕೊಂಡರು. ಇಂಗ್ಲೆಂಡಿನ ವಿಜ್ಞಾನಮೇಳದಲ್ಲಿ ಭಾಗವಹಿಸಿ ಮತ್ತೆ ಭಾರತಕ್ಕೆ ಹಡಗಿನಲ್ಲಿ ಹಿಂದಿರುಗಿದ ಅವರು ಸೂರ್ಯನ ಬಿಸಿಲಿನಲ್ಲಿ ಸಮುದ್ರ ನೀಲಿ ಬಣ್ಣ ತಾಳುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಿದರು. 'ಸೂರ್ಯನ ಬೆಳಕು ಈ ನೀರಿನಲ್ಲಿ ಹರಡಿ ಹೋಗಿರುವುದೇ ಸಮುದ್ರದ ನೀರು ನೀಲಿಯಾಗಿರುವುದಕ್ಕೆ ಕಾರಣ' ಎಂಬ ಸತ್ಯವನ್ನು ಕಂಡುಕೊಂಡರು. ಈ ವಿಷಯವನ್ನು ಗಾಢವಾಗಿ ಚಿಂತನೆ ನಡೆಸಿ `THE COLOUR OF THE SEA' ಎಂಬ ಪ್ರಬಂಧವನ್ನು ಹಡಗಿನಲ್ಲಿ ಪ್ರಯಾಣಿಸುತ್ತಲೇ ಬರೆದರು. ನಂತರ ಅದನ್ನು `NETURE' ಪತ್ರಿಕೆಗೆ ಕಳುಹಿಸಿದರು. ಇದು ರಾಮನ್ ಪರಿಣಾಮದ ಬೆಳಕಿನ ಸಂಶೋಧನೆಗೆ ನಾಂದಿಯಾಯಿತು. 1922 ರಲ್ಲಿ ಲಂಡನ್ನಿನ ರಾಯಲ್ ಸೊಸೈಟಿಯ ಸದಸ್ಯರಾದ ರಾಮನ್ನರು 1924ರಲ್ಲಿ ಕೆನಡಾ, ಅಮೆರಿಕ ಮುಂತಾದ ದೇಶಗಳ ಪ್ರವಾಸ ಕೈಗೊಂಡರು. ಕ್ಯಾಲಿಫೋರ್ನಿಯಾದ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅವರಿಗೆ ಸಂದರ್ಶಕ ಪ್ರಾಧ್ಯಾಪಕ ಹುದ್ದೆ ನೀಡಿತ್ತು. ಅವರ ಪ್ರತಿಭೆಯ ಪ್ರಖರ ಹೆಚ್ಚಾದಂತೆಲ್ಲಾ ಪ್ರಪಂಚದ ಪ್ರಸಿದ್ಧ ವಿಜ್ಞಾನಿಗಳೆಲ್ಲಾ ರಾಮನ್ನರ ಒಡನಾಟಕ್ಕೆ ಹಾತೊರೆಯುತ್ತಿದ್ದರು. ಹಾಗಾಗಿ ದೇಶ ವಿದೇಶಗಳ ವಿಜ್ಞಾನಿಗಳೊಂದಿಗೆ ವಿಚಾರ ವಿನಿಮಯ, ಚರ್ಚೆ ಮುಂತಾಗಿ ಅವರು ತಮ್ಮನ್ನು ಸಂಪೂರ್ಣ ವಿಜ್ಞಾನಕ್ಕೆ ತೆರೆದುಕೊಂಡಿದ್ದರು.

ರಾಮನ್ನರು ಸಂಶೋಧನೆ ಮಾಡಲು ಹೆಚ್ಚಾಗಿ ಆಧುನಿಕ ಉಪಕರಣಗಳನ್ನು ಆಶ್ರಯಿಸಿದವರೇ ಅಲ್ಲ. ಬದಲಾಗಿ ತಮ್ಮ ಬುದ್ಧಿ ಶಕ್ತಿಯನ್ನು ನಂಬಿದವರು. ಅವರು ತಮ್ಮ ಸಂಶೋಧನೆಗೆ ಬಳಸಿದ ಉಪಕರಣಗಳ ಬೆಲೆ ಕೇವಲ 200 ರೂಪಾಯಿಗಳೆಂದರೆ ನಂಬುವುದೇ ಕಷ್ಟ ಆದರೆ ಇದು ಬೆಳಕಿನಷ್ಟೇ ಸತ್ಯ. ಬೆಳಕಿನಲ್ಲಾಗುವ ಬದಲಾವಣೆಗಳನ್ನು ಗಮನಿಸಲು ನಾಲ್ಕು ಚದರ ಮತ್ತು ಎಂಟು ಅಡಿ ಎತ್ತರದ ಮರದ ಪೆಟ್ಟಿಗೆಯನ್ನು ಮಾಡಿಸಿಕೊಂಡಿದ್ದರು. ಅದರಲ್ಲಿಯೇ ಕುಳಿತು ಪ್ರಯೋಗ ನಡೆಸುತ್ತಿದ್ದರು. ಅಲ್ಲಿದ್ದದ್ದು ಪ್ರಖರವಾದ ಬೆಳಕು ನೀಡುವ "MARCURY ARC LAMP" ಮತ್ತು ಬೆಂಜಿನ್ ತುಂಬಿದ ಗಾಜಿನ ಪಾತ್ರೆ ಹಾಗೂ ಜೇಬಿನಲ್ಲಿ ಇಟ್ಟು ಕೊಳ್ಳಬಹುದಾದಷ್ಟು ಪುಟ್ಟದಾದ ರೋಹಿತದರ್ಶಕ (POCKET SPECTROSCOPE). ಒಟ್ಟಾರೆ ಇವುಗಳೆಲ್ಲದರ ಬೆಲೆ 200 ರೂಪಾಯಿಗಳನ್ನು ದಾಟಿರಲಿಲ್ಲವೆಂದರೆ ಆಶ್ಚರ್ಯವೇ ಸರಿ. ಹೀಗೆ ಸರಳ ಉಪಕರಣಗಳಿಂದಲೇ ಅತ್ಯದ್ಭುತ ಸಂಶೋಧನೆ ನಡೆಸಿ ತಮ್ಮ ರಾಮನ್ ಪರಿಣಾಮಕ್ಕೆ 1930ರಲ್ಲಿ ಅವರು ನೊಬೆಲ್ ಪ್ರಶಸ್ತಿ ಗಳಿಸಿದರು. ಈ ಸಂಶೋಧನೆ ವಿಶ್ವಮನ್ನಣೆ ಪಡೆಯಿತಲ್ಲದೆ ಭಾರತದ ಕೀರ್ತಿಗೊಂದು ಹೊನ್ನಗರಿ ಮೂಡಿಸಿತು. "ಪ್ರಾಯೋಗಿಕ ಭೌತಶಾಸ್ತ್ರದಲ್ಲಿ ರಾಮನ್ ಪರಿಣಾಮವು 1920ರ ದಶಕದ ಮೂರು ಅಥವಾ ನಾಲ್ಕು ವಿಶೇಷ ಸಂಶೋಧನೆಗಳಲ್ಲಿ ಒಂದಾಗಿದೆ. ಮತ್ತು ವಸ್ತುಗಳ ರಚನೆಯನ್ನು ತಿಳಿಯಲು ಮಹತ್ವದ್ದಾಗಿದೆ" ಎಂದು ಅಂದಿನ ರಾಯಲ್ ಸೊಸೈಟಿಯ ಅಧ್ಯಕ್ಷರೂ ಆಗಿದ್ದ ಖ್ಯಾತ ವಿಜ್ಞಾನಿ ರುದರ್‌ಫೋರ್ಡ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹಾಗೆಯೇ ರಾಮನ್ನರ ಸಂಶೋಧನೆ ನೋಡಿ ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೈನ್ ಸಹ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ.

ವಿಜ್ಞಾನವೇ ದೇವರು, ವಿಜ್ಞಾನವೇ ಧರ್ಮ, ವಿಜ್ಞಾನವೇ ತಮ್ಮ ಸರ್ವಸ್ವವೆಂದು ತಿಳಿದಿದ್ದ ರಾಮನ್ 1931ರಲ್ಲಿ ಬೆಂಗಳೂರಿನಲ್ಲಿರುವ ಟಾಟಾ ವಿಜ್ಞಾನ ಸಂಸ್ಥೆಯ ಪ್ರಪ್ರಥಮ ಭಾರತೀಯ ಅಧ್ಯಕ್ಷರಾಗಿ ನೇಮಕವಾಗಿದ್ದರು. ಅಲ್ಲಿ ನೂರಾರು ಭಾರತೀಯ ಯುವ ವಿಜ್ಞಾನಿಗಳಿಗೆ ಮಾರ್ಗದರ್ಶಕರಾಗಿದ್ದುಕೊಂಡು ಅಲ್ಲಿನ ವಿಜ್ಞಾನದ ಬೆಳವಣಿಗೆಗೆ ಬೆನ್ನೆಲುಬಾಗಿದ್ದರು. ಕೆಲಕಾಲ ಭಾರತೀಯ ವಿಜ್ಞಾನ ಮಂದಿರದ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ ಅವರು 1934 ಏಪ್ರಿಲ್‌ನಲ್ಲಿ ಇಂಡಿಯನ್ ಅಕಾಡೆಮಿ ಆಫ್ ಸೈನ್ಸನ್ನು ಬೆಂಗಳೂರಿನಲ್ಲೇ ಸ್ಥಾಪಿಸಿ ತಮ್ಮ ವಿಜ್ಞಾನ ಕೈಂಕರ್ಯದಿಂದ ವಿಜ್ಞಾನದ ಅಭಿವೃದ್ಧಿಯಲ್ಲೇ ಆನಂದ ಕಾಣುವ ಅನುಪಮ ವಿಜ್ಞಾನಿ ಎನಿಸಿದರು. 1926ರಲ್ಲಿ ಇಂಡಿಯನ್ ಜರ್ನಲ್ ಆಫ್ ಫಿಸಿಕ್ಸ್ ಎಂಬ ಪತ್ರಿಕೆಯನ್ನೂ ಆರಂಭಿಸಿದ್ದರು. ರಾಮನ್‌ರಂಥ ವಿಜ್ಞಾನಿಯನ್ನು ಪಡೆದ ನಾವೇ ಧನ್ಯರೆಂದು ಸಂತಸಪಟ್ಟ ಆಗಿನ ಮೈಸೂರು ಸರ್ಕಾರ ಅವರ ಸಂಶೋಧನೆಗೆ ಅನುಕೂಲವಾಗಲೆಂದು 24 ಎಕರೆ ಭೂಮಿಯನ್ನು ಬೆಂಗಳೂರಿನಲ್ಲಿ ನೀಡಿತು.ಅದು ಸಾರ್ಥಕವಾಗಬೇಕೆಂಬ ಸದುದ್ದೇಶದಿಂದ ಅವರು 1941ರಲ್ಲಿ ತಾವು ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತರಾದ ನಂತರ ತಮ್ಮ ಸ್ವಂತ ಸಂಶೋಧನಾಲಯವಾಗಿ 1948ರಲ್ಲಿ "ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್" ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ತಮಗೆ ಬಂದ ನೊಬೆಲ್ ಬಹುಮಾನದ ಹಣವನ್ನೆಲ್ಲಾ ಈ ಸಂಸ್ಥೆಗೇ ವಿನಿಯೋಗಿಸಿ ಭವಿಷ್ಯದ ಯುವ ವಿಜ್ಞಾನಿಗಳ ಸಂಶೋಧನೆಗೆ ಅನುಕೂಲ ಮಾಡಿಕೊಟ್ಟರು. ಇಲ್ಲಿ ಸುಂದರವಾದ ಒಂದು ವಿಜ್ಞಾನ ವಸ್ತು ಸಂಗ್ರಹಾಲಯವನ್ನು ಅವರು ನಿರ್ಮಿಸಿದರು.

ವಿಜ್ಞಾನ ಜಗತ್ತಿನ ದೈತ್ಯ ಪ್ರತಿಭೆಯಾಗಿ ಅಪಾರ ಸಾಧನೆಗೈದ ರಾಮನ್ ಅವರಿಗೆ 1924 ರಲ್ಲಿ ಲಂಡನ್ನಿನ ರಾಯಲ್ ಸೊಸೈಟಿಯ ಫೆಲೋ, 1925 ರಲ್ಲಿ ರಷ್ಯನ್ ಅಕಾಡೆಮಿ ಆಫ್ ಸೈನ್ಸ್‌ನ ಗೌರವ, 1928 ರಲ್ಲಿ ರೋಮನ್ ವಿಜ್ಞಾನ ಸಂಘದಿಂದ ಮೆಟ್ಯೂಸಿ ಪದಕ, 1929 ರಲ್ಲಿ ಬ್ರಿಟಿಷ್ ಪ್ರಭುತ್ವದಿಂದ ನೈಟ್ ಪದವಿಯೊಡನೆ ಸರ್ ಬಿರುದು, 1930 ರಲ್ಲಿ ನೊಬೆಲ್ ಪ್ರಶಸ್ತಿ ಮತ್ತು ಅದೇ ವರ್ಷ ಲಂಡನ್ನಿನ ರಾಯಲ್ ಸೊಸೈಟಿಯಿಂದ ಹ್ಯೂಸ್ ಪ್ರಶಸ್ತಿ, 1954 ರಲ್ಲಿ ಭಾರತರತ್ನ ಪ್ರಶಸ್ತಿ, ದೇಶ–ವಿದೇಶಗಳ ಹಲವಾರು ಪ್ರತಿಷ್ಠಿತ ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪದವಿಗಳ ಸುರಿಮಳೆ ಸೇರಿದಂತೆ ಅಸಂಖ್ಯಾತ ಗೌರವಗಳು, ಪ್ರಶಸ್ತಿ–ಪುರಸ್ಕಾರಗಳು ಸಂದಿವೆ. ತಮ್ಮ ಇಡೀ ಜೀವನವನ್ನು ಸಂಪೂರ್ಣವಾಗಿ ವಿಜ್ಞಾನಕ್ಕೆ ಸಮರ್ಪಿಸಿಕೊಂಡಿದ್ದ ಸರ್.ಸಿ.ವಿ. ರಾಮನ್ ಅವರು 1970 ನವೆಂಬರ್ 21 ರಂದು ನಿಧನರಾದರೂ ಅವರು ಎಂದೆಂದಿಗೂ ಅಜರಾಮರರು.

ಪಾರಂಪರಿಕ ಇಲಾಖೆ ಅನುಮೋದನೆ ದೊರೆಯದ ಹಿನ್ನೆಲೆ

ಕೆಆರ್, ಚೆಲುವಾಂಬ ಆಸ್ಪತ್ರೆ ದುರಸ್ತಿ ಕಾಮಗಾರಿ ನೆನೆಗುದಿಗೆ



ಕೆ.ಆರ್. ಆಸ್ಪತ್ರೆ



ಚೆಲುವಾಂಬ ಆಸ್ಪತ್ರೆ

ಮೈಸೂರು, ಫೆ.27(ಆರ್‌ಕೆ)– ಸರ್ಕಾರದ ಅನುದಾನ ಬಿಡುಗಡೆಯಾಗಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದರೂ, ಪಾರಂಪರಿಕ ಇಲಾಖೆಯಿಂದ ಗ್ರೀನ್ ಸಿಗ್ನಲ್ ಸಿಗದಿರುವ ಕಾರಣ ಮೈಸೂರಿನ ದೊಡ್ಡಾಸ್ಪತ್ರೆ ಎಂದೇ ಕರೆಯುವ ಕೃಷ್ಣರಾಜೇಂದ್ರ ಆಸ್ಪತ್ರೆ (ಕೆ.ಆರ್. ಆಸ್ಪತ್ರೆ) ಹಾಗೂ ಚೆಲುವಾಂಬ ಆಸ್ಪತ್ರೆ ಪಾರಂಪರಿಕ ಕಟ್ಟಡಗಳು ದುರಸ್ತಿ ಹಾಗೂ ಪುನರುಜ್ಜೀವನ ಕಾಮಗಾರಿ ಆರಂಭ ನೆನೆಗುದಿಗೆ ಬಿದ್ದಿದೆ.

ಫೆಬ್ರವರಿ 20 ರಿಂದಲೇ ಕಾಮಗಾರಿ ಆರಂಭವಾಗುತ್ತದೆ ಎಂದು ಹೇಳಲಾಗುತ್ತಿತ್ತು ಆಸ್ಪತ್ರೆಯ ಕೆಲ ವಿಭಾಗಗಳನ್ನು ಕೆಆರ್‌ಎಸ್ ರಸ್ತೆಯ ಪಿಕೆಟಿಬಿ ಆಸ್ಪತ್ರೆ ಆವರಣದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಟ್ರಾಮಾ ಕೇರ್ ಸೆಂಟರ್‌ನ ಹೊಸ ಕಟ್ಟಡಗಳಿಗೆ ಸ್ಥಳಾಂತರಿಸುತ್ತಿರುವುದರಿಂದ ಫೆಬ್ರವರಿ 27 ರಿಂದ ಕಾಮಗಾರಿ ಆರಂಭಿಸಲಾಗುವುದು ಎಂದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (MMC&RI) ಅಧಿಕಾರಿಗಳು ಈ ಹಿಂದೆ ತಿಳಿಸಿದ್ದರು.

ಅದರಂತೆ ಇಂದು ಆಸ್ಪತ್ರೆಗಳ ದುರಸ್ತಿ ಕಾಮಗಾರಿ ಆರಂಭವಾಗಬೇಕಾಗಿತ್ತು. ಆದರೆ, ಪಾರಂಪರಿಕ ಇಲಾಖೆಯಿಂದ ಇನ್ನೂ ಅನುಮತಿ ದೊರೆಯದಿರುವುದರಿಂದ ಜಿಲ್ಲಾಧಿಕಾರಿಗಳ ನೇತೃತ್ವದ ಪಾರಂಪರಿಕ ತಜ್ಞರ ಜಿಲ್ಲಾ ಮಟ್ಟದ ಸಮಿತಿಯು ಒಂದು ವಾರದೊಳಗಾಗಿ ಸಭೆ ನಡೆಸಿ ಅನುಮೋದನೆ ನೀಡಲಿದೆ ಎಂಬ ಮಾಹಿತಿ ಲಭ್ಯವಾಗಿದೆ. ಆ ಸಭೆಯಲ್ಲಿ ಹೆರಿಟೇಜ್ ಕಮಿಟಿ ಅನುಮೋದನೆ ಸಿಗಬಹುದೆಂದು ನಿರೀಕ್ಷಿಸುತ್ತಿದ್ದೇವೆ ಎಂದು ಕೆ.ಆರ್. ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಬಿ.ಎನ್. ನಂಜುಂಡಸ್ವಾಮಿ ತಿಳಿಸಿದ್ದಾರೆ.

ಕೆ.ಆರ್. ಆಸ್ಪತ್ರೆಯ ಯೂರಾಲಜಿ, ನ್ಯೂರಾಲಜಿ, ನ್ಯೂರೋ ಸರ್ಜರಿ, ನೆಫ್ರಾಲಜಿ, ಗ್ಯಾಸ್ಟ್ರೋ ಎಂಟರಾಲಜಿ ವಿಭಾಗಗಳನ್ನು ಸದ್ಯಕ್ಕೆ ಪಿಕೆಟಿಬಿ ಆಸ್ಪತ್ರೆ ಆವರಣದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಈ ವಿಭಾಗಗಳ ಹೊರ ರೋಗಿ ಚಿಕಿತ್ಸೆ ಸದ್ಯಕ್ಕೆ ಅಲ್ಲಿ ನಡೆಯುತ್ತಿದ್ದು, ಮೂಳೆ ವಿಭಾಗದ ಕೆಲವೇ ಘಟಕಗಳನ್ನು ಮಾತ್ರ ಟ್ರಾಮಾ ಕೇರ್ ಸೆಂಟರ್ ಕಟ್ಟಡಕ್ಕೆ ಶಿಫ್ಟ್ ಮಾಡಿಕೊಂಡಿದ್ದೇವೆ ಎಂದು ಅವರು ತಿಳಿಸಿದರು.

ಒಟ್ಟಿಗೆ ಎಲ್ಲಾ ವಿಭಾಗಗಳನ್ನು ಸ್ಥಳಾಂತರಿಸಿ ಏಕ ಕಾಲದಲ್ಲಿ ರಿಪೇರಿ ಕೆಲಸ ಮಾಡಲಾಗದು. ಒಂದೊಂದು ಕಟ್ಟಡದಲ್ಲಿನ ಚಿಕಿತ್ಸಾ ವಿಭಾಗಗಳನ್ನು ಸ್ಥಳಾಂತರಿಸಿ ಅದರ ರಿಪೇರಿಯಾದ ಬಳಿಕ ಮತ್ತೊಂದು ಕಟ್ಟಡವನ್ನು ಕೈಗೆತ್ತಿಕೊಳ್ಳಬೇಕಾಗುತ್ತದೆ. ಏಕೆಂದರೆ ಕೆ.ಆರ್. ಆಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ಜಾಸ್ತಿ ಇದ್ದು, ಹೊರ ರೋಗಿ ಹಾಗೂ ಒಳರೋಗಿಗಳಿಗೆ ವ್ಯವಸ್ಥೆ ಕಲ್ಪಿಸಬೇಕಿದೆ ಎಂದು ಅವರು ತಿಳಿಸಿದರು.

ಚಿಕಿತ್ಸಾ ವಿಭಾಗಗಳನ್ನು ಸ್ಥಳಾಂತರಿಸಿ ಕಟ್ಟಡ ತೆರವು ಮಾಡಿಕೊಡುವುದು ಹಾಗೂ ಪಾರಂಪರಿಕ ಇಲಾಖೆ ಅನುಮತಿ ತಡವಾಗುತ್ತಿರುವುದರಿಂದ ಆಸ್ಪತ್ರೆ ಕಟ್ಟಡಗಳ ದುರಸ್ತಿ ಕಾರ್ಯ ಆರಂಭವಾಗುವುದೇ ವಿಳಂಬವಾಗಿದೆ.

ಎಟಿಐನಲ್ಲಿ ರೋಹಿಣಿ ಸಿಂಧೂರಿ ಅಭಿಮಾನಿಗಳ ದಿಢೀರ್ ಪ್ರತಿಭಟನೆ



ಮೈಸೂರು, ಫೆ.27(ಎಂಕೆ)– ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರ ತೇಜೋವಧೆ ಖಂಡಿಸಿ ಅವರ ಅಭಿಮಾನಿಗಳು ಮೈಸೂರಿನ ಆಡಳಿತ ತರಬೇತಿ ಸಂಸ್ಥೆ ಎದುರು ಕೆಲಕಾಲ ಪ್ರತಿಭಟನೆ ನಡೆಸಿದರು.

ರೋಹಿಣಿ ಸಿಂಧೂರಿ ಅವರ ಭಾವಚಿತ್ರಗಳನ್ನು ಹಿಡಿದು ರಗ್ಗು, ದಿಂಬು, ಲೋಟ, ತಟ್ಟೆ ಸಹಿತ ಜಮಾಯಿಸಿದ ಅಭಿಮಾನಿಗಳು, ಅವರು ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳಲಾದ ಪದಾರ್ಥಗಳನ್ನು ಹಿಂದಿರುಗಿಸುತ್ತಿದ್ದೇವೆ. ಮುಂದಾದರೂ ಅವರ ತೇಜೋವಧೆ ನಿಲ್ಲಿಸಿ ಎಂದು ಘೋಷಣೆ ಕೂಗಿದರು. ಅಲ್ಲದೆ ಐಪಿಎಸ್ ಅಧಿಕಾರಿ ರೂಪ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ದೌಡು: ಪ್ರತಿಭಟನೆ ಆರಂಭಗೊಂಡ ಕೆಲ ನಿಮಿಷಗಳಲ್ಲಿ ಸ್ಥಳಕ್ಕೆ ಬಂದ ಪೊಲೀಸರು, ಅನುಮತಿ ಪಡೆಯದೆ ಪ್ರತಿಭಟನೆ ನಡೆಸುವುದು ಕಾನೂನುಬಾಹಿರ. ಕೂಡಲೆ ಪ್ರತಿಭಟನೆ ನಿಲ್ಲಿಸಿ, ಇಲ್ಲವೇ ಅನುಮತಿ ಪಡೆದಿದ್ದರೆ ಪತ್ರ ತೋರಿಸಿ ಎಂದು ಹೇಳುತ್ತಿದ್ದಂತೆ ತಬ್ಬಿಬ್ಬಾದ ರೋಹಿಣಿ ಸಿಂಧೂರಿ ಅಭಿಮಾನಿಗಳು ಪ್ರತಿಭಟನಾ ಸ್ಥಳದಿಂದ ಕಾಲ್ಕಿತ್ತರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಮಂಗಳವಾರ 28 ಫೆಬ್ರವರಿ 2023

ನಾಳೆಯಿಂದ ಸರ್ಕಾರಿ ನೌಕರರ ಅನಿರ್ದಿಷ್ಟಾವಧಿ ಮುಷ್ಕರ ಬೆಂಬಲಿಸಲು ಮನವಿ

ಮೈಸೂರು, ಫೆ.27(ಎಸ್‌ಬಿಡಿ)– ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮಾ.1ರಿಂದ ಸರ್ಕಾರಿ ನೌಕರರು ಕರ್ತವ್ಯಕ್ಕೆ ಗೈರಾಗುವ ಮೂಲಕ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಮೈಸೂರು ಜಿಲ್ಲಾ ಶಾಖೆಯಲ್ಲಿ ಸೋಮವಾರ ಸಭೆ ನಡೆಸಿ ಚರ್ಚಿಸಲಾಯಿತು.

ಸಭೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು ಮಾತನಾಡಿ, 7ನೇ ವೇತನ ಆಯೋಗದಿಂದ ಮಧ್ಯಂತರ ವರದಿಯನ್ನು ಪಡೆದು ಶೇ.40ರಷ್ಟು ವೇತನ ಹೆಚ್ಚಿಸಿ ಸರ್ಕಾರಿ ಆದೇಶ ಹೊರಡಿಸಬೇಕು. ಪಂಜಾಬ್, ರಾಜಸ್ತಾನ, ಜಾರ್ಖಂಡ್, ಹಿಮಾಚಲಪ್ರದೇಶ, ಛತ್ತೀಸ್‌ಘಡ ರಾಜ್ಯಗಳ ಮಾದರಿಯಲ್ಲಿ ಎನ್‌ಪಿಎಸ್ ರದ್ದುಪಡಿಸಿ ಓಪಿಎಸ್ ಯೋಜನೆ ಜಾರಿಗೊಳಿಸಬೇಕೆಂಬ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಮಾ.1ರಿಂದ ಕರ್ತವ್ಯಕ್ಕೆ ಗೈರಾಗಿ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಲಾಗಿದ್ದು, ಪ್ರತಿಯೊಬ್ಬರೂ ಕೈಜೋಡಿಸಬೇಕೆಂದು ಮನವಿ ಮಾಡಿದರು.

ಜಿಲ್ಲೆಯಲ್ಲಿ ಸುಮಾರು 22 ಸಾವಿರ ಸರ್ಕಾರಿ ನೌಕರರಿದ್ದು, 'ಎ' ಶ್ರೇಣಿ ಅಧಿಕಾರಿಗಳಿಂದ 'ಡಿ' ಗ್ರೂಪ್ ನೌಕರರವರೆಗೆ ಎಲ್ಲರೂ ಮಾ.1ರಿಂದ ಕರ್ತವ್ಯಕ್ಕೆ ಗೈರಾಗುವ ಮೂಲಕ ಮುಷ್ಕರಕ್ಕೆ ಬೆಂಬಲ ನೀಡಬೇಕು. ಆಸ್ಪತ್ರೆಗಳ ಐಸಿಯು ಘಟಕ ಸೇರಿದಂತೆ ತುರ್ತು ಸೇವೆ ಹೊರತುಪಡಿಸಿ ಉಳಿದೆಲ್ಲಾ ಕ್ಷೇತ್ರದ ನೌಕರರು ಭಾಗವಹಿಸಬೇಕು. ನಿರಂತರ ಹೋರಾಟದಿಂದಾಗಿ ಸರ್ಕಾರ 7ನೇ ವೇತನ ಆಯೋಗಕ್ಕೆ ಅಧ್ಯಕ್ಷರ ನೇಮಕ ಮಾಡಿದ್ದು, ವರದಿ ಪಡೆಯುವಲ್ಲಿ ವಿಳಂಬ ಮಾಡುತ್ತಿದೆ. ರಾಜ್ಯದಲ್ಲಿ 2.50 ಲಕ್ಷ ಹುದ್ದೆಗಳು ಖಾಲಿಯಿದ್ದು, ಎಷ್ಟೇ ಒತ್ತಡವಾದರೂ ಈಗಿರುವ ನೌಕರರೇ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರಿಂದ ರಾಜ್ಯದ ಬೊಕ್ಕಸಕ್ಕೆ ವಾರ್ಷಿಕ 10 ಸಾವಿರ ಕೋಟಿ ರೂ. ಉಳಿತಾಯವಾಗುತ್ತಿದೆ. ದೇಶದಲ್ಲೇ ಕರ್ನಾಟಕ ರಾಜ್ಯ ಸರ್ಕಾರಿ ನೌಕರರು ಅತೀ ಕಡಿಮೆ ವೇತನ ಪಡೆಯುತ್ತಿದ್ದೇವೆ. ಆದಾಗ್ಯೂ ನಮ್ಮ ನ್ಯಾಯಯುತ ಬೇಡಿಕೆ ಈಡೇರಿಸುವಲ್ಲಿ ಸರ್ಕಾರ ಮೀನಾಮೇಷ ಎಣಿಸುತ್ತಿದೆ. ಹಾಗಾಗಿ ಎಲ್ಲಾ ಇಲಾಖೆಗಳ ವೃಂದ ಸಂಘಗಳು ಈ ಮುಷ್ಕರವನ್ನು ಯಶಸ್ವಿಗೊಳಿಸಬೇಕೆಂದು ಕೋರಿದರು. ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಡಿ.ಆನಂದ್, ಗೌರವಾಧ್ಯಕ್ಷ ಉಮೇಶ್, ಉಪಾಧ್ಯಕ್ಷ ಮಾಲಂಗಿ ಸುರೇಶ್, ಹಿರಿಯ ಉಪಾಧ್ಯಕ್ಷ ರಮೇಶ್, ಕಾರ್ಯದರ್ಶಿ ರೇವಣ್ಣ, ಖಜಾಂಚಿ ರಮೇಶ್ ಕುಮಾರ್, ರಾಜ್ಯ ಪರಿಷತ್ ಸದಸ್ಯ ವಿಶ್ವನಾಥ್ ಸೇರಿದಂತೆ ಎಲ್ಲಾ ತಾಲೂಕು ಪದಾಧಿಕಾರಿಗಳು, ಎಲ್ಲಾ ಇಲಾಖೆ ವೃಂದ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ನೌಕರರಿಗೆ ಮಾರ್ಗಸೂಚಿ: ಮುಷ್ಕರ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಇಲಾಖೆಗಳ ವೃಂದ ಸಂಘಗಳ ಅಧ್ಯಕ್ಷರು, ತಮ್ಮ ಅಧೀನದ ಉಪಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳೊಂದಿಗೆ ಸಭೆ ನಡೆಸಿ, ಮುಕ್ತವಾಗಿ ಚರ್ಚಿಸುವುದು. ಎಲ್ಲಾ ಇಲಾಖೆಗಳ ನೌಕರರು ಕರ್ತವ್ಯಕ್ಕೆ ಗೈರಾಗುವ ಮೂಲಕ ಶಾಂತಿಯುತವಾಗಿ ಬೆಂಬಲಿಸುವುದು. ಕೇಂದ್ರ ಸಂಘವು ನಿರ್ದಿಷ್ಟಪಡಿಸುವ ಮಾಹಿತಿಗಳನ್ನೊಳಗೊಂಡ ಪೋಸ್ಟರ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಪ್ರಚುರಪಡಿಸುವುದು. ಸಂಘಟನೆಗಳು ಅಧಿಕೃತ ಸೂಚನೆ ನೀಡುವವರೆಗೂ ಮುಷ್ಕರ ಮುಂದುವರೆಸುವುದು. ಈ ವೇಳೆ ಪ್ರತಿಭಟನೆ, ಉಪವಾಸ, ಧರಣಿ ಸತ್ಯಾಗ್ರಹ, ಘೋಷಣೆ ಕೂಗುವುದನ್ನು ನಿರ್ಬಂಧಿಸಲಾಗಿದೆ. ಇಲಾಖಾವಾರು ತಂಡ ರಚಿಸಿಕೊಂಡು ಮುಷ್ಕರ ಸಂದರ್ಭದಲ್ಲಿ ಶಾಲಾ–ಕಾಲೇಜು, ಆಸ್ಪತ್ರೆ ಸೇರಿದಂತೆ ಎಲ್ಲಾ ಇಲಾಖೆ ಕಚೇರಿಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ, ಸಿಬ್ಬಂದಿಯ ಮನವೊಲಿಸಿ ಗೈರಾಗಲು ಒಪ್ಪಿಸಬೇಕು. ಮುಷ್ಕರ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣ, ಮಾಧ್ಯಮಗಳಲ್ಲಿ ಸರ್ಕಾರ ಹಾಗೂ ಯಾವುದೇ ಜನಪ್ರತಿನಿಧಿಗಳನ್ನು ಟೀಕಿಸಬಾರದು. ಮಾಧ್ಯಮಗಳ ಮುಂದೆ ಹೇಳಿಕೆ, ಪ್ರಕಟಣೆ ನೀಡಬಾರದು. ಸರ್ಕಾರ ಮುಷ್ಕರವನ್ನು ಹತ್ತಿಕ್ಕಲು ಕಾನೂನು ಕ್ರಮಗಳ ಮೂಲಕ ಬೆದರಿಕೆ ಹಾಕಿದರೂ ಎದೆಗುಂದದೆ ಮುಷ್ಕರ ಯಶಸ್ವಿಗೊಳಿಸಬೇಕು. ಆರೋಗ್ಯ ಇಲಾಖೆಯಲ್ಲಿ ತುರ್ತು ಚಿಕಿತ್ಸಾ ವಿಭಾಗ, ಐಸಿಯು, ಎಂಐಸಿಯು ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುವವರು ಮಾತ್ರ ಕಪ್ಪುಪಟ್ಟಿ ಧರಿಸಿ ಕೆಲಸ ಮಾಡಬಹುದು. ಇನ್ನುಳಿದ ಎಲ್ಲಾ ಇಲಾಖೆ ಸರ್ಕಾರಿ ಅಧಿಕಾರಿ, ಸಿಬ್ಬಂದಿ ಮುಷ್ಕರದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು ಎಂಬ ಮಾರ್ಗಸೂಚಿಯನ್ನು ರಾಜ್ಯ ಸರ್ಕಾರಿ ನೌಕರರ ಸಂಘ ನೀಡಿದೆ.



ಸರ್ಕಾರಿ ನೌಕರರ ಗೈರು ಹಾಜರಿ ಮುಷ್ಕರ ಮಾ.1ರಿಂದ ನಿಗದಿಯಾಗಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಮೈಸೂರು ಜಿಲ್ಲಾ ಶಾಖೆಯಲ್ಲಿ ಸೋಮವಾರ ನಡೆಸಲಾದ ಸಭೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಗೋವಿಂದರಾಜು ಮಾತನಾಡಿದರು.

ವೇತನ ಪರಿಷ್ಕರಣೆಗೆ ಆಗ್ರಹಿಸಿ ಕಾರ್ಮಿಕರಿಂದ ಪ್ರತಿಭಟನೆ ನಿರ್ಧಾರ

ಮೈಸೂರು,ಫೆ.27(ಎಂಟಿವೈ)– ವೇತನ ಪರಿಷ್ಕರಣೆಗೆ ರಚಿಸಿದ್ದ ತ್ರಿಪಕ್ಷೀಯ ವೇತನ ಮಂಡಳಿ ನಿರ್ಧಾರವನ್ನು ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ನಿರ್ಲಕ್ಷಿಸುತ್ತಿರುವುದರಿಂದ ಕಾರ್ಖಾನೆ ಕಾರ್ಮಿಕರು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಲಿದ್ದಾರೆ ಎಂದು ಕಾರ್ಮಿಕ ಮುಖಂಡ ಚಂದ್ರಶೇಖರ ಮೇಟಿ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ಸಕ್ಕರೆ ಕಾರ್ಖಾನೆಗಳ ಮಾಲೀಕರು, ಕಾರ್ಮಿಕ ಸಂಘಟನೆಗಳು ಮತ್ತು ಕಾರ್ಮಿಕ ಇಲಾಖೆಯನ್ನು ಒಳಗೊಂಡಂತೆ ರಚಿಸಲಾಗಿದ್ದ ತ್ರಿಪಕ್ಷೀಯ ಮಂಡಳಿಯಲ್ಲಿ ವೇತನ ಮತ್ತು ಇನ್ನಿತರ ಸೌಲಭ್ಯ ನೀಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗಿತ್ತು. ಈ ನಿಲುವಿನಂತೆ ರಾಜ್ಯದಾದ್ಯಂತ ಎಲ್ಲಾ ಸಕ್ಕರೆ ಕಾರ್ಖಾನೆಗಳ ನೌಕರರಿಗೆ ಸೌಲಭ್ಯ ಕಲ್ಪಿಸಬೇಕಾಗಿತ್ತು. ತ್ರಿಪಕ್ಷೀಯ ವೇತನ ಮಂಡಳಿಯಲ್ಲಿ ತೀರ್ಮಾನವಾಗುವ ವೇತನ ನೀಡುವುದಾಗಿ ಕಳೆದ ನಾಲ್ಕು ವರ್ಷಗಳಿಂದಲೂ ಹೇಳುತ್ತಿರುವ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿ ಈಗ ವೇತನ ಪರಿಷ್ಕರಣೆ ಮಾಡಲು ನಿರಾಕರಿಸುತ್ತಿದೆ. ಇದರ ಬದಲಿಗೆ ಹೊಸದಾಗಿ ಕಾರ್ಮಿಕರ ಬೇಡಿಕೆ ಪಟ್ಟಿಯನ್ನು ಸಲ್ಲಿಸಿದಲ್ಲಿ, ಚರ್ಚಿಸಿ, ಜಾರಿಗೊಳಿಸುವುದಾಗಿ ತಿಳಿಸಿದೆ ಎಂದು ವಿಷಾದಿಸಿದರು.

ಈಗ ಕಾರ್ಮಿಕರ ಬೇಡಿಕೆ ಪಟ್ಟಿ ಸಲ್ಲಿಸಿದ ನಂತರ ನಮ್ಮ ಸಂಘದ ಜೊತೆಗೆ ಚರ್ಚೆ ಮಾಡಲು ಸಹ ನಿರಾಕರಿಸುತ್ತಿದ್ದಾರೆ. ಆದ್ದರಿಂದ ಕಾರ್ಮಿಕರು ಅನಿವಾರ್ಯವಾಗಿ ಮುಷ್ಕರ ಆರಂಭಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಕಬ್ಬು ಅರೆಯುವುದು ಸ್ಥಗಿತಗೊಳಿಸಿ ನೌಕರರು ಮುಷ್ಕರದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಕುರಿತು ರೈತ ಸಂಘಗಳಿಗೂ ಮಾಹಿತಿ ನೀಡಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಾರ್ಮಿಕ ಮುಖಂಡರಾದ ಕೆ. ಸೋಮಶೇಖರ್, ವಿ.ಯಶೋಧರ್, ಸಿ.ಮಂಜುನಾಥಯ್ಯ, ಎಂ.ರಮೇಶ್ ಹಾಗೂ ಇನ್ನಿತರರು ಇದ್ದರು.

ರಾಷ್ಟ್ರೀಯತೆ ಮೆರೆಯುವ ಸಾಹಿತ್ಯ ಕೃತಿಯ ಬಗ್ಗೆ ಜನರಿಗೆ ಅರಿವಿಲ್ಲ!

ವಿದ್ವಾಂಸ ಗ.ನಾ.ಭಟ್ ವಿಷಾಧ

ಮೈಸೂರು, ಫೆ.27(ಎಸ್‌ಪಿಎನ್)– ಇಂದಿನ ಸಾರಸ್ವತಲೋಕದಲ್ಲಿ ನಮ್ಮ ರಾಷ್ಟ್ರಿಯ ಹೆಗ್ಗುರುತು ಬಿಂಬಿಸುವ ಸಾಹಿತ್ಯ ಯಾವುದು ಎಂಬುದು ಬಹು ಜನರಿಗೆ ತಿಳಿದಿಲ್ಲ ಎಂದು ಹಿರಿಯ ಪ್ರವಚನಕಾರ, ವಿಮರ್ಶಕ, ವಿದ್ವಾನ್ ಗ.ನಾ.ಭಟ್ ಬೇಸರ ವ್ಯಕ್ತಪಡಿಸಿದರು.



ಮೈಸೂರು ಜೆಎಲ್‌ಬಿ ರಸ್ತೆಯಲ್ಲಿ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಮೈಸೂರು ಸನಾತನ ಸಭಾ ಫೆ.27ರಿಂದ ಮಾ.4ರವರೆಗೆ ಹಮ್ಮಿಕೊಂಡಿರುವ ರಾಮಾಯಣ ಪ್ರವಚನ ಮಾಲಿಕೆಯ ಮೊದಲ ದಿನದ ಪ್ರವಚನ ನೀಡಿದ ಅವರು, ನಮ್ಮ ಆದರ್ಶದ ಸಾಹಿತ್ಯಗಳಾದ ವೇದ, ಉಪನಿಷತ್‌ಗಳ ಬಗ್ಗೆ ದನಿಯೆತ್ತುವ ವಾತಾವರಣವಿಲ್ಲ. ನಮ್ಮ ದೇಶದಲ್ಲಿ ನಾವೇ ಪರಕೀಯರಂತೆ ಬದುಕುವ ವಾತಾವರಣವಿದೆ ಎಂದು ಹೇಳಿದರು.

ಬ್ರಹ್ಮಚರ್ಯೆ ಪಾಲನೆ ಎಂದರೆ, ಸಂಧ್ಯಾವಂದನೆ ಮಾಡಿದಂತಲ್ಲ. ಪ್ರಭು ಶ್ರೀರಾಮಚಂದ್ರ ಭರತ ಹಾಗೂ ಶ್ರೀಕೃಷ್ಣ ಪಾಲಿಸುವ ಬ್ರಹ್ಮಚರ್ಯೆ ವಿಧಾನ ಬಲು ಶ್ರೇಷ್ಠ. ಈ ಕುರಿತು 1978ರ ಆಸು–ಪಾಸಿನಲ್ಲಿ ಪ್ರತಿಷ್ಠಿತ ವಾರಪತ್ರಿಕೆ ಯೊಂದರಲ್ಲಿ ವಿದ್ವಾನ್ ಡಾ.ಕೆ. ನಾರಾಯಣಸ್ವಾಮಿ ಅವರು ಆರಂಭಿಸಿದ ರಾಮಾಯಣ ಧಾರಾವಾಹಿಯಿಂದ ಪ್ರೇರಿಪಿತನಾಗಿ ಅಂದಿನಿಂದಲೂ ರಾಮಾಯಣ ಓದಲು ಆರಂಭಿಸಿದೆ ಅವರು ಬರೆಯುತ್ತಿದ್ದ ಧಾರಾವಾಹಿಯಲ್ಲಿ ರಾಮಾಯಣ, ಮಹಾಭಾರತ, ಉಪನಿಷತ್, ವೇದಗಳ ಕುರಿತು ಹೊಸಹೊಸ ವಿಷಯಗಳನ್ನು ಪ್ರಸ್ತಾಪಿಸಿ, ಹೊಸ ಸ್ವರೂಪ ತಂದುಕೊಂಡಿದ್ದರು.

ಖ್ಯಾತ ವಿಮರ್ಶಕರೊಬ್ಬರ ಬರಹದಲ್ಲಿ ಹೀಗೆ ಹೇಳುತ್ತಾರೆ. ಬ್ರಿಟನ್‌ನಲ್ಲಿ ಹುಟ್ಟಿದ ಇಂಗ್ಲಿಷ್ ಭಾಷೆಯನ್ನು ಅಲ್ಲಿನ ಜನ ಮಾತನಾಡುತ್ತಾರೆ. ನಮ್ಮ ದೇಶದಲ್ಲಿ ಹುಟ್ಟಿದ ಸಂಸ್ಕೃತವನ್ನು ಒಬ್ಬರೂ ಮಾತನಾಡುವುದಿಲ್ಲ. ಇಲ್ಲಿ ಕೆಲವರು ಭಾಷಾ ವಿಚಾರದಲ್ಲೂ ಜನರ ನಡುವೆ ಜಗಳ ತಂದಿಡುತ್ತಿದ್ದಾರೆ. ಅಂತಹವರು ಮುಂದೆ ಹೋಮ, ಹವನ, ಪೂಜಾ ಕೈಂಕರ್ಯಗಳಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ, ಇದು ರಾಷ್ಟ್ರೀಯ ವಿಚಾರಗಳಲ್ಲೊಂದು ಎಂದು ಹೇಳಿದರೆ, ನಮ್ಮ ವಿರುದ್ಧವೇ ತಿರುಗಿ ಬೀಳುತ್ತಾರೆ. ಕೇಸರೀಕರಣ ಅಂತ ಬೊಬ್ಬೆ ಹಾಕುತ್ತಾರೆ. ನಾವು ವಿಚಿತ್ರ ಸನ್ನಿವೇಶನದಲ್ಲಿ ಬದುಕುತ್ತಿದ್ದೇವೆ ಎಂದು ತೀವ್ರ ಬೇಸರ ಹೊರ ಹಾಕಿದರು.

ಕಾಳಿದಾಸ ಮತ್ತು ಆತ ರಚಿಸಿದ ಸಾಹಿತ್ಯಕ್ಕೆ ಸಿಕ್ಕ ಪ್ರಚಾರ, ಮಹರ್ಷಿ ವಾಲ್ಮೀಕಿ ಮತ್ತು ಆತನ ಸಾಹಿತ್ಯಕ್ಕೆ ಸಿಗಲಿಲ್ಲ. ಭವಭೂತಿ, ಬಾಸ, ಸುಬಂಧುವಿಗೆ ಕಾವ್ಯ ಮೀಮಾಂಸೆಯಲ್ಲಿ ಸಿಕ್ಕ ಪ್ರಚಾರ ವ್ಯಾಸರಿಗೆ ಸಿಗಲಿಲ್ಲ. ರಾಮಾಯಣಕ್ಕೆ ವ್ಯಾಖ್ಯಾನ ಬರೆದ ವಿದ್ವಾನ್ ಗೋವಿಂದರಾಜರ ಬಗ್ಗೆ ಕಾವ್ಯ ಮಿಮಾಂಸೆಯಲ್ಲಿ ಒಬ್ಬರೂ ಉಲ್ಲೇಖಿಸುತ್ತಿಲ್ಲ. ಕೆಲವು ಕಾವ್ಯ ಮಿಮಾಂಸಕರು ರಾಮಾಯಣ ಘಟನೆಗಳ ಬಗ್ಗೆ ತಾತ್ಸರ ಬೆಳೆಸಿಕೊಂಡಿದ್ದಾರೆ ಎಂದು ಬೇಸರ ಹೊರಹಾಕಿದರು.

ರಾಮಾಯಣವನ್ನು ಸೀತಾಯಣ ಎಂಥಲೂ ಕರೆಯಬಹುದು. ಮಹರ್ಷಿ ವಾಲ್ಮೀಕಿ ರಾಮಾಯಣದಲ್ಲಿ ಉಲ್ಲೇಖಿಸಿದ್ದಂತೆ ಬ್ರಹ್ಮಚರ್ಯೆ, ಯುದ್ಧನೀತಿ ಹಾಗೂ ಗುರು–ಹಿರಿಯರ ಗೌರವಿಸುವ ಬಗ್ಗೆ ರಾಮಾಯಣಕ್ಕಿಂತ ಉತ್ತಮ ಪಾತ್ರಗಳು ಬೇಕೇ? ಇದನ್ನು ಇಂದಿನ ಪೀಳಿಗೆ ಕಲಿಯಲು ಮುಂದಾಗುತ್ತಿಲ್ಲ ಎಂದು ತಿಳಿಸಿದರು.

ರಾಮಾಯಣದಲ್ಲಿ ಸೀತೆಯ ಅಪಹರಣದಿಂದಾಗಿ ರಾಮಾಯಣ ವಿಶ್ವಪ್ರಸಿದ್ಧಿ ಪಡೆಯಿತು. ಏಕೆಂದರೆ, ಸೀತಾ ಮಾತೆಯಲ್ಲಿದ್ದ ಗುಣ, ವ್ಯಕ್ತಿತ್ವ ಇಂದಿನ ಹೆಣ್ಣು ಕುಲಕ್ಕೆ ಮಾದರಿ. ಇಂತಹ ಸಂಗತಿಗಳ ಬಗ್ಗೆ ವಾಲ್ಮೀಕಿ ರಾಮಾಯಣ ಹೆಚ್ಚು ಪ್ರಚಾರವಿಲ್ಲದ ಕಾರಣ ಅನೇಕ ವಿಷಯಗಳು ಜನರಿಗೆ ತಿಳಿಯುತ್ತಿಲ್ಲ ಎಂದು ಬೇಸರ ಹೊರಹಾಕಿದರು.

ನಿವೇಶನ ಕೊಡಿಸುವುದಾಗಿ 60 ಲಕ್ಷ ಹಣ ಪಡೆದು ಗೃಹಿಣಿಗೆ ವಂಚನೆ

ಎಂ.ರವಿ ಎಂಬುವವರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಫೆ.27–ನಿವೇಶನ ಕೊಡಿಸುವುದಾಗಿ ನಂಬಿಸಿ ವ್ಯಕ್ತಿಯೋರ್ವ ಗೃಹಿಣಿಗೆ 60 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ನ್ಯಾಯಾಲಯದ ಆದೇಶದ ಮೇರೆಗೆ ವಿಜಯನಗರ ಠಾಣೆ ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ. ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ವಾಣಿವಿಲಾಸ ಲೇಔಟ್ ನಿವಾಸಿ ವಿಮಲಾ ಪಾಪಣ್ಣ(50) ವಂಚನೆಗೊಳಗಾದವರಾಗಿದ್ದು, ಈ ಹಿಂದೆ ಇವರ ನೆರೆ ಮನೆಯಲ್ಲಿ ವಾಸಿಸುತ್ತಿದ್ದು, ಹಾಲಿ ಬೆಂಗಳೂರಿನ ತ್ಯಾಗರಾಜನಗರದಲ್ಲಿರುವ ಎಂ.ರವಿ (54) ಆರೋಪಕ್ಕೆ ಗುರಿಯಾಗಿ ರುವವರು.

ವಿವರ: ತಾನು ರಿಯಲ್ ಎಸ್ಟೇಟ್ ಉದ್ಯಮಿ ಎಂದು ವಿಮಲಾ ಅವರಿಗೆ ಪರಿಚಯಿಸಿ ಕೊಂಡ ರವಿ, ವಿಜಯನಗರ ಎರಡನೇ ಹಂತದಲ್ಲಿರುವ ಮುಡಾ ನಿವೇಶನವನ್ನು ಖರೀದಿಸುವಂತೆ ತಿಳಿಸಿದ್ದಾನೆ. ಅದರಂತೆ ಒಂದು ನಿವೇಶನವನ್ನು ವಿಮಲಾ ಅವರಿಗೆ ತೋರಿಸಿದ ಆತ, ಇದರ ಮಾಲೀಕರಿಗೆ ಹಣದ ಅವಶ್ಯಕತೆ ಇರುವುದರಿಂದ 60 ಲಕ್ಷ ರೂ. ನೀಡಬೇಕೆಂದು ಹೇಳಿ ವಿಮಲಾ ಅವರಿಂದ 2020ರ ಏಪ್ರಿಲ್‌ನಲ್ಲಿ 60 ಲಕ್ಷ ಪಡೆದಿದ್ದಾನೆ. ಆದರೆ ನಿವೇಶನ ನೋಂದಣಿ ಮಾಡಿಸಿಕೊಡಲು ಸಬೂಬು ಹೇಳುತ್ತಾ ದಿನ ನೂಕುತ್ತಿದ್ದಾಗ ಅನುಮಾನದ ಮೇರೆಗೆ ವಿಮಲಾ ಅವರ ಪತಿ ನಿವೇಶನದ ಬಗ್ಗೆ ವಿಚಾರಿಸಿದಾಗ ಅದು ತಕರಾರಿನಲ್ಲಿರುವ ನಿವೇಶನ ಎಂಬುದು ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ನಾವು ನೀಡಿದ ಹಣ ಹಿಂತಿರುಗಿಸುವಂತೆ ಕೇಳಲಾಗಿ 2021ರ ಅ.7ರಂದು ರವಿ ಹಣ ಹಿಂತಿರುಗಿಸಲು ಕಾಲಾವಕಾಶ ಕೇಳಿದ್ದಾನೆ. ಆದರೆ ಹಠಾತ್ತನೆ ಬೆಂಗಳೂರಿಗೆ ವಾಸಸ್ಥಳವನ್ನು ಬದಲಾಯಿಸಿಕೊಂಡು ವಿಮಲಾ ಅವರ ನಂಬರ್ ಅನ್ನು ಬ್ಲಾಕ್ ಮಾಡಿದ್ದಾನೆ. ಆತನ ಬೆಂಗಳೂರು ವಿಳಾಸವನ್ನು ಪತ್ತೆ ಹಚ್ಚಿ ಅಲ್ಲಿಗೆ ಹೋಗಿ ಹಣ ಕೇಳಿದಾಗ ಜೀವ ಬೆದರಿಕೆ ಹಾಕಿದ್ದಾನೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.



ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಭಾನುವಾರ ಏರ್ಪಡಿಸಲಾಗಿದ್ದ ಮೈಸೂರು–ಚಾಮರಾಜನಗರ ಜಿಲ್ಲಾ ವಾಲ್ಮೀಕಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನೆ ನೆರವೇರಿಸಿದ ಸಂಸದ ಪ್ರತಾಪ್ ಸಿಂಹ ಅವರನ್ನು ಸಮಾಜದ ಹಿರಿಯ ಮುಖಂಡ ಟೆನ್ನಿಸ್ ಗೋಪಿ ಅಭಿನಂದಿಸಿದರು. ಈ ವೇಳೆ ಮೇಯರ್ ಶಿವಕುಮಾರ್, ಮುಖಂಡರಾದ ಅಪ್ಪಣ್ಣ, ರಾಮಚಂದ್ರ, ಸುಬ್ಬಣ್ಣ, ಪಾಲಿಕೆ ಸದಸ್ಯರಾದ ಶೋಭ ಮೋಹನ, ಸಂಘದ ಅಧ್ಯಕ್ಷ ಜಗದೀಶ್, ಉದ್ಬೂರು ಮಹದೇವಸ್ವಾಮಿ, ಹಿನಕಲ್ ಚಂದ್ರು, ಇಲವಾಲ ಕೃಷ್ಣ, ಸಾಹಿತಿ ಹರದನಹಳ್ಳಿ ನಂಜುಂಡಸ್ವಾಮಿ, ಚೆನ್ನಕೇಶವ ಇನ್ನಿತರರಿದ್ದರು.

ಹಸು ಬಲಿ ಪಡೆದ ಹುಲಿ



ಮೈಸೂರು, ಫೆ.27– ಮೇಯುತ್ತಿದ್ದ ಹಸುವಿನ ಮೇಲೆ ಹುಲಿ ದಾಳಿ ಮಾಡಿ ಬಲಿ ಪಡೆದಿರುವ ಘಟನೆ ಮೈಸೂರು ತಾಲೂಕಿನ ಮಾದಹಳ್ಳಿಯಲ್ಲಿ ನಡೆದಿದೆ.

ಬೆಟ್ಟದಬೀಡು ಗ್ರಾಮದ ಶಿವಣ್ಣನಾಯಕ ಎಂಬುವರು ಹಸುಗಳನ್ನು ಮೇಯಿಸುತ್ತಿದ್ದ ವೇಳೆ ದಾಳಿ ಮಾಡಿದ ಹುಲಿ ಹಸುವೊಂದನ್ನು ಬಲಿ ಪಡೆದಿದೆ. ವಿಷಯ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ಕರ್ನಾಟಕ ಪ್ರಜಾಪಾರ್ಟಿ(ರೈತ ಪರ್ವ) ರಾಜ್ಯಾಧ್ಯಕ್ಷ ಬಿ.ಶಿವಣ್ಣ, ರೈತನ ಕುಟುಂಬಕ್ಕೆ ಸಾಂತ್ವನ ಹೇಳಿ ವೈಯಕ್ತಿಕ ಧನ ಸಹಾಯ ಮಾಡಿದ್ದಾರೆ. ಹಾಗೆಯೇ ಅರಣ್ಯ ಇಲಾಖೆ ಅಧಿಕಾರಿಗಳು ಇಲ್ಲಿನ ರೈತರಿಗೆ ಕಾಡುಪ್ರಾಣಿಗಳಿಂದ ರಕ್ಷಣೆ ನೀಡಬೇಕು. ಕಾಡಿನ ಸುತ್ತ ತಂತಿ ಬೇಲಿ ಅಳವಡಿಸುವಂತೆ ಒತ್ತಾಯಿಸಿದ್ದಾರೆ.



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಹುಟ್ಟು ಹಬ್ಬದ ಅಂಗವಾಗಿ ನಗರಪಾಲಿಕೆ ಸದಸ್ಯೆ ಸೌಮ್ಯ ಉಮೇಶ್ 49ನೇ ವಾರ್ಡ್‌ನ ಶಾಲಾ ಮಕ್ಕಳಿಗೆ ಪುಸ್ತಕ, ಲೇಖನಿ ಸಾಮಗಿ, ಬೀದಿ ಬದಿ ವ್ಯಾಪಾರಿಗಳಿಗೆ ಛತ್ರಿಗಳನ್ನು ವಿತರಿಸಿದರು. ಈ ವೇಳೆ ನಗರ ಪಾಲಿಕೆ ಸದಸ್ಯ ಬಿ. ವಿ. ಮಂಜುನಾಥ್, ಉಮೇಶ್, ಕೆಆರ್ ಕ್ಷೇತ್ರದ ಬಿಜೆಪಿ ಅಧ್ಯಕ್ಷ ವಡಿವೇಲು, ಪ್ರಧಾನ ಕಾರ್ಯದರ್ಶಿ ನಾಗೇಂದ್ರ, ಓಂ ಶ್ರೀನಿವಾಸ್, ವಕೀಲ ಶಿವರಾಜ್, ಬ್ರಾಹ್ಮಣ ನಿಗಮ ಮಂಡಳಿ ನಿರ್ದೇಶಕ ಬಾಲಕೃಷ್ಣ, ಆಶ್ರಯ ಸಮಿತಿ ಸದಸ್ಯ ಹೇಮಂತ್ ಕುಮಾರ್, ವೆಂಕಟೇಶ್, ವಾರ್ಡಿನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಆಪಲ್‌ಗೆ ಪರಿಕರ ಪೂರೈಸುವ ಫಾಕ್ಸ್‌ಲಿಂಕ್ ಘಟಕಕ್ಕೆ ಬೆಂಕಿ: ಅಪಾರ ಹಾನಿ

ಹೈದರಾಬಾದ್: ಆಪಲ್‌ಗೆ ಪರಿಕರಗಳನ್ನು ಪೂರೈಸುವ ಫಾಕ್ಸ್‌ಲಿಂಕ್‌ನ ಆಂಧ್ರ ಪ್ರದೇಶ ಉತ್ಪಾದನಾ ಘಟಕದಲ್ಲಿ ಅಗ್ನಿ ಅವಘಡ ಸಂಭವಿಸಿ, ಅಪಾರ ನಷ್ಟವುಂಟಾಗಿದೆ. ಈ ಹಿನ್ನೆಲೆಯಲ್ಲಿ ಉತ್ಪಾದನೆಯನ್ನು ನಿಲ್ಲಿಸಲಾಗಿದ್ದು, 400 ಉದ್ಯೋಗಿಗಳನ್ನು ಸ್ಥಳಾಂತರಿಸಲಾಗಿದೆ ಎಂದು ಸ್ಥಳೀಯ ಸರ್ಕಾರಿ ಅಧಿಕಾರಿಗಳು ತಿಳಿಸಿದ್ದಾರೆ.

ಐಫೋನ್‌ಗಳಿಗೆ ಬೇಕಾದ ಕೇಬಲ್‌ಗಳನ್ನು ಪಾಕ್ಸ್‌ಲಿಂಕ್ ಪೂರೈಕೆ ಮಾಡುತ್ತದೆ. ಸಂಸ್ಥೆಯ ಉತ್ಪಾದಾ ಘಟಕದಲ್ಲಿ ಕಾಣಿಸಿಕೊಂಡ ಬೆಂಕಿಯಿಂದಾಗಿ ಶೇ. 50ರಷ್ಟು ಯಂತ್ರೋಪಕರಣಗಳು ಹಾನಿಗೊಳಗಾಗಿದ್ದು, ಕಾರ್ಖಾನೆ ಕಟ್ಟಡದ ಅರ್ಧದಷ್ಟು ಭಾಗ ಕುಸಿದಿದೆ ಎಂದು ತಿರುಪತಿ ಜಿಲ್ಲೆಯ ವಿಪತ್ತು ನಿರ್ವಹಣಾ ಹಾಗೂ ಅಗ್ನಿಶಾಮಕ ಸೇವೆಗಳ ಇಲಾಖೆಯ ಜೆ ರಮಣಯ್ಯ ಹೇಳಿದ್ದಾರೆ. ದುರಂತದಿಂದಾಗಿ ರೂ. 100 ಕೋಟಿಯಷ್ಟು ಹಾನಿಯಾಗಿದೆ. ಘಟನೆಯಲ್ಲಿ ಯಾವುದೇ ಸಾವುನೋವು ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆ ಬಗ್ಗೆ ಆಪಲ್ ತಕ್ಷಣ ಪ್ರತಿಕ್ರಿಯಿಸಲಿಲ್ಲ. ಫಾಕ್ಸ್‌ಲಿಂಕ್‌ನ ಅಧಿಕಾರಿಗಳಿಂದಲೂ ಮಾಹಿತಿ ಸಿಕ್ಕಿಲ್ಲ.

ಟಿ.ನರಸೀಪುರದಿಂದ ಪ್ರಫುಲ್‌ಕುಮಾರ್‌ಗೆ ಕಾಂಗ್ರೆಸ್ ಟಿಕೆಟ್ ನೀಡಲು ಆಗ್ರಹ

ಮೈಸೂರು,ಫೆ.27(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಿ.ನರಸೀಪುರ ಕ್ಷೇತ್ರದಿಂದ ಸ್ಪರ್ಧಿಸಲು ಪಕ್ಷದ ಹಿರಿಯ ಮುಖಂಡ ಹಾಗೂ ವಕೀಲ ಎಂ.ಪ್ರಫುಲ್‌ಕುಮಾರ್ ಅವರಿಗೆ ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ನೀಡುವಂತೆ ತಿ.ನರಸೀಪುರದ ಆದಿ ಜಾಂಬವ ಮಹಾಸಭಾ ಅಧ್ಯಕ್ಷ ಭಲ್ಲಯ್ಯ ಒತ್ತಾಯಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಮುಖಂಡರಾದ ಪ್ರಫುಲ್‌ಕುಮಾರ್ ಅವರು ವಿಧಾನ ಪರಿಷತ್ ಸದಸ್ಯರಾಗಿದ್ದ ಎನ್.ಮಂಜುನಾಥ್ ಅವರ ಪುತ್ರರಾಗಿದ್ದಾರೆ. ಪಕ್ಷದೊಂದಿಗೆ ಉತ್ತಮ ಒಡನಾಟ ಇಟ್ಟುಕೊಂಡು ಜನಾನುರಾಗಿಯಾಗಿದ್ದಾರೆ. ಈ ಕ್ಷೇತ್ರದಲ್ಲಿ ಸಮುದಾಯದವರ ಜನಸಂಖ್ಯೆ ಹೆಚ್ಚಾಗಿದ್ದು, ಈ ಬಾರಿ ಇವರಿಗೆ ಟಿಕೆಟ್ ನೀಡುವ ಮೂಲಕ ಪರಿಶಿಷ್ಟ ಜಾತಿಯ ಎಡಗೈ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಶ್ರೀನಿವಾಸ್, ಮಂಜುನಾಥ್ ನಡಕಲಪುರ, ಬಸವನಪುರ ರಾಜೇಶ್, ಸುನಿಲ್‌ಕುಮಾರ್ ಇದ್ದರು.



ಬಿಜೆಪಿ ತಿರಸ್ಕರಿಸಿ ಕಾಂಗ್ರೆಸ್ ಅಧಿಕಾರಕ್ಕೆ ತರಲು ಜನ ಕಾದಿದ್ದಾರೆ

ಕೆ.ಆರ್.ಕ್ಷೇತ್ರ ಕಾಂಗ್ರೆಸ್ ಪ್ರಮುಖರ ಸಭೆಯಲ್ಲಿ ಮುಖಂಡರ ವಿಶ್ವಾಸ



ಮೈಸೂರು, ಫೆ.27(ಎಸ್‌ಬಿಡಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೃಷ್ಣರಾಜ ಸೇರಿದಂತೆ ರಾಜ್ಯದ ಅತೀ ಹೆಚ್ಚು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಗೆಲುವಾಗಲಿದೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ. ವೆಂಕಟೇಶ್ ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಜನಪರ ಯೋಜನೆಗಳ ಘೋಷಣೆ ಬಗ್ಗೆ ಪ್ರಚುರಪಡಿಸುವ ಸಂಬಂಧ ಮೈಸೂರಿನ ಕುವೆಂಪುನಗರದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಸೋಮವಾರ ನಡೆದ ಕೃಷ್ಣರಾಜ ಕ್ಷೇತ್ರದ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿ ದುರಾಡಳಿತದಿಂದ ರಾಜ್ಯದ ಜನ ರೋಸಿ ಹೋಗಿದ್ದಾರೆ. ಆದರೆ ಕಾಂಗ್ರೆಸ್ ಮೂರು ಮಹತ್ವದ ಯೋಜನೆಗಳನ್ನು ಘೋಷಿಸಿದೆ. ಜನ ಆಶೀರ್ವದಿಸಿ ಅಧಿಕಾರ ನೀಡಿದರೆ ಯೋಜನೆಗಳನ್ನು ಅನುಷ್ಠಾನಗೊಳಿಸುವ ಗ್ಯಾರಂಟಿ ನೀಡಿದೆ. ಈ ಬಗ್ಗೆ ಕ್ಷೇತ್ರದ ಮನೆ ಮನೆಗೆ ಭೇಟಿ ನೀಡಿ ಪ್ರಚುರಪಡಿಸಬೇಕು ಎಂದು ಸಲಹೆ ನೀಡಿದರು.

ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಆಡಳಿತ ನಡೆಸುತ್ತಿದೆ. ಆದರೆ ಎರಡು ಸರ್ಕಾರಗಳೂ ಜನಪರ ಯೋಜನೆಗಳ ರೂಪಿಸುವ ಬದಲು ಹಗರಣಗಳಲ್ಲೇ ಮುಳುಗಿ ಹೋಗಿವೆ. ಬಡವರ ಪರ ಕಾರ್ಯಕ್ರಮಗಳನ್ನು ನೀಡದೆ ಜನರನ್ನು ಭ್ರಮನಿರಸನಗೊಳಿಸಿವೆ. ಅಲ್ಲದೆ ಕಾಂಗ್ರೆಸ್ ಸರ್ಕಾರವಿದ್ದಾಗ ಜಾರಿಯಲ್ಲಿದ್ದ ಹಲವು ಮಹತ್ವದ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಿ ಜನರಿಗೆ ದ್ರೋಹವೆಸಗಿದ್ದಾರೆ. ಬಡವರ ಹಸಿವು ನೀಗಿಸುತ್ತಿದ್ದ ಇಂದಿರಾ ಕ್ಯಾಂಟಿನ್‌ಗಳನ್ನು ಸಂಪೂರ್ಣವಾಗಿ ಮುಚ್ಚಿಸಿದ್ದಾರೆ. ವಿದ್ಯಾರ್ಥಿ ವೇತನವನ್ನು ತಡೆ ಹಿಡಿದು ಅವರ ಶೈಕ್ಷಣಿಕ ಹಿನ್ನೆಡೆಗೆ ಕಾರಣವಾಗಿದ್ದಾರೆ. ಇದೆಲ್ಲದಕ್ಕೂ ಸರಿಯಾದ ಪ್ರತಿಫಲ ಸಿಗುವ ಕಾಲ ಸನ್ನಿಹಿತವಾಗಿದೆ. ಬಿಜೆಪಿಯನ್ನು ತಿರಸ್ಕರಿಸಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಮತದಾರರು ತುದಿಗಾಲಲ್ಲಿ ನಿಂತಿದ್ದಾರೆ ಎಂದು ಹೇಳಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಕ್ಷೇತ್ರದ ಮುಖಂಡರು, ಕಾರ್ಯಕರ್ತರು ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್ ಆಡಳಿತ ನಡೆಸಿದ ಸಂದರ್ಭದಲ್ಲಿ ಜನಪರ ಯೋಜನೆಗಳು ಅಭಿವೃದ್ಧಿಗೆ ಪೂರಕವಾಗಿದ್ದವು. ಆದರೆ ಬಿಜೆಪಿ ಉಳ್ಳವರ ಉದ್ಧಾರಕ್ಕೆ ನಿಂತಿದೆ ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಿದೆ ಎಂದರು.

ಸಭೆಯಲ್ಲಿ ಕೆಪಿಸಿಸಿ ಸದಸ್ಯರಾದ ನಾರಾಯಣ್, ಟಿ.ಎಸ್.ರವಿಶಂಕರ್, ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ರಾಜ್ಯ ಕಾರ್ಯದರ್ಶಿ ಲತಾ ಮೋಹನ್, ರಾಧಾಮಣಿ, ಮಲ್ಲಾಜಮ್ಮ, ಪಾಲಿಕೆ ಸದಸ್ಯ ಲೋಕೇಶ್ ಪಿಯಾ, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಪಾಲಿಕೆ ಮಾಜಿ ಸದಸ್ಯರಾದ ಎಂ.ಸಿ.ಚಿಕ್ಕಣ್ಣ, ಎಂ.ಸುನೀಲ್, ಸೆನೆಟ್ ಮಾಜಿ ಸದಸ್ಯ ಗೋಪಿನಾಥ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇಖರ್, ಶ್ರೀಧರ್, ಮುಖಂಡರಾದ ರವಿಶಂಕರ್, ಈಶ್ವರ್ ಚಕ್ಕಡಿ, ಡೈರಿ ವೆಂಕಟೇಶ್, ಯೋಗೇಶ್ ಉಪ್ಪಾರ, ರೂಪೇಶ್, ಸೇವಾದಳ ಗಿರೀಶ್, ಮೊಗಣ್ಣಾಚಾರ್, ಹೇಮಂತ್, ವಿನಯ್ ಕುಮಾರ್, ವಸಂತ್ ನಾಯಕ್, ಅಭಿಷೇಕ್ ಶಿವಣ್ಣ ಮತ್ತಿತರರು ಪಾಲ್ಗೊಂಡಿದ್ದರು.

ಶಾಸಕ ನಾಗೇಂದ್ರರಿಂದ ವಿವಿಧ ಕಾಮಗಾರಿಗೆ ಚಾಲನೆ

ಮೈಸೂರು, ಫೆ.27(ಎಸ್‌ಬಿಡಿ)– ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ವಿವಿಧೆಡೆ ಲಕ್ಷಾಂತರ ರೂ. ಅಂದಾಜು ಮೊತ್ತದ ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಸೋಮವಾರ ಚಾಲನೆ ನೀಡಿದರು.

ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಹಾಗೂ ಮುಜರಾಯಿ ಇಲಾಖೆಯ ವಿಶೇಷ ಅನುದಾನದ ಸೇರಿ ಒಟ್ಟು 17 ಲಕ್ಷ ರೂ. ಮೊತ್ತದಲ್ಲಿ ಗೋಕುಲಂ ಬಡಾವಣೆ(ವಾರ್ಡ್–6)ಯ ಶ್ರೀರಾಮ ಮಂದಿರ ಕಟ್ಟಡದ ಜೀರ್ಣೋದ್ಧಾರ ಕಾಮಗಾರಿಯ ಕೈಗೊಳ್ಳಲಾಗಿದೆ. ಕೆಆರ್‌ಎಸ್ ಮುಖ್ಯ ರಸ್ತೆ ಹಸು–ಕರು ಪಾರ್ಕ್ ಎದುರು, ಯಾದವಗಿರಿ(ವಾರ್ಡ್–18) ವ್ಯಾಪ್ತಿ ಪ್ರದೇಶದಲ್ಲಿ 10 ಲಕ್ಷ ರೂ. ಮೊತ್ತದಲ್ಲಿ ಹೈಟೆಕ್ ಬಸ್ ನಿಲ್ದಾಣ ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಎರಡು ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಅವರು 6ನೇ ವಾರ್ಡ್ ಕಾರ್ಪೊರೇಟರ್ ಎಸ್‌ಬಿಎಂ ಜೊತೆಗೂಡಿ ಭೂಮಿಪೂಜೆ ನೆರವೇರಿಸಿದರು.



ಈ ಸಂದರ್ಭದಲ್ಲಿ ನಗರಪಾಲಿಕೆ ನಾಮ ನಿರ್ದೇಶಿತ ಸದಸ್ಯ ಚಿಕ್ಕವೆಂಕಟು, ಮಾಜಿ ಸದಸ್ಯ ದೇವರಾಜು, ಬಿಜೆಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ಸೋಮಶೇಖರರಾಜು, ಉಪಾಧ್ಯಕ್ಷ ಜಯಣ್ಣ, ಪ್ರಧಾನ ಕಾರ್ಯದರ್ಶಿ ಪುನೀತ್, ಬಿಎಲ್‌ಎ–1 ದಿನೇಶ್‌ಗೌಡ, ವಾರ್ಡ್ ಅಧ್ಯಕ್ಷ ಅಶೋಕ್, ಮುಖಂಡರಾದ ಮಾಧವರಾವ್, ರಂಗಸ್ವಾಮಿ, ರವಿ, ಪ್ರಸನ್ನ, ಸಿ.ಡಿ.ಕುಮಾರ್, ಪ್ರಕಾಶ್, ಭರತ್, ಹನುಮಂತು, ಕೃಷ್ಣಪ್ಪ, ಇಂದ್ರೇಶ್, ಕುಮಾರ್, ಅರವಿಂದ ಮತ್ತಿತರರು ಉಪಸ್ಥಿತರಿದ್ದರು.

ಅಕ್ಕಿ ಗೋದಾಮು, ಸಭಾಂಗಣ ಕಾಮಗಾರಿಗೆ ಭೂಮಿ ಪೂಜೆ



ಪಾಂಡವಪುರ, ಫೆ.27– ತಾಲೂಕಿನ ಚಿಕ್ಕಾಡೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ 13 ಲಕ್ಷ ರೂ. ವೆಚ್ಚದ ಅಕ್ಕಿ ಸಂಗ್ರಹಣ ಗೋದಾಮು ಹಾಗೂ ಸಭಾಂಗಣ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಎಸ್.ಪುಟ್ಟರಾಜು ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಚಿಕ್ಕಾಡೆ ಗ್ರಾಮಕ್ಕೆ ಸಾಕಷ್ಟು ಅನುದಾನ ನೀಡಿ ಅಭಿವೃದ್ಧಿಪಡಿಸಲಾಗಿದೆ. ಅಭಿವೃದ್ಧಿ ವಿಚಾರದಲ್ಲಿ ಎಲ್ಲರೂ ಒಗ್ಗಟ್ಟಾಗಿರಬೇಕು. ಚಿಕ್ಕಾಡೆ ಒಂದು ಮಾದರಿ ಗ್ರಾಮವಾಗಿದ್ದು, ಮುಂದಿನ ದಿನಗಳಲ್ಲಿ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು. ಇದೇ ವೇಳೆ ಸಹಕಾರ ಸಂಘದಲ್ಲಿನ ಸಿ.ಮರೀಗೌಡ ಸಭಾಂಗಣ ಅನಾವರಣಗೊಳಿಸಿದರು.

ಈ ಸಂದರ್ಭ ಅಧ್ಯಕ್ಷ ಸಿ.ಪಿ.ಕೃಷ್ಣೇಗೌಡ, ಉಪಾಧ್ಯಕ್ಷ ಸಿ.ಕೆ.ಅಂಕಯ್ಯ, ನಿರ್ದೇಶಕರಾದ ಡಿ.ಎಂ.ಜಗದೀಶ್, ಸಿ.ವಿ.ರವೀಂದ್ರಸ್ವಾಮಿ, ದಿಲೀಪ್, ಮರಿಶೆಟ್ಟಿ, ಸ್ವಾಮಿಶೆಟ್ಟಿ, ಪುಟ್ಟಲತಾ, ಸುಶೀಲಮ್ಮ, ಸಹಕಾರ ಸಂಘದ ಉಪ ನಿಬಂಧಕ ಎಚ್.ಆರ್.ನಾಗಭೂಷಣ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಸರೋಜ, ಎಪಿಎಂಸಿ ಮಾಜಿ ಅಧ್ಯಕ್ಷ ಸ್ವಾಮೀಗೌಡ, ಗ್ರಾಪಂ ಅಧ್ಯಕ್ಷ ಸಿ.ಪಿ.ಅರ್ಜುನ್, ಮಾಜಿ ಅಧ್ಯಕ್ಷ ಚಂದ್ರಶೇಖರ್, ಮುಖಂಡರಾದ ರಾಮಕೃಷ್ಣೇಗೌಡ, ವಾಸುದೇವ್ ಸೇರಿದಂತೆ ಹಲವರಿದ್ದರು.

ಡಿಸೆಂಬರ್‌ನಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

- ಮಂಡ್ಯದ ಚಿಕ್ಕಮಂಡ್ಯ ಕೆರೆ ಅಂಗಳ ಅಥವಾ ಉಮ್ಮಡಹಳ್ಳಿ ಗೇಟ್ ಬಳಿ ಬೃಹತ್ ವೇದಿಕೆ ನಿರ್ಮಾಣ
- ಅಚ್ಚುಕಟ್ಟಾಗಿ ಸಮ್ಮೇಳನ ನಡೆಸಲು ಜಿಲ್ಲಾ ಕಸಾಪ ಪದಾಧಿಕಾರಿಗಳಿಗೆ ಮಹೇಶ್ ಜೋಷಿ ಸೂಚನೆ

ಮಂಡ್ಯ, ಫೆ.27– 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಈ ವರ್ಷದ ಡಿಸೆಂಬರ್‌ನಲ್ಲಿ ಆಯೋಜಿಸಲು ನಿರ್ಧರಿಸಲಾಗಿದ್ದು, ಮಂಡ್ಯ ಹೊರ ವಲಯದ ಚಿಕ್ಕಮಂಡ್ಯ ಕೆರೆ ಅಂಗಳ ಅಥವಾ ಉಮ್ಮಡ ಹಳ್ಳಿ ಗೇಟ್ ಬಳಿ ಬೃಹತ್ ವೇದಿಕೆ ನಿರ್ಮಾಣ ಮಾಡಲು ಚಿಂತಿಸಲಾಗಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಪದಾಧಿಕಾರಿಗಳು ಅಚ್ಚುಕಟ್ಟಾಗಿ ಸಮ್ಮೇಳನ ನಡೆಸಲು ಸಿದ್ಧರಾಗಬೇಕೆಂದು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಮಹೇಶ್ ಜೋಷಿ ಸೂಚಿಸಿದರು.

ಸೋಮವಾರ ನಗರದ ಜಿಪಂ ಕಾವೇರಿ ಸಭಾಂಗಣದಲ್ಲಿ ಈ ಬಾರಿ ಮಂಡ್ಯದಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯದಲ್ಲಿ ನಡೆಸಬೇಕೆಂದು ನಿರ್ಧಾರವನ್ನು ಹಾವೇರಿಯಲ್ಲಿ ನಡೆದ ಸಮ್ಮೇಳನದಲ್ಲಿ ಕೈಗೊಳ್ಳಲಾಗಿದೆ. ಇದರ ಅಂಗವಾಗಿ ಮೊದಲ ಪೂರ್ವಭಾವಿ ಸಭೆಯನ್ನು ಮಂಡ್ಯದಲ್ಲಿ ನಡೆಸುತ್ತಿದ್ದು, ಜಿಲ್ಲಾ ಮಟ್ಟದ ಅಧಿಕಾರಿಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳ ಜೊತೆ ಚರ್ಚಿಸಿ ಸಲಹೆ ಸೂಚನೆ ಪಡೆದಿದ್ದೇವೆ. ಸಮ್ಮೇಳನ ಆಯೋಜನೆಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ಮುಗಿದ ನಂತರ ಮುಂದಿನ ಕ್ರಮ ಕೈಗೊಳ್ಳುತ್ತೇವೆ ಎಂದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 87 ಕನ್ನಡ ಪುಸ್ತಕ ಬಿಡುಗಡೆಗೊಳಿಸಲಾಗುವುದು. ಕನ್ನಡದ 87 ಸಾಧಕರನ್ನು ಸನ್ಮಾನಿಸಲಾಗುವುದು. ಸಮ್ಮೇಳನಕ್ಕೂ ಮೊದಲು ಕಾರ್ಯಕ್ರಮಕ್ಕೆ ಪ್ರಚಾರ ನೀಡಲು ಭುವನೇಶ್ವರಿ ಭಾವಚಿತ್ರವುಳ್ಳ ಕನ್ನಡ ರಥದ ಮೆರವಣಿಗೆ ಆಯೋಜಿಸಬೇಕು. ಹಾವೇರಿಯಲ್ಲಿ ಐತಿಹಾಸಿಕ ಸಮ್ಮೇಳನ ನಡೆಸಿದ್ದೇವೆ. ಜೊತೆಗೆ ಹಾವೇರಿಯಲ್ಲಿ ಆದ ಲೋಪದೋಷಗಳು ಮಂಡ್ಯದಲ್ಲಿ ಆಗಬಾರದು ಎನ್ನುವ ನಿಟ್ಟಿನಲ್ಲಿ ಕಾರ್ಯ ಯೋಜನೆ ರೂಪಿಸಬೇಕಿದೆ. ಮುಂದಿನ ತಿಂಗಳಿನಿಂದಲೇ ಸಿದ್ಧತೆ ನಡೆಸಲಾಗುವುದು ಎಂದರು.



ಹಾವೇರಿ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 9 ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸಿದ್ದಾರೆ. ಕನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಪುಸ್ತಕ ಮಾರಾಟ ಸಂದರ್ಭದಲ್ಲಿ ಆನ್‌ಲೈನ್ ಮೂಲಕ ವಹಿವಾಟು ನಡೆಸಲು ತೊಡಕಾಗಿತ್ತು. ಈ ಬಾರಿ ಇದನ್ನು ಸರಿಪಡಿಸಿಕೊಳ್ಳಬೇಕು. ಮೂಲ ಸೌಲಭ್ಯಗಳಾದ ಕುಡಿಯುವ ನೀರು, ಶೌಚಾಲಯ, ವಸತಿ ಗೃಹ, ಆಹಾರ ಯಾವುದೇ ಲೋಪದೋಷ ಆಗದಂತೆ ನೋಡಿಕೊಳ್ಳಲಾಗುವುದು. ತಂತ್ರಜ್ಞಾನದ ಅಳವಡಿಕೆ ಜತೆಗೆ ಸ್ವಯಂ ಸೇವಕರನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ವಿವರಿಸಿದರು.

ಕನಿಷ್ಠ 150 ಎಕರೆ ಸ್ಥಳವನ್ನು ಗುರುತಿಸಿದರೆ ಸಮ್ಮೇಳನ ಆಯೋಜನೆಗೆ ಉತ್ತಮವಾಗಿರುತ್ತದೆ. 3 ವೇದಿಕೆ, ಪಾರ್ಕಿಂಗ್ ವ್ಯವಸ್ಥೆ, ಅಡುಗೆ ಮನೆ, ಮಾರಾಟ ಮಳಿಗೆಗಳು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಾಣ ಮಾಡಬಹುದು. ಪ್ಲಾಸ್ಟಿಕ್ ಮುಕ್ತ ಸಮ್ಮೇಳನ ಆಯೋಜಿಸಬೇಕು ಎಂದರು.

ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ಮಾತನಾಡಿದರು. ಸಭೆಯಲ್ಲಿ ಜಿಪಂ ಸಿಇಓ ಶಾಂತಾ ಹುಲ್ಮನಿ, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಎಸಿ ನಂದೀಶ್, ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಜಿಲ್ಲಾ ಕಸಾಪ ಅಧ್ಯಕ್ಷ ರವಿಕುಮಾರ್ ಸೇರಿದಂತೆ ವಿವಿಧ ಸಂಘಟನೆಗಳ ಮುಖ್ಯಸ್ಥರು ಇದ್ದರು. ಸಭೆ ನಂತರ ಚಿಕ್ಕಮಂಡ್ಯ ಮತ್ತು ಉಮ್ಮಡಹಳ್ಳಿ ಗೇಟ್ ಸಾಂಜೋ ಹಾಸ್ಪಿಟಲ್ ಹತ್ತಿರ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸುವ ಸಂಬಂಧ ಕಸಾಪ ಅಧ್ಯಕ್ಷ ಡಾ.ಮಹೇಶ್ ಜೋಷಿ, ಜಿಲ್ಲಾಧಿಕಾರಿ ಗೋಪಾಲಕೃಷ್ಣ, ಅಪರ ಜಿಲ್ಲಾಧಿಕಾರಿ ನಾಗರಾಜು ಸ್ಥಳ ಪರಿಶೀಲನೆ ನಡೆಸಿದರು.

ಮನೆಗೆ ಆಕಸ್ಮಿಕ ಬೆಂಕಿ: ಲಕ್ಷಾಂತರ ರೂ. ನಷ್ಟ

ಮಂಡ್ಯ, ಫೆ.27– ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡು ಮನೆ ವಸ್ತುಗಳೆಲ್ಲ ಸುಟ್ಟು ಕರಕಲಾಗಿರುವ ಘಟನೆ ಗಾಂಧಿನಗರದ 9ನೇ ಕ್ರಾಸ್‌ನಲ್ಲಿ ಮಧ್ಯಾಹ್ನ ನಡೆದಿದೆ.

ಗಾಂಧಿನಗರ ನಿವಾಸಿ ನಿವೃತ್ತ ಕಂದಾಯಾಧಿಕಾರಿ ರಾಮಕೃಷ್ಣ ಹಾಗೂ ನಗರಸಭೆ ಮಾಜಿ ಸದಸ್ಯ, ವಕೀಲ ಮಹೇಶ್ ಕೃಷ್ಣ ಅವರಿಗೆ ಸೇರಿದ ಮನೆಯಲ್ಲಿ ಸೋಮವಾರ ಮಧ್ಯಾಹ್ನ ಯಾರೂ ಇಲ್ಲದ ಸಮಯದಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿದೆ.

ಬೆಂಕಿ ಕಿನ್ನಾಲಿಗೆ ಮನೆಯಲ್ಲಿದ್ದ ಬಟ್ಟೆಗಳು, ಎಲೆಕ್ಟ್ರಾನಿಕ್ಸ್ ವಸ್ತುಗಳು, ಫ್ರಿಡ್ಜ್, ಟಿವಿ, ದಿನಸಿ ವಸ್ತುಗಳು ಸೇರಿದಂತೆ ಮನೆಯಲ್ಲಿದ್ದ ವಸ್ತುಗಳು ಸಂಪೂರ್ಣವಾಗಿ ಸುಟ್ಟು ಹೋಗಿವೆ. ಮನೆಯಿಂದ ಹೊಗೆ ಹಾಗೂ ಬೆಂಕಿ ಜ್ವಾಲೆ ಕಂಡ ಅಕ್ಕಪಕ್ಕದ ಮನೆಯವರು ಕೂಡಲೇ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದಾರೆ. ತಕ್ಷಣ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಅಥವಾ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡು ಮನೆಯಲ್ಲಿದ್ದ ವಸ್ತುಗಳು ಸುಟ್ಟು ಹೋಗಿವೆ. 10 ಲಕ್ಷ ರೂ. ನಷ್ಟವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಪರಿಹಾರ ನೀಡಬೇಕು ಎಂದು ನಗರಸಭೆ ಮಾಜಿ ಸದಸ್ಯ ಮಹೇಶ್ ಕೃಷ್ಣ ಮನವಿ ಮಾಡಿದ್ದಾರೆ. ಈ ಸಂಬಂಧ ಪಶ್ಚಿಮ ಪೊಲೀಸ್ ಠಾಣೆ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಿ.ಟಿ.ಕೃಷ್ಣೇಗೌಡ ನಿಧನ



ಕೆ.ಆರ್.ಪೇಟೆ, ಫೆ.27– ಪಟ್ಟಣದ ಜಯನಗರ ಬಡಾವಣೆ ನಿವಾಸಿ, ಶಿಕ್ಷಕ ಬಳ್ಳೇಕೆರೆ ಬಿ.ಟಿ. ಕೃಷ್ಣೇಗೌಡ(46) ಸೋಮವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹುಟ್ಟೂರು ಬಳ್ಳೇಕೆರೆ ಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಮ್ಮಯ್ಯ



ಕೆ.ಆರ್.ಪೇಟೆ, ಫೆ.27– ಪಟ್ಟಣದ ಬಸವೇಶ್ವರನಗರ ನಿವಾಸಿ ಹಾಗೂ ವೀರಶೈವ ಸಮಾಜದ ಹಿರಿಯ ಮುಖಂಡರಾದ ತಮ್ಮಯ್ಯ (75) ನಿಧನರಾದರು. ಮೃತರು ಪತ್ನಿ, ಪುತ್ರ ಅರುಣ್, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಶ್ರವಣಬೆಳಗೊಳ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಕಿರು ಜಲವಿದ್ಯುತ್ ಉತ್ಪಾದನಾ ಘಟಕಕ್ಕೆ ರೈತರ ಮುತ್ತಿಗೆ

ಕಾಮಗಾರಿ ತಡೆಗೆ ಯತ್ನ, ರೈತರು–ಪೊಲೀಸರ ನಡುವೆ ಮಾತಿನ ಚಕಮಕಿ



ಶ್ರೀರಂಗಪಟ್ಟಣ, ಫೆ.27– ತಾಲೂಕಿನ ದೊಡ್ಡಪಾಳ್ಯ ಬಳಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಕಿರು ಜಲ ವಿದ್ಯುತ್ ಉತ್ಪಾದನಾ ಘಟಕದ ತಡೆಗೋಡೆ ಎತ್ತರ ಮಾಡಿದರೆ ರೈತರ ಜಮೀನು ಮುಳುಗಡೆಯಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ರೈತ ಮುಖಂಡ ಮಂಜೇಶ್ ಗೌಡರ ನೇತೃತ್ವದಲ್ಲಿ ರೈತರು ಘಟಕಕ್ಕೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಕಿರು ಜಲ ವಿದ್ಯುತ್ ಉತ್ಪಾದನಾ ಘಟಕದ ತಡೆಗೋಡೆ ಎತ್ತರ ಮಾಡಿದರೆ ತಗ್ಗು ಪ್ರದೇಶದ ಜಮೀನುಗಳು ಸಂಪೂರ್ಣ ಮುಳುಗಡೆಯಾಗಿ ಫಸಲು ಕೈ ಸೇರುವುದಿಲ್ಲ ಎಂದು ಆರೋಪಿಸಿ 50ಕ್ಕೂ ಹೆಚ್ಚು ರೈತರು ಕಾಮಗಾರಿ ತಡೆಯಲು ಮುಂದಾದರು. ಈ ವೇಳೆ ಡಿವೈಎಸ್ಪಿ ಮುರುಳಿ ನೇತೃತ್ವದ 70ಕ್ಕೂ ಪೊಲೀಸರು ರೈತರನ್ನು ತಡೆದರು. ಈ ವೇಳೆ ರೈತರು ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಗ್ರಾಪಂ ಪರವಾನಗಿ ಇಲ್ಲದೇ ಅಕ್ರಮವಾಗಿ ನಿರ್ಮಿಸಿರುವ ಕಾಮಗಾರಿಗೆ ಕೋರ್ಟ್ ಮೆಟ್ಟಿಲೇರಿ, ವರದಿ ತಂದು ರೈತರನ್ನು ಪೊಲೀಸರಿಂದ ಬೆದರಿಸುವ ಕೆಲಸವನ್ನು ಕಿರು ಜಲ ವಿದ್ಯುತ್ ಕಂಪನಿಯವರು ಮಾಡುತ್ತಿದ್ದಾರೆ. ಇದಕ್ಕೆ ಪೊಲೀಸರು ಕೂಡ ಸಾಥ್ ನೀಡುತ್ತಿದ್ದಾರೆ. ಕಿರು ಜಲ ವಿದ್ಯುತ್ ಘಟಕದ ತಡೆಗೋಡೆ ಎತ್ತರ ಮಾಡುವುದರಿಂದ ಬೆಳೆ ಮುಳುಗಡೆಯಾಗಿ ಸಾಕಷ್ಟು ನಷ್ಟ ಸಂಭವಿಸುವುದರಿಂದ ರೈತರೆಲ್ಲರೂ ಸಾಮೂಹಿಕ ವಿಷ ಸೇವಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಮಧ್ಯ ಪ್ರವೇಶಿಸಿದ ಡಿವೈಎಸ್ಪಿ ಮುರಳಿ, ನಿಮ್ಮ ಸಮಸ್ಯೆಗಳ ಬಗ್ಗೆ ತಹಸೀಲ್ದಾರ್ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸಲಾಗುವುದು ಎಂದು ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ಪ್ರತಿಭಟನೆ ಹಿಂಪಡೆದರು.

ಇಂದು ಮುಷ್ಕರ: ಕಿರು ಜಲ ವಿದ್ಯುತ್ ಘಟಕದ ತಡೆಗೋಡೆ ಎತ್ತರ ಮಾಡಿದರೆ ನೂರಾರು ಎಕರೆ ಜಮೀನು ಕಾವೇರಿ ನದಿ ಹಿನ್ನೀರಿನಲ್ಲಿ ಮುಳುಗುವ ಸಾಧ್ಯತೆ ಇರುವುದರಿಂದ ಶಾಶ್ವತ ಪರಿಹಾರಕ್ಕೆ ಒತ್ತಾಯಿಸಿ ಫೆ.28ರಂದು ಬೆಳಗ್ಗೆ ಡಿವೈಎಸ್ಪಿ ಕಚೇರಿ ಎದುರು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಲಾಗುವುದು ಎಂದು ರೈತ ಮುಖಂಡ ಮಂಜೇಶ್‌ಗೌಡ ತಿಳಿಸಿದ್ದಾರೆ.

ರೈತ ಮುಖಂಡರಾದ ನಾಗೇಂದ್ರಸ್ವಾಮಿ, ಚಂದ್ರಶೇಖರ್ ಸೇರಿದಂತೆ ಜಮೀನು ಸಮಸ್ಯೆಯಾಗಿರುವ ರೈತರು, ಸಿಪಿಐ ಬಿ.ಜಿ. ಕುಮಾರ್, ಪುನೀತ್ ಇನ್ನಿತರರಿದ್ದರು.

ಇಂದಿನಿಂದ ಆದಿಚುಂಚನಗಿರಿ ಜಾತ್ರಾ ಮಹೋತ್ಸವ

ನಾಗಮಂಗಲ, ಫೆ27– ತಾಲೂಕಿನ ಶ್ರೀಆದಿಚುಂಚನಗಿರಿ ಜಾತ್ರಾ ಮಹೋತ್ಸವ ಫೆ.28ರಿಂದ ಮಾ.8ರವರೆಗೆ ನಡೆಯಲಿದೆ ಎಂದು ಶ್ರೀಮಠದ ಕಾರ್ಯದರ್ಶಿ ಶ್ರೀಪ್ರಸನ್ನನಾಥ ಸ್ವಾಮೀಜಿ ತಿಳಿಸಿದರು.

ಫೆ.28ರಂದು ಬೆಳಗ್ಗೆ 6 ಗಂಟೆಗೆ ಗಂಗಾಧರೇಶ್ವರಸ್ವಾಮಿ ದೇವಾಲಯದಲ್ಲಿ ಮಹಾಪೂಜೆ, 8 ಗಂಟೆಗೆ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಸ್ವಾಮೀಜಿ ನಂದಿ ಪೂಜೆ ಹಾಗೂ ಧರ್ಮ ಧ್ವಜಾರೋಹಣ ಮಾಡುವ ಮೂಲಕ 9 ದಿನಗಳ ಜಾತ್ರಾ ಮಹೋತ್ಸವ ಚಾಲನೆ ನೀಡಲಿದ್ದಾರೆ. ಸಂಜೆ 6 ಗಂಟೆಗೆ ಮಲ್ಲೇಶ್ವರ ಸ್ವಾಮಿ ಉತ್ಸವ ನಡೆಯಲಿದೆ.

ಮಾ.3ರಂದು ಬೆಳಗ್ಗೆ 8 ಗಂಟೆಗೆ ಸರಳ ಸಾಮೂಹಿಕ ವಿವಾಹ ಹಾಗೂ ಹಿರಿಯ ದಂಪತಿಗಳಿಗೆ ಸನ್ಮಾನ. ಮಾ.4ರಂದು ಬೆಳಗ್ಗೆ 8 ಗಂಟೆಗೆ ಕಾಲಭೈರವೇಶ್ವರ ಸ್ವಾಮಿಗೆ ಸುವರ್ಣ ಕವಚ ಅಲಂಕಾರ ಪೂಜೆ ಹಾಗೂ ಗಂಗಾಧರೇಶ್ವರ ಸ್ವಾಮಿಗೆ ರಜತ ನಾಗಾಭರಣ ಅಲಂಕಾರ, 10 ಗಂಟೆಗೆ ಒಕ್ಕಲಿಗರ ಸಂಘಗಳ ಪದಾಧಿಕಾರಿಗಳ ಸಮ್ಮಿಲನ ನಡೆಯಲಿದ್ದು, ಸಂಜೆ ಶ್ರೀನಿರ್ಮಲಾನಂದನಾಥ ಸ್ವಾಮೀಜಿಯವರ ಪಲ್ಲಕ್ಕಿ ಉತ್ಸವ ನಡೆಯಲಿದೆ. ಮಾ.5ರಂದು ಬೆಳಗ್ಗೆ ಕೃಷಿ, ಕೈಗಾರಿಕಾ, ವಸ್ತು ಪ್ರದರ್ಶನ ನಡೆಯಲಿದ್ದು, ರೈತರು, ಕೈಗಾರಿಕೋದ್ಯಮಗಳು ಹಾಗೂ ಕೃಷಿ ತಜ್ಞರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲಿದ್ದಾರೆ. ಸಂಜೆ 6 ಗಂಟೆಗೆ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಅವರಿಂದ ಜ್ವಾಲಾಪೀಠಾರೋಹಣ ಹಾಗೂ ಸಿದ್ದಸಿಂಹಾಸನ ಪೂಜೆ ನೆರವೇರಿಸಿದ ನಂತರ ರಾತ್ರಿ 8 ಗಂಟೆಗೆ ಚಂದ್ರ ಮಂಡಲೋತ್ಸವ ಪೂಜೆ, ಮಾ.6ರಂದು ಸ್ವಾಮೀಜಿಯವರ ಸಾನಿಧ್ಯದಲ್ಲಿ ಸರ್ವಧರ್ಮ ಸಮ್ಮೇಳನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ. ಮಾ.7ರಂದು ಗಂಗಾಧರೇಶ್ವರಸ್ವಾಮಿ ಮಹಾರಥೋತ್ಸವ ಹಾಗೂ ಶ್ರೀನಿರ್ಮಲಾನಂದ ನಾಥ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವ ಸಂಜೆ 6 ಗಂಟೆಗೆ ವಿವಿಧ ಗ್ರಾಮ ದೇವತೆಗಳ ಉತ್ಸವ ಮೂರ್ತಿಗಳೊಂದಿಗೆ ಗಿರಿಪ್ರದಕ್ಷಿಣೆ ಕಾರ್ಯಕ್ರಮ ನಡೆಯಲಿದೆ. ಮಾ.8ರಂದು ಬೆಳಗ್ಗೆ ಬಿಂದು ಸರೋವರದಲ್ಲಿ ಗಂಗಾ ಪೂಜೆ ಹಾಗೂ ಸಭಾ ಕಾರ್ಯಕ್ರಮದ ಮೂಲಕ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಮಾ.24, 25ರಂದು 'ಬೆಂಗಳೂರು ಹಬ್ಬ'

ಬೆಂಗಳೂರು, ಫೆ.27(ಕೆಎಂಶಿ)– ವಿಧಾನಸಭೆ ಚುನಾವಣೆ ಹೊಸ್ತಿಲಲ್ಲಿ ರಾಜಧಾನಿ ಬೆಂಗಳೂರಿನಲ್ಲಿ ಬೃಹತ್ ಸಾಂಸ್ಕೃತಿಕ ಉತ್ಸವ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಬ್ರಾಂಡ್ ಬೆಂಗಳೂರು ಅಡಿ ನಗರದ ದಶ ದಿಕ್ಕುಗಳಲ್ಲಿ ಸಂಭ್ರಮ ಜತೆಗೆ ಹಬ್ಬದ ವಾತಾವರಣ ನಿರ್ಮಾಣ ಮಾಡಿ ಸಾಂಸ್ಕೃತಿಕ ಕಾರ್ಯಕ್ರಮ, ಜಾನಪದ ಕ್ರೀಡೆ, ಎತ್ತಿನ ಬಂಡಿ, ಸೈಕಲ್, ದ್ವಿಚಕ್ರ ವಾಹನ ಜಾಥಾ, ಕಾರು ಗಳ ರ್‍ಯಾಲಿ ಆಯೋಜಿಸಲು ತೀರ್ಮಾನಿಸಲಾಗಿದೆ.

ಕಂದಾಯ ಸಚಿವ ಅಶೋಕ್ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ಈ ಕುರಿತು ಸೋಮವಾರ ಉನ್ನತ ಮಟ್ಟದ ಸಭೆ ನಡೆಯಿತು. ಸಭೆಯ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ಸಚಿವ ಗೋಪಾಲಯ್ಯ, ಮಾರ್ಚ್ 24 ಮತ್ತು 25ರಂದು ಬೆಂಗಳೂರು ಹಬ್ಬ ನಡೆಯಲಿದ್ದು ಮೊದಲ ದಿನ ವಿಧಾನಸೌಧ ಮುಂಭಾಗದ ಮೆಟ್ಟಿಲುಗಳ ಮೇಲೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು. ಕಬ್ಬನ್ ಪಾರ್ಕ್, ಲಾಲ್‌ಬಾಗ್ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಕಾರ್ಯಕ್ರಮ ನಡೆಯಲಿದೆ. ನಗರದ ಎಲ್ಲ ಪಾರ್ಕ್, ಕೆರೆ, ಐತಿಹಾಸಿಕ ಕಟ್ಟಡಗಳಿಗೆ ದೀಪಾ ಲಂಕಾರ ಮಾಡಲಾಗುವುದು. ಇದೊಂದು ರೀತಿ ರಾಜಧಾನಿಯ ಮನೆ ಮನೆ ಹಬ್ಬವಾಗಲಿದೆ ಎಂದು ಹೇಳಿದರು.

ಹೆಚ್‌ಎಎಲ್ ನಿರ್ಮಿತ 228 ವಿಮಾನದ ನವೀಕರಣಕ್ಕೆ ಡಿಜಿಸಿಎ ಒಪ್ಪಿಗೆ

ಬೆಂಗಳೂರು, ಫೆ.27– ಮಹತ್ವದ ಬೆಳವಣಿಗೆಯಲ್ಲಿ 'ಮೇಡ್ ಇನ್ ಇಂಡಿಯಾ' ಯೋಜನೆಯಡಿಯಲ್ಲಿ 'ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್'' ನಿರ್ಮಿತ ವಿಮಾನದ ನವೀಕರಣಕ್ಕೆ ನಾಗರಿಕ ವಿಮಾನಯಾನ ನಿರ್ದೇಶನಾಲಯ ಅನುಮೋದನೆ ನೀಡಿದೆ.

ಹೆಚ್‌ಎಎಲ್‌ನಿಂದ 'ಹಿಂದೂಸ್ತಾನ್ 228–201LW' ವಿಮಾನದ ಹೊಸ ರೂಪಾಂತರವನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯ ಅನುಮೋ ದಿಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹೆಚ್‌ಎ ಎಲ್ ಮೂಲಗಳ ಪ್ರಕಾರ ಹಿಂದೂಸ್ತಾನ್ 228–201LW ಆವೃತ್ತಿಯು 19 ಪ್ರಯಾಣಿಕರ ಸಾಮರ್ಥ್ಯದ ವಿಮಾನವು 5,695 ಕೆಜಿ ಗರಿಷ್ಠ ಟೇಕ್– ಆಫ್ ತೂಕವನ್ನು ಹೊಂದಿದ್ದು, ಈ ಮಾರ್ಪಾಡಿನೊಂದಿಗೆ, ವಿಮಾನವು ಉಪ–5,700 ಕೆಜಿ ವಿಮಾನ ವಿಭಾಗಕ್ಕೆ ಸೇರುತ್ತದೆ ಎಂದು ಬೆಂಗಳೂರು ಪ್ರಧಾನ ಕಚೇರಿಯ ಹೆಚ್‌ಎಎಲ್ ಹೇಳಿಕೆಯಲ್ಲಿ ತಿಳಿಸಿದೆ.

"ಈ ರೂಪಾಂತರವು ನಿರ್ವಾಹಕರಿಗೆ ಕಡಿಮೆ ಪೈಲಟ್ ಅರ್ಹತೆಯ ಅಗತ್ಯತೆಗಳಂತಹ ಹಲವಾರು ಕಾರ್ಯಾಚರಣೆಯ ಪ್ರಯೋಜನಗಳನ್ನು ನೀಡುತ್ತದೆ, ವಾಣಿಜ್ಯ ಪೈಲಟ್ ಪರವಾನಗಿ ಹೊಂದಿರುವ ಪೈಲಟ್‌ಗಳಿಗೆ ವಿಮಾನವನ್ನು ಹಾರಿಸಲು ಅನುವು ಮಾಡಿಕೊಡುತ್ತದೆ ಮತ್ತು ವಿಮಾನಕ್ಕಾಗಿ ಪೈಲಟ್ ಪೂಲ್ ಲಭ್ಯತೆ ಮತ್ತು ಕಡಿಮೆ ಕಾರ್ಯಾಚರಣೆಯ ವೆಚ್ಚವನ್ನು ಹೆಚ್ಚಿಸುತ್ತದೆ. ಅಂತೆಯೇ ಹೆಚ್ಚುವರಿಯಾಗಿ, ಹೊಸ ಆವೃತ್ತಿಯು ವಿಮಾನ ನಿರ್ವಹಣಾ ಎಂಜಿನಿಯರ್‌ಗಳು ಸೇರಿದಂತೆ ವಿಮಾನ ಮತ್ತು ನೆಲದ ಸಿಬ್ಬಂದಿಗೆ ತರಬೇತಿಯ ಅವಶ್ಯಕತೆ ಗಳನ್ನು ಕಡಿಮೆ ಮಾಡುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಜನ್ಮದಿನದ ಅಂಗವಾಗಿ ಶಿವಮೊಗ್ಗದ ಅವರ ನಿವಾಸದಲ್ಲಿ ವರುಣಾ ಕ್ಷೇತ್ರದ ಮುಖಂಡ ಹಾಗೂ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ರೇಷ್ಮೆ ಹಾರ ಹಾಕಿ, ಶಾಲು ಹೊದಿಸಿ ಬೆಳ್ಳಿ ಗದೆ ನೀಡಿ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು. ಚಿತ್ರದಲ್ಲಿ ಮೈಮುಲ್ ನಿರ್ದೇಶಕ ಎಸ್.ಸಿ. ಅಶೋಕ್, ಮುಖಂಡರಾದ ಶಂಕರ್‌ರಾವ್, ಹೇಮಂತ್ ಇತರರಿದ್ದಾರೆ.

ಒಂದನೇ ಪುಟದಿಂದ

ಹಾಸ್ಯಾಸ್ಪದ ಎನ್ನುವಂತಾಗಿದೆ

ಮೂಗು ತೂರಿಸುವುದು ಸೂಕ್ತವಲ್ಲ. ಸಮಸ್ಯೆಗಳಿದ್ದರೆ ಸೂಕ್ತ ರೀತಿಯಲ್ಲಿ ಹೋರಾಟ ಮಾಡಬೇಕು ಅಥವಾ ಸಿಂಡಿಕೇಟ್ ಸದಸ್ಯರು, ಜನಪ್ರತಿನಿಧಿಗಳ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬೇಕು. ಕುಲಪತಿಗಳು, ಕುಲಸಚಿವರು ಕೆಲಸ ಮಾಡಲು ಬಿಡದೇ ಹೋರಾಟದ ಹೆಸರಿನಲ್ಲಿ ತೊಂದರೆ ನೀಡಬಾರದು. ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಸಂಶೋಧನಾ ಉದ್ದೇಶ ಸಾರ್ಥಕಗೊಳಿಸುವ ನಿಟ್ಟಿನಲ್ಲಿ ತೊಡಗಿಸಿಕೊಳ್ಳಬೇಕು ಸಲಹೆ ನೀಡಿದರು. ಜಗತ್ತಿನ ಯಾವುದೇ ರಾಷ್ಟ್ರವಾದರೂ ಬಲಿಷ್ಠವಾಗಿ ಬೆಳೆಯಲು ಯುವ ಜನರು, ವಿದ್ಯಾರ್ಥಿಗಳ ಪಾತ್ರ ಮುಖ್ಯ. ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು ಪಾಲಿಸಿದರೆ ಮಾತ್ರ ಗುರಿ ಮುಟ್ಟಲು ಸಾಧ್ಯ. 'ಶಿಸ್ತು ಇಲ್ಲದ ವಿದ್ಯಾರ್ಥಿಗಳು ದುಂಬಿಗಳಿದಂತೆ. ಯಾರಿಗೆ ಬೇಕಾದರೂ ಕಚ್ಚುತ್ತವೆ. ಹಾಗಾಗಿ ಶಿಸ್ತಿನ ಸಿಪಾಯಿಗಳಾಗಬೇಕು' ಎಂದು ಡಾ.ಅಂಬೇಡ್ಕರ್ ಕರೆ ನೀಡಿದ್ದಾರೆ. ಹಾಗಾಗಿ ವಿದ್ಯಾರ್ಥಿಗಳು ಅತ್ಯಂತ ಶಿಸ್ತು–ಆಸಕ್ತಿಯಿಂದ ಅಧ್ಯಯನ ನಡೆಸಬೇಕು ಎಂದು ತಿಳಿ ಹೇಳಿದರು.

ಇದಕ್ಕೂ ಮುನ್ನ ವಯೋ ನಿವೃತ್ತಿ ಹೊಂದಲಿರುವ ಹಿನ್ನೆಲೆಯಲ್ಲಿ ಮಹಾರಾಜ ಕಾಲೇಜು ಪ್ರಾಂಶುಪಾಲರಾದ ಪ್ರೊ.ಬಿ.ಎನ್.ಯಶೋಧ ಮತ್ತು ಆಡಳಿತಾಧಿಕಾರಿ ಡಾ.ಜಿ.ಹೆಚ್.ನಾಗರಾಜ್ ಅವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು. ತಮ್ಮಿಬ್ಬರ ಸುದೀರ್ಘ ಸೇವೆಗಾಗಿ ನಿವೃತ್ತಿ ಸಮಯದಲ್ಲಿ ತಮಗೆ ಆತ್ಮೀಯ ಬೀಳ್ಕೊಡುಗೆ ನೀಡಲಾಗಿದೆ. ಮುಂದೆಯೂ ಸಮಾಜಕ್ಕೆ ನಿಮ್ಮಿಂದ ಒಳ್ಳೆಯ ಸೇವೆ ದೊರೆಯಲಿ ಎಂದು ಇದೇ ವೇಳೆ ಶ್ರೀನಿವಾಸ ಪ್ರಸಾದ್ ಹಾರೈಸಿದರು. ಮಾಜಿ ಮೇಯರ್ ಪುರುಷೋತ್ತಮ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ವಿವಿ ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿವೃತ್ತ ನಿರ್ದೇಶಕ ಪ್ರೊ.ಶಿವರಾಜಪ್ಪ, ವಿವಿ ಸಂಜೆ ಕಾಲೇಜು ಪ್ರಾಂಶುಪಾಲ ಪ್ರೊ.ಎ.ಎಸ್.ಶ್ರೀಧರ್, ಎನ್‌ಎಸ್‌ಎಸ್ ಅಧಿಕಾರಿ ಡಾ.ನಿಂಗರಾಜು, ಯುವರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಹೆಚ್.ಸಿ.ದೇವರಾಜೇಗೌಡ, ವೇದಿಕೆ ಅಧ್ಯಕ್ಷ ಆರ್.ವಾಸುದೇವ್ ಮತ್ತಿತರರು ಹಾಜರಿದ್ದರು.

ಖಾಸಗಿ ಕಂಪನಿ ಉದ್ಯೋಗಿ ನಾಪತ್ತೆ

ಫೆ.26ರಂದು ಕೃಷ್ಣರಾಜ ಮತ್ತು ನರಸಿಂಹರಾಜ ಕ್ಷೇತ್ರಗಳ ಸಮೀಕ್ಷೆ ನಡೆಸುವ ಸಲುವಾಗಿ ಈ ತಂಡ ಅಂದು ಬೆಳಗ್ಗೆ 7.30ಕ್ಕೆ ಲಾಡ್ಜ್‌ನಿಂದ ಹೊರಟು 8.20ರಲ್ಲಿ ಪದ್ಮಾ ಟಾಕೀಸ್ ಬಳಿ ಬಂದ ನಂತರ ಎಲ್ಲರೂ ಬೇರೆ ಬೇರೆ ಕಡೆಗೆ ಸಮೀಕ್ಷೆಗಾಗಿ ಹೊರಟಿದ್ದಾರೆ. ಬೆಳಗ್ಗೆ 8.40ರಲ್ಲಿ ತಂಡದ ಸದಸ್ಯ ಆನಂದಕುಮಾರ್ ಎಂಬುವರು ಶಿವರಾಜ್‌ಗೆ ಕರೆ ಮಾಡಿದಾಗ ಅವರ ಮೊಬೈಲ್ ಸ್ವಿಚ್ ಆಫ್ ಆಗಿದೆ. ಮಧ್ಯಾಹ್ನ 12.30ರವರೆಗೂ ಶಿವರಾಜ್ ಪತ್ತೆಯಾಗದ ಕಾರಣ ಆನಂದಕುಮಾರ್ ಕೆಆರ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದಾರೆ. ನಿಗೂಢವಾಗಿ ನಾಪತ್ತೆಯಾಗಿರುವ ಶಿವರಾಜ್ ತಾನು ದಾವಣಗೆರೆ ಜಿಲ್ಲೆಯವನು ಎಂದು ತಂಡದ ಸದಸ್ಯರೊಂದಿಗೆ ಹೇಳಿಕೊಂಡಿದ್ದರು ಎಂದು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಆನಂದಕುಮಾರ್, ಆದರೆ, ಶಿವರಾಜ್ ಅವರ ಆಧಾರ್ ಕಾರ್ಡ್‌ನಲ್ಲಿ ಹರಿಹರದ ವಿಳಾಸವಿದೆಯಂತೆ ಎಂದು ತಿಳಿಸಿದರು. ನಾಪತ್ತೆಯಾಗಿರುವ ಶಿವರಾಜ್ ಎಡಗೈಯಲ್ಲಿ ಸಿಂಹದ ಹಚ್ಚೆ ಗುರುತು, ಬಲಗೈಯಲ್ಲಿ ತಾಯಿ–ಮಗುವಿನ ಹಚ್ಚೆ ಗುರುತು ಇದೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದ್ದು, ಈತನ ಬಗ್ಗೆ ಮಾಹಿತಿ ಇರುವವರು ಕೆ.ಆರ್. ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ: 0821–2418319 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 2418339 ಅನ್ನು ಸಂಪರ್ಕಿಸುವಂತೆ ಕೋರಿದೆ.

ಕ್ಯಾತಮಾರನಹಳ್ಳಿ 'ಹುಲಿಯಮ್ಮ' ಜಾತ್ರಾ ಮಹೋತ್ಸವಕ್ಕೆ ಚಾಲನೆ



ಮೈಸೂರು, ಫೆ.27(ಎಂಕೆ)– ಮೈಸೂರು ನಗರದ ಕ್ಯಾತಮಾರನಹಳ್ಳಿ ಗ್ರಾಮ ದೇವತೆ 'ಹುಲಿಯಮ್ಮ' ಜಾತ್ರಾ ಮಹೋತ್ಸವಕ್ಕೆ ಸಂಭ್ರಮದ ಚಾಲನೆ ದೊರೆಯಿತು.

2 ವರ್ಷಗಳಿಗೊಮ್ಮೆ 10 ದಿನಗಳ ಕಾಲ ವೈಭವಯುತವಾಗಿ ನಡೆಯುವ ಹುಲಿಯಮ್ಮ ಜಾತ್ರಾ ಮಹೋತ್ಸವದ ಆಕರ್ಷಣೆಗಾಗಿ ದೇವಸ್ಥಾನದ ಎದುರು ನಿಲ್ಲಿಸುವ ಸುಮಾರು 50 ಅಡಿ ಎತ್ತರದ ಅಡಿಕೆ ಮರ ಕಡಿದು ಹೆಗಲ ಮೇಲೆ ಹೊತ್ತು ಸಾಗಿಸುವ ಮೂಲಕ ಐತಿಹಾಸಿಕ ಹುಲಿಯಮ್ಮ ಜಾತ್ರೆ ಸಂಭ್ರಮಕ್ಕೆ ಚಾಲನೆ ನೀಡಲಾಯಿತು.

ಚಾಮುಂಡಿಪುರಂ ಸಮೀಪದ ಎಲೆತೋಟದಲ್ಲಿ ಜಮಾವಣೆಗೊಂಡ ಸಾವಿರಾರು ಭಕ್ತರು, ಅಡಿಕೆ ಮರಕ್ಕೆ ಪೂಜೆ ಸಲ್ಲಿಸಿ ಕಡಿದು ಕ್ಯಾತಮಾರನ ಹಳ್ಳಿಯವರೆಗೆ ಹೊತ್ತುಕೊಂಡು ಮೆರವಣಿಗೆ ನಡೆಸಿದರು. ಎಲೆತೋಟ (ಮಧುವನಕ್ಕೆ)ದಿಂದ ಅಗ್ರಹಾರದ ರಾಮಾನುಜ ರಸ್ತೆ ಮೂಲಕ ಹಾರ್ಡಿಂಜ್ ವೃತ್ತ, ಎಸ್‌ಪಿ ಕಚೇರಿ ವೃತ್ತದ ಮಾರ್ಗವಾಗಿ ಗಾಯತ್ರಿಪುರಂನಿಂದ ಕ್ಯಾತಮಾರನಹಳ್ಳಿಗೆ ಸಾಗಿಸಲಾಯಿತು. ಜಾತ್ರೆಯ ಮೊದಲ ದಿನದ ಸಂಭ್ರಮಕ್ಕೆ ಸಾಕ್ಷಿಯಾದ ಸಾವಿರಾರು ಮಂದಿ ಭಕ್ತರು ಮಾರ್ಗ ದುದ್ದಕ್ಕೂ ಕುಣಿದು ಕುಪ್ಪಳಿಸಿದರಲ್ಲದೆ ಗ್ರಾಮ ದೇವತೆ ಹುಲಿಯಮ್ಮನಿಗೆ ಜೈಕಾರ ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿದರು. ದೇವ ಸ್ಥಾನದ ಬಳಿ ಅಡಿಕೆ ಮರಕ್ಕೆ ವಿಶೇಷ ಪೂಜೆ ಸಲ್ಲಿಸಿದರು.

ತಬ್ಬಿಟ್ಟು ಆರತಿ, ಪೂಜೆ, ಹರಕೆ ಸಲ್ಲಿಕೆ: 10 ದಿನಗಳ ಹುಲಿಯಮ್ಮ ಜಾತ್ರಾ ಮಹೋತ್ಸವದಲ್ಲಿ ಗ್ರಾಮ ದೇವಿಗೆ ತಬ್ಬಿಟ್ಟು ಆರತಿ ಬೆಳಗಿ ಪೂಜೆ ಸಲ್ಲಿಸಿ, ಹರಕೆ ಸಲ್ಲಿಸಲಾಗುವುದು. ನಾಳೆ(ಫೆ.28) ತಬ್ಬಿಟ್ಟು ಆರತಿ ಪೂಜೆ ಸಲ್ಲಿಸಲಾಗುವುದು. ಪುಟ್ಟ ಮಕ್ಕಳಿಂದ ದೀಪದ ಮೆರವಣಿಗೆ, ಅಡಿಕೆ ಮರ ನೆಟ್ಟು ಪೂಜೆ ಸಲ್ಲಿಸುವುದು, ವಿವಿಧ ವೇಷಭೂಷಣ ತೊಟ್ಟು ಕುಣಿಯುವುದು, ಬಾಳೆಕಂಬದ ಅಲಂಕಾರ, ಬಾಯಿಗೆ ಬೀಗ ಹಾಕಿ ಹರಕೆ ಸಲ್ಲಿಸುವುದು ಸೇರಿದಂತೆ ಹತ್ತು–ಹಲವು ವೈಶಿಷ್ಟತೆಯುಳ್ಳ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಸಿಯುಕೆ ಆವರಣದಲ್ಲಿ ಬೆಂಕಿ ಅವಘಡ: ಮರ, ಪ್ರಾಣಿ–ಪಕ್ಷಿಗಳು ಸುಟ್ಟು ಭಸ್ಮ

ಕಲಬುರಗಿ, ಫೆ.27– ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಆವರಣದಲ್ಲಿ ಭಾರೀ ಬೆಂಕಿ ಅವಘಡ ಸಂಭವಿಸಿದ್ದು, ಆವರಣದಲ್ಲಿದ್ದ ಅಪಾರ ಸಸ್ಯ ಸಂಪತ್ತು, ಅಪರೂಪದ ಗಿಡ ಮರಗಳು, ಪ್ರಾಣಿ–ಪಕ್ಷಿಗಳು ಸುಟ್ಟು ಭಸ್ಮವಾಗಿವೆ.


ಕಲಬುರಗಿ ನಗರ ಹೊರವಲಯದ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಆವರಣಲ್ಲಿ ಭಾರಿ ಬೆಂಕಿ ಕಾಣಿಸಿಕೊಂಡಿದೆ. ಆವರಣದಲ್ಲಿ ಸಸ್ಯ ಸಂಪತ್ತು, ಗಿಡ ಮರಗಳು ನಾಶವಾಗಿ ಪ್ರಾಣಿ–ಪಕ್ಷಿಗಳು ಸುಟ್ಟು ಭಸ್ಮವಾಗಿವೆ.

ಕಿಡಿಗೇಡಿಗಳ ಕೃತ್ಯ: ಇನ್ನು ವಿಶ್ವವಿದ್ಯಾಲಯ ಆವರಣದ ಎಸ್‌ಟಿಪಿ, ಪಿಬಿಸಿ ವಸತಿ ಮತ್ತು ಕೆರೆ ಸಮೀಪದ ಒಣ ಹುಲ್ಲಿಗೆ ಸೋಮವಾರ ಕೆಲ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ. ಉದ್ದೇಶ ಪೂರ್ವಕವಾಗಿ ಮತ್ತು ವ್ಯವಸ್ಥಿತವಾಗಿ ಬೆಂಕಿ ಹಚ್ಚಲಾಗುತ್ತಿದೆ. ಕಳೆದ ಮೂರು ದಿನಗಳಿಂದ ಇಂತಹ ಕೃತ್ಯ ನಡೆಯುತ್ತಿವೆ ಎಂದು ಸಿಯುಕೆ ಬಸವ ಪೀಠದ ಸಂಯೋಜಕ ಡಾ. ಗಣಪತಿ ಬಿ ಸಿನ್ನೂರ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಈ ವರ್ಷ ಜೆಸಿಬಿ, ಕೂಲಿ ಕಾರ್ಮಿಕರನ್ನು ಬಳಸಿಕೊಂಡು ಒಣಹುಲ್ಲು ಕತ್ತರಿಸಲಾಗುತ್ತಿದೆ. ಆದರೆ, ಕೆಲವು ಕಿಡಿಗೇಡಿಗಳು ಮೂರು ದಿನಗಳಿಂದ ಬೆಂಕಿ ಹಚ್ಚುತ್ತಿದ್ದು, ನೀರಿನ ಟ್ಯಾಂಕರ್ ತರಿಸಿ ಬೆಂಕಿ ನಂದಿಸಲಾಗುತ್ತಿದೆ. ಸೋಮವಾರ ಏಕಕಾಲದಲ್ಲಿ ಮೂರು ಕಡೆ ಬೆಂಕಿಹಚ್ಚಿದರಿಂದ ಬೆಂಕಿಯ ಕೆನ್ನಾಲಿಗೆ 4–5 ಅಡಿ ಎತ್ತರ ಚಾಚಿಕೊಂಡಿದೆ. ಇದರಿಂದ ಸೋಲಾರ್ ಪ್ಲಾಂಟ್, ಕಾಂಪೌಂಡ್, ಎಸ್‌ಟಿಪಿ, ಪಿಬಿಸಿ ವಸತಿ, ಕೆರೆ ಸಮೀಪದ ಮರಗಳು ಸುಟ್ಟಿವೆ. ಪ್ರಾಣಿ–ಪಕ್ಷಿಗಳು ಸುಟ್ಟು ಭಸ್ಮವಾಗಿರುವ ಸಾಧ್ಯತೆ ಇದೆ. ತಕ್ಷಣವೇ ಪೊಲೀಸ್ ಮತ್ತು ಅರಣ್ಯ ಇಲಾಖೆಯ ಗಮನಕ್ಕೆ ತರಲಾಗುವುದು ಎಂದರು.

ಪ್ರಾಣಿ–ಪಕ್ಷಿಗಳು ಸುಟ್ಟು ಭಸ್ಮ: ಅಂತೆಯೇ, 'ಆವರಣದಲ್ಲಿ ಮೊಳಕಾಲುದ್ದ ಬೆಳೆದಿರುವ ಹುಲ್ಲಿನ ನಡುವೆ ಹುಳು ಹುಪ್ಪಟಗಳು, ಕಪ್ಪೆಗಳು, ಹಾವುಗಳು, ಓತಿಕೇತ, ಮಿಡತೆಗಳು, ಚಿಟ್ಟೆಗಳು, ನೆಲದೊಳಗೆ ಇರುವೆಗಳು, ಗೆದ್ದಲು ಗೂಡು ಕಟ್ಟಿವೆ. ಇವೆಲ್ಲವೂ ಬೆಂಕಿಗೆ ಆಹುತಿಯಾಗಿವೆ. ಕ್ಯಾಂಪಸ್‌ನಲ್ಲಿ ಪದೇ ಪದೇ ಬೆಂಕಿ ಕಾಣಿಸಿಕೊಂಡು, ಅದರ ಹೊಗೆ ಸುತ್ತಲಿನ ವಸತಿ ಪ್ರದೇಶಗಳಲ್ಲಿ ಹರಡುತ್ತಿದೆ. ಬೆಂಕಿ ನಿಯಂತ್ರಣಕ್ಕೆ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಮುಂದಾಗುತ್ತಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.







ಇತ್ತೀಚೆಗೆ ಹುಟ್ಟುಹಬ್ಬ ಆಚರಿಸಿಕೊಂಡ ಯುವ ಮುಖಂಡ ಹಾಗೂ ಹೆಸರಾಂತ ಉದ್ಯಮಿ ಸ್ವೀಟ್ ಮಹೇಶ್ ಅವರನ್ನು ದಟ್ಟಗಳ್ಳಿ ಬಿಜೆಪಿ ಮುಖಂಡ ಕಿರಣ್ ಮಾದೇಗೌಡ ಹಾಗೂ ಸ್ನೇಹಿತರು, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಮಹದೇಶ್, ನಗರ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಅವರು ಅಭಿನಂದಿಸಿ, ಶುಭಾಶಯ ಕೋರಿದರು.

 ಮೈಸೂರು ಮಿತ್ರ ಮಂಗಳವಾರ 28 ಫೆಬ್ರವರಿ 2023

ರಾಜ್ಯಮಟ್ಟದ ಕ್ಯಾಟರ್ ಬಿಲ್ ಕ್ರೀಡೋತ್ಸವಕ್ಕೆ ಚಾಲನೆ



ನಾಪೋಕ್ಲು, ಫೆ.27– ಗ್ರಾಮೀಣ ಭಾಗದಲ್ಲಿ ಕ್ಯಾಟರ್ ಬಿಲ್ ಸ್ಪರ್ಧೆಯನ್ನು ಆಯೋಜಿಸುವ ಮೂಲಕ ಗ್ರಾಮೀಣ ಕ್ರೀಡೆಗೆ ಮತ್ತೆ ಜೀವ ತುಂಬುವ ಕೆಲಸವನ್ನು ಸ್ಪೆಪ್ಸ್ ಸಂಸ್ಥೆ ಮಾಡಿದೆ ಎಂದು ಶಾಸಕ ಕೆ.ಜಿ. ಬೋಪಯ್ಯ ತಿಳಿಸಿದ್ದಾರೆ.

ಸಮೀಪದ ಕಕ್ಕಬ್ಬೆಯ ಪ್ರೌಢಶಾಲಾ ಮೈದಾನದಲ್ಲಿ ಸ್ಪೆಪ್ಸ್ ಸಂಸ್ಥೆ ವತಿಯಿಂದ ಆಯೋಜಿಸಲಾಗಿದ್ದ ರಾಜ್ಯಮಟ್ಟದ ಕ್ಯಾಟರ್ ಬಿಲ್ ಕ್ರೀಡೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಕೊಡಗು ಕ್ರೀಡೆಯ ತವರೂರು. ಕ್ರೀಡೆ ಇಲ್ಲಿನ ಜನರ ಸಂಸ್ಕೃತಿಯಾಗಿದ್ದು, ಗ್ರಾಮೀಣ ಕ್ರೀಡೆಯೊಂದಕ್ಕೆ ಹೊಸತನ ನೀಡುವ ಕೆಲಸವನ್ನು ಸ್ಪೆಪ್ಸ್ ಸಂಸ್ಥೆ ಮಾಡಿದೆ. ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ರಾಜ್ಯದ ನಾನಾ ಭಾಗಗಳಿಂದ ಕ್ರೀಡಾಪಟುಗಳು ಆಗಮಿಸಿರುವುದು ಸಂತಸದ ವಿಷಯ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ಮಾತನಾಡಿ, ಕ್ಯಾಟರ್ ಬಿಲ್ ಸ್ಪರ್ಧೆಯ ಮೂಲಕ ಉತ್ತಮ ಗುರಿ ಸಾಧಿಸಲು ಸಾಧ್ಯ. ಕೊಡಗಿನಲ್ಲಿ ಹಾಕಿ ಉತ್ಸವ ಆರಂಭಗೊಂಡ ಬಳಿಕ ವಿವಿಧ ಗ್ರಾಮೀಣ ಕ್ರೀಡೆಗಳು ಕ್ರೀಡಾಸಕ್ತರಿಗೆ ರಸದೌತಣ ನೀಡುತ್ತಿವೆ. ಕ್ರೀಡಾ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಸೌಹಾರ್ದತೆಯನ್ನು ಮೆರೆಯಬೇಕು ಎಂದರು.

ಶ್ರೀ ರಾಮ ಟ್ರಸ್ಟ್ ವಿದ್ಯಾಸಂಸ್ಥೆಯ ಪ್ರಾಂಶುಪಾಲರಾದ ಕಲ್ಯಾಟಂಡ ಶಾರದ ಅಪ್ಪಣ್ಣ ಮಾತನಾಡಿ, ಗುರಿ ಇದ್ದಾಗ ಯಶಸ್ಸು ಪಡೆಯಲು ಸಾಧ್ಯ. ಗ್ರಾಮೀಣ ಭಾಗಗಳಲ್ಲಿ ವಿವಿಧ ಕ್ರೀಡೆಗಳು ಜನಪ್ರಿಯವಾಗುತ್ತಿವೆ. ಗ್ರಾಮೀಣ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವುದರಿಂದ ಮಾನಸಿಕ ಸಾಮರ್ಥ್ಯ ಹಾಗೂ ಧೈರ್ಯ ವೃದ್ಧಿಸುತ್ತದೆ ಎಂದರು.

ಕಿಡ್ನಿ ದಾನಿ ಕಲಿಯಂಡ ಮಿಲನ ಮಂದಣ್ಣ ಸನ್ಮಾನ ಸ್ವೀಕರಿಸಿದ ಬಳಿಕ ಮಾತನಾಡಿ, ದೇಹದ ಅಂಗಗಳನ್ನು ದಾನ ಮಾಡುವುದರಿಂದ ಆರೋಗ್ಯದ ಮೇಲೆ ಯಾವುದೇ ದುಷ್ಪರಿಣಾಮ ಆಗುವುದಿಲ್ಲ. ಯುವಜನರು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. ದಾನ ಮಾಡುವುದರಿಂದ ಇತರರಿಗೂ ಸ್ಫೂರ್ತಿ ನೀಡಿದಂತಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸ್ಪೆಪ್ಸ್ ಸಂಸ್ಥೆಯ ಆಯೋಜಕ ಬೊಳಿಯಾಡಿರ ಸಂತು ಸುಬ್ರಮಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಕ್ಕಬ್ಬೆ ವಿಎಸ್‌ಎಸ್‌ಎನ್ ಅಧ್ಯಕ್ಷ ಕಲ್ಯಾಟಂಡ ರಘು ತಮ್ಮಯ್ಯ, ಮಡಿಕೇರಿ ಗ್ರಾಮಾಂತರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೋಡಿರ ಪ್ರಸನ್ನ, ರ್‍ಯಾಲಿ ಪಟು ಮಾಲೇಟಿರ ಜಗತ್ ನಂಜಪ್ಪ ಆರ್ ಎಂ ಸಿ ಮಾಜಿ ಅಧ್ಯಕ್ಷ ಶಿಮಹಾಳಿಯಂಡ ಅಂಬಿ ಕಾರ್ಯಪ್ಪ ಕಕ್ಕಬ್ಬೆ ಗ್ರಾಪಂ ಮಾಜಿ ಅಧ್ಯಕ್ಷ ಕಲಿಯಂಡ ಸುನಂದ, ಡಾಕ್ಟರ್ ಮಂಜಣ್ಣ, ಕಕ್ಕಬ್ಬೆ ಗ್ರಾಪಂ ಮಾಜಿ ಸದಸ್ಯ ಚಂಡಿರ ಜಗದೀಶ್, ಕುಂಜಿಲ ಪೈನರಿ ಜಮಾಯತ್ ಮಾಜಿ ಅಧ್ಯಕ್ಷ ಸೌಕತ್ ಅಲಿ, ಕಕ್ಕಬ್ಬೆ ವಿಎಸ್‌ಎಸ್ ಏನ್ ಉಪಾಧ್ಯಕ್ಷ ಬಡಕಡ ಸುರೇಶ್ ಬೆಳ್ಯಪ್ಪ ರಾಷ್ಟ್ರೀಯ ಕ್ರೀಡಾಪಟು ಕೋಟೆರ ಮುದ್ದು ಪಾಲ್ಗೊಂಡಿದ್ದರು.

ರಾಜ್ಯಮಟ್ಟದ ಮುಕ್ತ ಸ್ಪರ್ಧೆಯಲ್ಲಿ 18 ವರ್ಷದ ಒಳಗಿನ ಒಂದು ವಿಭಾಗ ಹಾಗೂ 18 ವರ್ಷ ಮೇಲ್ಪಟ್ಟವರ ಮತ್ತೊಂದು ವಿಭಾಗದಲ್ಲಿ ಸ್ಪರ್ಧೆ ನಡೆಯಿತು.

ಸೌಲಭ್ಯಗಳಿಲ್ಲದ ವಿ.ಪೇಟೆ ಸರ್ಕಾರಿ ಆಸ್ಪತ್ರೆ

ಸಾಮಾನ್ಯ ಸಭೆಯಲ್ಲಿ ಪುರಸಭಾ ಸದಸ್ಯರ ಆಕ್ರೋಶ



ವಿರಾಜಪೇಟೆ, ಫೆ.27– ವಿರಾಜಪೇಟೆ ಸರಕಾರಿ ಆಸ್ಪತ್ರೆ ಕಟ್ಟಡವನ್ನು ಕೋಟಿಗಟ್ಟಲೆ ಅನುದಾನದಲ್ಲಿ ಉತ್ತಮವಾಗಿ ನಿರ್ಮಿಸಲಾಗಿದ್ದರೂ ಸೌಲಭ್ಯಗಳಿಲ್ಲ. ರೋಗಿಗಳಿಗೆ ಪ್ರಥಮ ಚಿಕಿತ್ಸೆ ನೀಡಿ ಮಡಿಕೇರಿ ಆಸ್ಪತ್ರೆಗೆ ಕಳುಹಿಸುತ್ತಾರೆ ಎಂದು ಪುರಸಭೆ ಸದಸ್ಯರಾದ ಮಹ್ಮದ್ ರಾಫಿ ಮತ್ತು ಬಿ.ಡಿ ಸುನಿತಾ ಆರೋಪ ಮಾಡಿದರು.

ವಿರಾಜಪೇಟೆ ಪುರಸಭೆ ಅಧ್ಯಕ್ಷೆ ಸುಸ್ಮೀತಾ ಅವರ ಅಧ್ಯಕ್ಷತೆಯಲ್ಲಿ ಪುರಸಭೆ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಸದಸ್ಯ ಮಹ್ಮದ್ ರಾಫಿ ಅವರು, ವಿರಾಜಪೇಟೆ ಸರಕಾರಿ ಆಸ್ಪತ್ರೆಯಲ್ಲಿ ಶವಗಳನ್ನು ಇಡಲು ಫ್ರೀಜರ್ ಇಲ್ಲದೆ ಶವಾಗಾರದಲ್ಲಿ ಕೊಳೆತು ನಾರುವ ಸ್ಥಿತಿ ಬಂದಿದೆ. ಕೇವಲ 24 ಗಂಟೆಯಲ್ಲಿ ಫ್ರೀಜರ್ ತರಬಹುದು ಆದರೆ ಇಚ್ಚಾಶಕ್ತಿ ಇಲ್ಲ ಎಂದರು.

ಸದಸ್ಯ ಡಿ.ಪಿ.ರಾಜೇಶ್ ಮಾತನಾಡಿ, ಆಸ್ಪತ್ರೆಯಲ್ಲಿ ರೋಗಿಗಳ ಚೀಟಿಗೆ 10 ರೂ. ನಿಗದಿ ಮಾಡಿರುವುದು ನ್ಯಾಯವಲ್ಲ. ಬೆಳಗ್ಗೆ 10 ಗಂಟೆಯಾದರು ಯಾವ ವೈದ್ಯರೂ ಆಸ್ಪತ್ರೆಗೆ ಬಾರದೆ ರೋಗಿಗಳು ಕಾದು ಕುಳಿತುಕೊಳ್ಳುವಂತಾಗಿದೆ. ಅಲ್ಲಿ ಏನು ನಡೆಯುತ್ತಿದೆ ಎಂಬ ಮಾಹಿತಿ ಸುರಕ್ಷಾ ಸಮಿತಿ ಸದಸ್ಯರ ಗಮನಕ್ಕೂ ತಂದಿಲ್ಲ. ಸ್ಕ್ಯಾನಿಂಗ್ ಯಂತ್ರ ಮತ್ತು ಎಕ್ಸ್–ರೇ ಇದ್ದರೂ ಜನರು ಹೊರಗಿನಿಂದ ಪರೀಕ್ಷೆ ಮಾಡುವ ಸ್ಥಿತಿಬಂದಿದೆ. ಈ ಬಗ್ಗೆ ತನಿಖೆ ನಡೆಯಬೇಕೆಂದು ಹೇಳಿದರು. ಈ ಪ್ರಶ್ನೆಗಳಿಗೆ ಸಭೆಗೆ ಆಗಮಿಸಿದ್ದ ಡಾ. ಗಿರಿಧರ್ ಸಮರ್ಪಕ ಉತ್ತರ ನೀಡಲಾಗದೆ ಹೊರನಡೆದರು.

ಮುಂದುವರೆದು ಮಾತನಾಡಿದ ಅವರು, ವಿರಾಜಪೇಟೆಯಲ್ಲಿ ಟ್ರಾಫಿಕ್ ಸಮಸ್ಯೆ ಮಿತಿ ಮೀರಿದೆ. ಅಮ್ಮತ್ತಿ, ಸಿದ್ದಾಪುರ ಕಡೆಗೆ ಹೋಗುವ ಖಾಸಗಿ ಬಸ್‌ಗಳು ದೊಡ್ಡಟ್ಟಿ ಚೌಕಿಯ ಅಡ್ಡರಸ್ತೆಯಲ್ಲಿ ಜನಸಂದಣಿ ಇರುವ ಜಾಗದಲ್ಲಿ ನಿಲ್ಲುವುದರಿಂದ ಸಾರ್ವಜನಿಕರಿಗೆ ಮತ್ತು ಶಾಲಾ ವಿದ್ಯಾರ್ಥಿಗಳು ಓಡಾಡಲು ಸಮಸ್ಯೆಯಾಗಿದ್ದು, ಸ್ವಲ್ಪ ಮುಂದೆ ಹೋಗಿ ಬಸ್‌ಗಳು ನಿಂತರೆ ಅನುಕೂಲವಾಗುತ್ತದೆ ಎಂದರು.

ಸಭೆಯಲ್ಲಿದ್ದ ವೃತ್ತನಿರೀಕ್ಷಕ ಶಿವರುದ್ರ ಮಾತನಾಡಿ, ವಾಹನಗಳ ನಿಲುಗಡೆ ಮತ್ತು ಟ್ರಾಫಿಕ್ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಕೆಲವು ಅಂಗಡಿ ಮಳಿಗೆ ಮುಂದೆ ಫುಟ್‌ಪಾತ್‌ನಲ್ಲಿ ಅಂಗಡಿ ಸಾಮಗ್ರಿಗಳನ್ನು ಇಡುವುದರಿಂದ ಸಾರ್ವಜನಿಕರು ನಡೆದಾಡಲು ಸಮಸ್ಯೆಯಾಗುತ್ತಿದೆ. ಪುರಸಭೆ ಅಧಿಕಾರಿಗಳು ಮತ್ತು ಸದಸ್ಯರು ಪೊಲೀಸರೊಂದಿಗೆ ಕೈ ಜೋಡಿಸುವ ಮೂಲಕ ಸಹಕಾರ ನೀಡುವಂತಾಗಬೇಕು ಎಂದರು.

ನಗರದ ಸುತ್ತಮುತ್ತ ಹಾಗೂ ಶಾಲಾ–ಕಾಲೇಜು ಬಳಿಯಲ್ಲಿಯೇ ಗಾಂಜಾ ಮಾರಾಟ ಮಾಡುವವರ ಹಾವಳಿ ಹೆಚ್ಚಾಗುತ್ತಿದ್ದು, ಈ ಬಗ್ಗೆ ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳುವಂತಾಗಬೇಕು ಎಂದು ಸದಸ್ಯ ಸಿ.ಕೆ. ಪೃಥ್ವಿನಾಥ್ ಹೇಳಿದಾಗ, ವೃತ್ತ ನಿರೀಕ್ಷಕ ಶಿವರುದ್ರ, ಗಾಂಜಾ ವಿಚಾರದಲ್ಲಿ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಕಾರ್ಯಾಚರಣೆ ನಡೆಸಿ ಗಾಂಜಾ ಮಾರಾಟ ಮಾಡುವ ಅನೇಕರನ್ನು ಜೈಲಿಗೆ ಅಟ್ಟಲಾಗಿದೆ. ಆದರೆ ಕಾನೂನಿನಲ್ಲಿ ಒಂದು ಕೆಜಿಗಿಂತ ಕಡಿಮೆ ಗಾಂಜಾ ಸಿಕ್ಕಿದರೆ ಸುಲಭವಾಗಿ ಆರೋಪಿಗಳು ಜಾಮೀನಿನಲ್ಲಿ ಹೊರ ಬರುತ್ತಾರೆ. ಯಾರೇ ಆಗಲಿ ಕಾನೂನಿನಂತೆ ಆರೋಪಿಗಳನ್ನು ಬಂಧಿಸಿ, ನ್ಯಾಯಾಲಯಕ್ಕೆ ಒಪ್ಪಿಸುವುದು ನಮ್ಮ ಕೆಲಸ ಎಂದರು.

ಸಭೆಯಲ್ಲಿ ಮುಖ್ಯಾಧಿಕಾರಿ ಚಂದ್ರಕುಮಾರ್, ಉಪಾಧ್ಯಕ್ಷ ವಿನಾಂಕ್ ಕುಟ್ಟಪ್ಪ, ಸ್ಥಾಯಿ ಸಮಿತಿ ಅಧ್ಯಕ್ಷೆ ಯಶೋಧ, ಅಭಿಯಂತರ ಹೇಮಾಕುಮಾರ್ ಉಪಸ್ಥಿತರಿದ್ದರು. ಸದಸ್ಯರಾದ ಅಬ್ದುಲ್ ಜಲೀಲ್, ಅಗಸ್ಟ್ ಬೆನ್ನಿ, ಮಹಾದೇವ, ತಸ್ನಿಂ ಅಕ್ತರ್, ಸಚೀನ್ ಕುಟ್ಟಯ್ಯ ಮಾತನಾಡಿದರು.

ಮೈಸೂರು–ಬೆಂಗಳೂರು ದಶಪಥ ರಸ್ತೆಗೆ 'ಕಾವೇರಿ ಎಕ್ಸ್‌ಪ್ರೆಸ್ ಹೈವೇ' ಹೆಸರು ನಾಮಕರಣಕ್ಕೆ ಸಿಎಂಗೆ ಮನವಿ



ಮಡಿಕೇರಿ, ಫೆ.27– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇ ಉದ್ಘಾಟನೆಗೆ ಸಿದ್ಧವಾಗಿದ್ದು, ಈ ರಾಷ್ಟ್ರೀಯ ಹೆದ್ದಾರಿ 275ಗೆ 'ಕಾವೇರಿ ಎಕ್ಸ್‌ಪ್ರೆಸ್ ಹೈವೇ' ಎಂದು ಹೆಸರಿಡಲು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡುವಂತೆ ವಿರಾಜಪೇಟೆ ವಿಧಾನಸಭಾ ಕ್ಷೇತ್ರ ಶಾಸಕ ಕೆ.ಜಿ. ಬೋಪಯ್ಯ ಮನವಿ ಮಾಡಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವ ಶಾಸಕ ಕೆ.ಜಿ. ಬೋಪಯ್ಯ, ರಾಷ್ಟ್ರೀಯ ಹೆದ್ದಾರಿ 275 ಬೆಂಗಳೂರು, ಮೈಸೂರು, ಮಡಿಕೇರಿಗೆ ಸಂಪರ್ಕಿಸುವ ಪ್ರಮುಖ ಹೆದ್ದಾರಿಯಾಗಿದ್ದು, ಮಾರ್ಚ್ 11ರಂದು ಉದ್ಘಾಟನೆಯಾಗಲಿದೆ. ಕಾವೇರಿ ನದಿ ಕೊಡಗಿನಲ್ಲಿ ಹುಟ್ಟಿ ತಮಿಳುನಾಡು ಸೇರಿದಂತೆ ಮೈಸೂರು, ಬೆಂಗಳೂರು ಹಾಗೂ ರಾಜ್ಯದ ಇತರ ಭಾಗಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸುತ್ತದೆ.

ಮಾತ್ರವಲ್ಲದೆ ಕೊಡಗು ಸೇರಿದಂತೆ ಈ ಭಾಗದ ಎಲ್ಲಾ ಜನರಿಗೆ ಕಾವೇರಿ ನದಿ 'ಕಾವೇರಿ ಮಾತೆ' ಎಂದು ಪೂಜ್ಯ ಭಾವನೆ ಹೊಂದಿದ್ದಾರೆ. ಜನರ ಭಾವನೆಗಳನ್ನು ಗುರುತಿಸಲು ಹಾಗೂ ಕನ್ನಡ ನಾಡಿಗೆ ಅನ್ನದಾತೆಯಾಗಿರುವ ಕೊಡಗಿನ ಕಾವೇರಿ ಮಾತೆಯ ಹೆಸರನ್ನು ಶಾಶ್ವತವಾಗಿಸಲು ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಗೆ 'ಕಾವೇರಿ ಎಕ್ಸ್‌ಪ್ರೆಸ್ ಹೈವೇ' ಎಂದು ಹೆಸರಿಡಲು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಬೇಕೆಂದು ಕೆ.ಜಿ. ಬೋಪಯ್ಯ ಮನವಿ ಮಾಡಿದ್ದಾರೆ.

ಕುಶಾಲನಗರದಲ್ಲಿ ಜಿಲ್ಲಾಮಟ್ಟದ ಕ್ರೀಡಾಕೂಟಕ್ಕೆ ಚಾಲನೆ



ಕುಶಾಲನಗರ, ಫೆ.27– ಅಖಿಲಭಾರತ ವೀರಶೈವ, ಲಿಂಗಾಯತ ಮಹಾಸಭಾ ಕೊಡಗು ಜಿಲ್ಲಾ ಘಟಕದ ಆಶ್ರಯದಲ್ಲಿ ಕುಶಾಲನಗರದಲ್ಲಿ ಹಮ್ಮಿಕೊಂಡಿರುವ ಜಿಲ್ಲಾಮಟ್ಟದ ಕ್ರೀಡಾ ಕೂಟಕ್ಕೆ ಕುಶಾಲನಗರ ಡಿವೈಎಸ್ಪಿ ಗಂಗಾಧರಪ್ಪ ಚಾಲನೆ ನೀಡಿದರು.

ಕಿರಿಕೊಡ್ಲಿ ಮಠಾಧೀಶರಾದ ಶ್ರೀ ಸದಾಶಿವ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಕೊಡಗು ಜಿಲ್ಲಾ ಘಟಕದ ಅಧ್ಯಕ್ಷ ಎಚ್.ವಿ.ಶಿವಪ್ಪ ಅಧ್ಯಕ್ಷತೆಯಲ್ಲಿ ಗಣಪತಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಕ್ರೀಡಾ ಜ್ಯೋತಿ ಬೆಳಗಿಸಿ ಕ್ರೀಡಾಕೂಟಕ್ಕೆ ಚಾಲನೆ ನೀಡಲಾಯಿತು. ಸರಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಆಟೋಟಗಳಿಗೆ ಚಾಲನೆ ನೀಡಿ ಉದ್ಘಾಟಿಸಿದ ಸಮಾಜದ ಮುಖಂಡ, ಹಿರಿಯ ವಕೀಲ ಎಚ್.ಎಸ್. ಚಂದ್ರಮೌಳಿ ಮಾತನಾಡಿ, ಉತ್ತಮ ಕ್ರೀಡಾಪಟುಗಳಿಗೆ ಜೀವನದಲ್ಲಿ ಉತ್ತಮ ಅವಕಾಶ ಲಭಿಸುತ್ತವೆ ರಾಜಕೀಯ ರಹಿತ ಕ್ರೀಡಾಕೂಟಗಳಿಂದ ಮಾತ್ರ ಕ್ರೀಡಾಪ್ರತಿಭೆಗಳಿಗೆ ಉತ್ತಮ ಪ್ರೋತ್ಸಾಹ, ಬೆಂಬಲ ದೊರಕಲು ಸಾಧ್ಯ ಎಂದರು.

ಜಿಲ್ಲಾ ಘಟಕದ ಗೌರವಾಧ್ಯಕ್ಷ ಶ್ರೀ ಸದಾಶಿವ ಸ್ವಾಮೀಜಿ ಮಾತನಾಡಿ, ಯುವ ಪೀಳಿಗೆಯಲ್ಲಿ ಪ್ರೀತಿ, ವಿಶ್ವಾಸ, ಉತ್ತಮ ಬಾಂಧವ್ಯ ವೃದ್ಧಿಸಲು ಕ್ರೀಡಾಕೂಟಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದು ಜಿಲ್ಲಾ ಘಟಕದ ಹೆಮ್ಮೆಯ ಕಾರ್ಯಕ್ರಮ ಎಂದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ವಿ.ಶಿವಪ್ಪ, ಸಮುದಾಯದ ಸಂಘಟನೆ ಉದ್ದೇಶದಿಂದ ಕ್ರೀಡಾಕೂಟ ಹಮ್ಮಿಕೊಳ್ಳಲಾಗಿದೆ. ಜನಾಂಗದ ಯುವ ಪೀಳಿಗೆಯಲ್ಲಿ ಕ್ರೀಡಾ ಸ್ಫೂರ್ತಿ ಬೆಳೆಸುವಲ್ಲಿ ಈ ಕ್ರೀಡಾಕೂಟ ಸಹಕಾರಿಯಾಗಲಿದೆ ಎಂದರು.

ಮಾ.3 ರಂದು ಪ್ರತಿಭಾ ಪುರಸ್ಕಾರ, ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು. ಕ್ರೀಡಾಕೂಟದಲ್ಲಿ ದೊಡ್ಡವೀರ ರಾಜೇಂದ್ರ ಒಡೆಯರ್ ಕಪ್ ಕ್ರಿಕೆಟ್, ಹಗ್ಗಜಗ್ಗಾಟ ಸೇರಿದಂತೆ ಮಹಿಳೆಯರು, ಮಕ್ಕಳಿಗೆ ವಿವಿಧ ಮಾದರಿಯ ಕ್ರೀಡಾ ಸ್ಪರ್ಧೆಗಳು ನಡೆದವು. ಈ ಸಂದರ್ಭ ಮಹಾಸಭಾದ ರಾಜ್ಯ ಸಮಿತಿ ಕಾರ್ಯದರ್ಶಿ ರಾಜೇಶ್ವರಿ ನಾಗರಾಜು, ರಾಜ್ಯ ಯುವ ಘಟಕದ ನಿರ್ದೇಶಕ ವಿರೂಪಾಕ್ಷ, ಕೊಡಗು ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಡಿ.ಬಿ ಧರ್ಮಪ್ಪ, ಮಹಾಸಭಾದ ಜಿಲ್ಲಾ ಘಟಕದ ಉಪಾಧ್ಯಕ್ಷ ಜಿ.ಎಂ.ಕಾಂತರಾಜು, ಎಸ್.ಎಸ್.ಸುರೇಶ್, ಪ್ರಧಾನ ಕಾರ್ಯದರ್ಶಿ ಟಿ.ಎಸ್. ಶಾಂಭಶಿವಮೂರ್ತಿ, ಖಜಾಂಚಿ ಎಚ್.ಪಿ. ಉದಯಕುಮಾರ್, ಯುವ ಘಟಕ ಅಧ್ಯಕ್ಷ ಮೋಕ್ಷಿಕ್ ರಾಜ್, ತಾಲೂಕು ಘಟಕಗಳ ಅಧ್ಯಕ್ಷರುಗಳಾದ ಕೆ.ಬಿ.ಹಾಲಪ್ಪ, ಕೆ.ಎನ್.ಸಂದೀಪ್, ಮಧುಸೂದನ್, ಆದರ್ಶ್, ಪ್ರದೀಪ್, ಪ್ರಮುಖರಾದ ಎಸ್.ನಂದೀಶ್, ಸುಶೀಲಮ್ಮ, ಎಂ.ಬಿ.ಬಸವರಾಜು ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳು ಇದ್ದರು. ಜಿಲ್ಲೆಯಾದ್ಯಂತ ಒಂದು ಸಾವಿರಕ್ಕೂ ಅಧಿಕ ಮಂದಿ ಸಮುದಾಯ ಬಾಂಧವರು ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದರು.

ಇಂದು ಜಿಲ್ಲಾ ಮಟ್ಟದ ಉದ್ಯೋಗ ಮೇಳ

ಮಡಿಕೇರಿ, ಫೆ.27– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಉದ್ಯೋಗ ವಿನಿಮಯ ಇಲಾಖೆ ವತಿಯಿಂದ ಸೋಮವಾರಪೇಟೆಯ ಸಂತ ಜೋಸೆಫರ ಪದವಿ ಕಾಲೇಜಿನಲ್ಲಿ ಫೆ.28 ರಂದು 'ಜಿಲ್ಲಾ ಮಟ್ಟದ ಉದ್ಯೋಗ ಮೇಳ' ನಡೆಯಲಿದ್ದು, ಇದರ ಸದುಪಯೋಗವನ್ನು ಅರ್ಹರು ಪಡೆದುಕೊಳ್ಳುವಂತೆ ಜಿಲ್ಲಾ ಉದ್ಯೋಗಾಧಿಕಾರಿ ಸಿ.ಎಂ.ಉಮಾ ಮನವಿ ಮಾಡಿದ್ದಾರೆ.

ನಗರದ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು ಪಿಯುಸಿ, ಐಟಿಐ, ಪದವಿ, ಸ್ನಾತಕೋತ್ತರ ಪದವಿ ಮತ್ತು ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದೆ. (18 ರಿಂದ 35 ವರ್ಷದೊಳಗಿನ ಪುರುಷ ಮತ್ತು ಮಹಿಳೆಯರು).

ಫೆ.28 ರಂದು ಬೆಳಗ್ಗೆ 9.30 ಗಂಟೆಗೆ ಹಾಜರಾಗಿ ನೋಂದಣಿ ಮಾಡಬೇಕು. ಆಧಾರ್ ಕಾರ್ಡ್, 20 ಪ್ರತಿಗಳ ಸ್ವವಿವರದೊಂದಿಗೆ ಹಾಜರಾಗಬೇಕು. ಅಭ್ಯರ್ಥಿಗಳ ಅಂಕಪಟ್ಟಿ ಮತ್ತು ಮೂಲ ದಾಖಲೆಗಳ ಪ್ರತಿಯನ್ನು ಹಾಜರುಪಡಿಸಬೇಕು ಎಂದು ಜಿಲ್ಲಾ ಉದ್ಯೋಗ ವಿನಿಮಯಾಧಿಕಾರಿ ಅವರು ತಿಳಿಸಿದರು. ಉದ್ಯೋಗ ಮೇಳದಲ್ಲಿ ರಾಣೆ ಮದ್ರಾಸ್, ಜಸ್ಟ್ ಡಯಲ್, ಕ್ಲಬ್ ಮಹೀಂದ್ರ, ವಕ್ಫ್ ಪೌಂಡೇಷನ್, ಕಾಗೆಂಟ್ ಇ–ಸರ್ವೀಸ್, ಇಬ್ಬನಿ ರೆಸಾರ್ಟ್ ಸೇರಿದಂತೆ 22 ಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಳ್ಳಲಿದ್ದು, ಈ ಅವಕಾಶವನ್ನು ಬಳಸಿಕೊಳ್ಳುವಂತೆ ಅವರು ಹೇಳಿದರು.

ಮಾ.2, ನಗರಸಭೆ ಕೌನ್ಸಿಲ್‌ನ ಸಾಮಾನ್ಯ ಸಭೆ

ಮಡಿಕೇರಿ, ಫೆ.27– ನಗರಸಭೆ ಕೌನ್ಸಿಲ್‌ನ ಸಾಮಾನ್ಯ ಸಭೆಯು ನಗರಸಭೆ ಅಧ್ಯಕ್ಷರಾದ ಅನಿತಾ ಪೂವಯ್ಯ ಅವರ ಅಧ್ಯಕ್ಷತೆಯಲ್ಲಿ ಮಾ.2 ರಂದು ಬೆಳಗ್ಗೆ 11 ಗಂಟೆಗೆ ನಗರಸಭಾ ಕೌನ್ಸಿಲ್ ಸಭಾಂಗಣದಲ್ಲಿ ನಡೆಯಲಿದೆ ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

ಮಾ.1 ಬಿಜೆಪಿ ವಿಜಯ ಸಂಕಲ್ಪ ಯಾತ್ರೆಗೆ ಮಹದೇಶ್ವರ ಬೆಟ್ಟದಲ್ಲಿ ಜೆ.ಪಿ. ನಡ್ಡಾ ಚಾಲನೆ

• ಮಾರ್ಚ್ 1ರಂದು ಹನೂರು, ಕೊಳ್ಳೇಗಾಲದಲ್ಲಿ ಬಹಿರಂಗಸಭೆ • ಮಾರ್ಚ್ 2ರಂದು ಚಾ.ನಗರದಲ್ಲಿ ರೋಡ್ ಶೋ, ಗುಂಡ್ಲುಪೇಟೆಯಲ್ಲಿ ಬಹಿರಂಗ ಸಭೆ



ಚಾಮರಾಜನಗರ, ಫೆ.27– ಕೇಂದ್ರ ಮತ್ತು ರಾಜ್ಯದಲ್ಲಿ ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕು ಎಂದು ಪಣತೊಟ್ಟಿರುವ ಬಿಜೆಪಿ ನಾಯಕರು ಹಮ್ಮಿಕೊಂಡಿರುವ ವಿಜಯ ಸಂಕಲ್ಪ ಯಾತ್ರೆ ಜಿಲ್ಲೆಯಲ್ಲಿ ಮಾ.1 ಹಾಗೂ 2ರುದು ನಡೆಯಲಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷರೂ ಆದ ಜಿಲ್ಲಾ ಪ್ರಭಾರಿ ಎಂ. ರಾಜೇಂದ್ರ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮಾ.1ರಂದು ಮಲೆ ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಯಾತ್ರೆಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಚಾಲನೆ ನೀಡಲಿದ್ದಾರೆ. ನಂತರ ಹನೂರು ಹಾಗೂ ಕೊಳ್ಳೇಗಾಲದಲ್ಲಿ ಬಹಿರಂಗ ಸಭೆ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಮಹದೇಶ್ವರ ಬೆಟ್ಟದಲ್ಲಿ ನಡೆಯಲಿರುವ ಯಾತ್ರೆಯ ಉದ್ಘಾಟನಾ ಸಮಾರಂಭ ಹಾಗೂ ಬೇಡಕಂಪಣ, ಸೋಲಿಗರೊಂದಿಗೆ ಸಂವಾದ ಕಾರ್ಯಕ್ರಮ ಹಾಗೂ ಹನೂರಿನಲ್ಲಿ ನಡೆಯಲಿರುವ ಬಹಿರಂಗ ಸಭೆಯಲ್ಲಿ ಜೆ.ಪಿ. ನಡ್ಡಾ ಅವರು ಭಾಗವಹಿಸಲಿದ್ದಾರೆ. ಕೊಳ್ಳೇಗಾಲದಲ್ಲಿ ನಡೆಯಲಿರುವ ಬಹಿರಂಗ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಇತರ ನಾಯಕರು ಪಾಲ್ಗೊಳ್ಳಲಿದ್ದಾರೆ ಎಂದರು. ಚಾಮರಾಜನಗರ ಹಾಗೂ ಗುಂಡ್ಲುಪೇಟೆಯಲ್ಲಿ ನಡೆಯಲಿರುವ ರೋಡ್ ಶೋ ಹಾಗೂ ಸಾರ್ವಜನಿಕ ಬಹಿರಂಗ ಸಭೆಯಲ್ಲಿ ಬಿ.ಎಸ್. ಯಡಿಯೂರಪ್ಪ ಅವರು ಪಾಲ್ಗೊಳ್ಳಲಿದ್ದಾರೆ ಎಂದು ರಾಜೇಂದ್ರ ಅವರು ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ನಡೆಯಲಿರುವ ಮೂರು ಬಹಿರಂಗ ಸಭೆಯಲ್ಲಿ ಹಾಗೂ ನಗರದಲ್ಲಿ ನಡೆಯಲಿರುವ ರೋಡ್ ಶೋನಲ್ಲಿ ಸುಮಾರು 10 ರಿಂದ 15 ಸಾವಿರ ಜನರು ಭಾಗವಹಿಸಲಿ ದ್ದಾರೆ. ರಾಜ್ಯದಲ್ಲಿ ನಾಲ್ಕು ತಂಡಗಳನ್ನು ರಚಿಸಲಾಗಿದ್ದು, ಈ ತಂಡ ರಾಜ್ಯದ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಲ್ಲಿ ಯಾತ್ರೆಯನ್ನು ನಡೆಸಲಿದೆ. ನಂತರ ದಾವಣಗೆರೆಯಲ್ಲಿ ಸುಮಾರು 15ರಿಂದ 20 ಲಕ್ಷ ಜನರನ್ನು ಸೇರಿಸಿ ಬೃಹತ್ ಸಮಾವೇಶ ಆಯೋಜಿಸಲಾಗಿದ್ದು, ಇದಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸಲಾಗಿದೆ ಎಂದು ತಿಳಿಸಿದರು.

ಬಿಜೆಪಿ ಜಿಲ್ಲಾ ಅಧ್ಯಕ್ಷ ಜಿ.ನಾರಾಯಣ ಪ್ರಸಾದ್, ವಿಜಯ ಸಂಕಲ್ಪ ಯಾತ್ರೆಯ ಜಿಲ್ಲಾ ಸಂಚಾಲಕ ಡಾ.ಎ.ಆರ್. ಬಾಬು, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಜಿಲ್ಲಾ ವಕ್ತಾರ ಅಯ್ಯನಪುರ ಶಿವಕುಮಾರ್, ಮುಖಂಡರಾದ ಹನುಮಂತಶೆಟ್ಟಿ, ಮೈಸೂರು ಜಿಲ್ಲೆಯ ಮಾಧ್ಯಮ್ ಪ್ರಮುಖ್ ವಸಂತ, ಜಿಲ್ಲೆಯ ಮಾಧ್ಯಮ್ ಪ್ರಮುಖ್ ಮಂಜುನಾಥ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಬೇಡಕಂಪಣರು, ಸೋಲಿಗರೊಂದಿಗೆ ಸಂವಾದ

> ಚಾಮರಾಜನಗರ ಕ್ಷೇತ್ರದ ಶಾಸಕರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಲ್ಲಿ ವಿಫಲರಾಗಿದ್ದಾರೆ. ಶಾಸಕರು ಸರ್ಕಾರದ ಮೇಲೆ ಒತ್ತಡ ತಂದು ಅನುದಾನ ತರಬೇಕು. ಇಲ್ಲದಿದ್ದರೆ ಅನುದಾನ ತರುವುದು ಕಷ್ಟ. ಸ್ಥಗಿತಗೊಂಡಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಪುನರ್ ಆರಂಭಿಸುವ ಕುರಿತು ಸರ್ಕಾರದ ಗಮನಕ್ಕೆ ತರಲಾಗುವುದು.
>
> -ಎಂ. ರಾಜೇಂದ್ರ, ಬಿಜೆಪಿ ರಾಜ್ಯ ಉಪಾಧ್ಯಕ್ಷರು.

ಅಭಿಮಾನಿಗಳಿಂದ ಯಡಿಯೂರಪ್ಪ ಹುಟ್ಟುಹಬ್ಬ ಆಚರಣೆ



ಚಾಮರಾಜನಗರ, ಫೆ.27– ತಾಲೂಕಿನ ಹರದನಹಳ್ಳಿ ಗ್ರಾಮದಲ್ಲಿ ಬಿ.ಎಸ್.ಯಡಿಯೂರಪ್ಪ ಅಭಿಮಾನಿಗಳಿಂದ ಶ್ರೀ ಯಡಿಯೂರು ಸಿದ್ದಲಿಂಗೇಶ್ವರ ದೇವಸ್ಥಾನದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ 80ನೇ ವರ್ಷದ ಜನ್ಮ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಣೆ ಮಾಡಲಾಯಿತು.

ಬಿ.ಎಸ್.ಯಡಿಯೂರಪ್ಪನವರ ಮನೆದೇವರಾದ ಶ್ರೀ ಯಡಿಯೂರ ಸಿದ್ದಲಿಂಗೇಶ್ವರರ ಜನ್ಮಸ್ಥಳವಾದ ಚಾಮರಾಜನಗರ ತಾಲೂಕಿನ ಹರದನಹಳ್ಳಿ ಗ್ರಾಮದಲ್ಲಿ ಇರುವ ಶ್ರೀ ಯಡಿಯೂರು ಸಿದ್ದಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ಇಂದು ಬೆಳಗಿನ ಜಾವ ಜಮಾಯಿಸಿದ ನೂರಾರು ಬಿಎಸ್‌ವೈ ಅಭಿಮಾನಿಗಳು ದೇವರಿಗೆ ಯಡಿಯೂರಪ್ಪನವರ ಹೆಸರಿನಲ್ಲಿ ವಿಶೇಷವಾದ ರೀತಿಯಲ್ಲಿ ಹೂವಿನ ಅಲಂಕಾರ, ಪೂಜೆ ಪುನಸ್ಕಾರಗಳನ್ನು ಮಾಡಿಸಿದರು. ನಂತರ ಅನ್ನಸಂತರ್ಪಣೆ ಮಾಡಿದರು.

ಇದೇ ಸಂದರ್ಭದಲ್ಲಿ ಯಡಿಯೂರಪ್ಪನವರ 80ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಅಭಿಮಾನಿಗಳು 80 ರೈತರಿಗೆ ಉಚಿತವಾಗಿ ತೆಂಗಿನ ಸಸಿಗಳನ್ನು ವಿತರಣೆ ಮಾಡಿದರು. ನಂತರ ಬಿಎಸ್‌ವೈ ಅಭಿಮಾನಿಗಳು ಎಲ್ಲರೂ ಒಟ್ಟಾಗಿ ಸೇರಿ ಕೇಕ್ ಕಟ್ ಮಾಡುವ ಮುಖಾಂತರ ಹುಟ್ಟುಹಬ್ಬ ಆಚರಣೆ ಮಾಡಿದರು.


ಇದೇ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್, ರಾಜ್ಯದಲ್ಲೇ ಮೊಟ್ಟಮೊದಲ ಬಾರಿಗೆ ರೈತ ಬಜೆಟ್ ಮಂಡನೆ ಮಾಡಿದ ಮೊದಲ ಮುಖ್ಯಮಂತ್ರಿ ನಮ್ಮ ಬಿ.ಎಸ್. ಯಡಿಯೂರಪ್ಪನವರು. ಇಂದು ಇವರ 80ನೇ ವರ್ಷದ ಹುಟ್ಟುಹಬ್ಬವನ್ನು ಅಭಿಮಾನಿಗಳು ವಿಶಿಷ್ಟ ರೀತಿಯಲ್ಲಿ ಆಯೋಜನೆ ಮಾಡಿದ್ದಾರೆ ಎಂದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಜಿಲ್ಲಾಧ್ಯಕ್ಷ ನಾರಾಯಣ ಪ್ರಸಾದ್, ಕಾಡಾ ಅಧ್ಯಕ್ಷ ನಿಜಗುಣ ರಾಜು, ಕೋರ್ ಕಮಿಟಿ ಸದಸ್ಯ ಡಾ. ಬಾಬು, ತಾಲೂಕು ಪಂಚಾಯತಿ ಮಾಜಿ ಉಪಾಧ್ಯಕ್ಷ ಪಿ.ದಯಾನಿಧಿ, ಮಾಜಿ ಜಿಲ್ಲಾ ಅಧ್ಯಕ್ಷ ಆರ್.ಸುಂದರ್, ಜಿಲ್ಲಾ ಉಪಾಧ್ಯಕ್ಷ ವೃಷಬೇಂದ್ರಪ್ಪ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸಿ.ಎನ್. ಬಾಲರಾಜು, ಯುವ ಮೋರ್ಚಾ ಉಪಾಧ್ಯಕ್ಷ ವಿರಾಟ್ ಶಿವು, ಯುವ ಮೋರ್ಚಾ ಕಾರ್ಯದರ್ಶಿ ವೀರೇಂದ್ರ ಚೂಡ ಮಾಜಿ ಸದಸ್ಯ ಕೂಸಣ್ಣ, ಶಕ್ತಿ ಕೇಂದ್ರ ಅಧ್ಯಕ್ಷ ಪುಜನೂರು ಚಂದ್ರು, ಮೂಡಳ್ಳಿ ಮೂರ್ತಿ, ರಾಮಸಮುದ್ರ ಗಿರೀಶ್, ಮೂಕನಪಾಳ್ಯ ಮುತ್ತು, ಮುಖಂಡರಾದ ಹರದನಹಳ್ಳಿ ಸುಂದ್ರಪ್ಪ, ನಂಜದೇವನಪುರ ಪ್ರಶಾಂತ್, ಆಲೂರು ಬಾಬು, ರಮೇಶ್, ರವಿ, ಬುಲೆಟ್ ಚಂದ್ರು, ಕೃಷ್ಣ, ಬಸವಪುರ ಶ್ರೀನಿವಾಸ್, ಮಲ್ಲಿಕಾರ್ಜುನ್, ಕಿಳಗೆರೆ ಬೆಳಪ್ಪ, ಎಂ.ಎಸ್.ಮಹದೇವಸ್ವಾಮಿ, ಸಿ.ಡಿ.ಪ್ರಕಾಶ್, ಮಂಜುನಾಥ್ ಸೇರಿದಂತೆ ಬಿಎಸ್‌ವೈ ಅಭಿಮಾನಿಗಳು ಹಾಜರಿದ್ದರು.

ಇಂದು ಚಾಮರಾಜನಗರ ನಗರಸಭೆ ಬಜೆಟ್ ಸಭೆ

ಚಾಮರಾಜನಗರ, ಫೆ.27– ಚಾಮರಾಜನಗರ ನಗರಸಭೆಯ 2022–23ನೇ ಸಾಲಿನ ಪರಿಷ್ಕೃತ ಹಾಗೂ 2023–24ನೇ ಸಾಲಿನ ಅಂದಾಜು ಆಯ–ವ್ಯಯ ಸಭೆಯನ್ನು ನಗರಸಭಾ ಅಧ್ಯಕ್ಷ ಸಿ.ಎಂ. ಆಶಾ ಅವರ ಅಧ್ಯಕ್ಷತೆಯಲ್ಲಿ ಫೆ.28ರಂದು ಬೆಳಗ್ಗೆ 11 ಗಂಟೆಗೆ ನಗರಸಭೆ ಕಚೇರಿಯ ಕೌನ್ಸಿಲ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.2, ಗುಂಡ್ಲುಪೇಟೆಯಲ್ಲಿ ಬಿಜೆಪಿ ವಿಜಯಸಂಕಲ್ಪ ಸಮಾವೇಶ




ಗುಂಡ್ಲುಪೇಟೆ, ಫೆ.27– ಮಾರ್ಚ್ 2ರಂದು ಮಧ್ಯಾಹ್ನ 1 ಗಂಟೆಗೆ ಪಟ್ಟಣದ ನೆಹರೂ ಪಾರ್ಕ್ ಆವರಣದಲ್ಲಿ ಬೃಹತ್ ವಿಜಯ ಸಂಕಲ್ಪ ಸಮಾವೇಶ ನಡೆಯಲಿದೆ ಎಂದು ಬಿಜೆಪಿ ಮಂಡಲಾಧ್ಯಕ್ಷ ದೊಡ್ಡಹುಂಡಿ ಜಗದೀಶ್ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿ, ಮುಂಬರುವ ವಿಧಾನಸಭೆ ಚುನಾವಣೆಯನ್ನು ಸಮರ್ಥವಾಗಿ ಎದುರಿಸಲು ಈಗಾಗಲೇ ಬಿಜೆಪಿ ಸಿದ್ಧತೆ ನಡೆಸಿದೆ. ಪೇಜ್ ಅಭಿಯಾನ ಹಾಗೂ ವಿಜಯ ಸಂಕಲ್ಪ ಅಭಿಯಾನದಲ್ಲಿ ಕಾರ್ಯಕರ್ತರು ಪ್ರತಿ ಮನೆಗಳಿಗೆ ತೆರಳಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಎಲ್ಲಾ ಸಾಧನೆಗಳ ಕರಪತ್ರವನ್ನು ಮತದಾರರಿಗೆ ತಿಳಿಸಿ ಈ ಬಾರಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಎಂಬ ಬರಹಗಳ ಪೋಸ್ಟರ್ ಗೋಡೆಗಳಿಗೆ ಹಚ್ಚಿದ್ದಾರೆ. ಮೂರನೇ ಹಂತದಲ್ಲಿ ಮಾ 2 ರಂದು ಮಲೆಮಹದೇಶ್ವರ ಬೆಟ್ಟದಿಂದ ಆಗಮಿಸುವ ವಿಜಯಸಂಕಲ್ಪ ಯಾತ್ರೆಯ ರಥವನ್ನು ಪಟ್ಟಣದ ನೆಹರೂ ಪಾರ್ಕ್ ಬಳಿ ಸ್ವಾಗತಿಸಿ, ಬೃಹತ್ ಸಮಾವೇಶ ಆಯೋಜಿಸಲಾಗಿದೆ. ಈ ಸಮಾವೇಶದಲ್ಲಿ ಸುಮಾರು 15 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದರು. ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹಿರೀಕಾಟಿ ಸೋಮಶೇಖರ್, ಎಪಿಎಂಸಿ ಅಧ್ಯಕ್ಷ ಕಮರಹಳ್ಳಿರವಿ, ಮಾಧ್ಯಮ ಸಂಚಾಲಕ ಎಸ್.ಸಿ. ಮಂಜುನಾಥ್, ಮುಖಂಡರಾದ ಕಣ್ಣೇಗಾಲಸ್ವಾಮಿ, ಬಸವೇಶ್, ಚನ್ನಂಜಯ್ಯನ ಹುಂಡಿ ಮಹದೇವಪ್ರಸಾದ್, ನಂದೀಶ್ ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಬೇಸಿಗೆ ವೇಳೆ ಸಮರ್ಪಕ ನೀರು ಪೂರೈಕೆಗೆ ಮುಂಜಾಗ್ರತೆ ವಹಿಸಿ

ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಸೂಚನೆ



ಚಾಮರಾಜನಗರ, ಫೆ.27– ಮುಂಬರುವ ಬೇಸಿಗೆ ವೇಳೆ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಯಾವುದೇ ಅಭಾವವಾಗದಂತೆ ಎಲ್ಲಾ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬೇಸಿಗೆ ಕಾಲದಲ್ಲಿ ಕೆಲವೆಡೆ ಸಾಮಾನ್ಯವಾಗಿ ಕಾಣಿಸಿಕೊಳ್ಳಬಹುದಾದ ನೀರಿನ ಸಮಸ್ಯೆ ಪರಿಹಾರಕ್ಕೆ ಮುಂದಾಗಬೇಕು. ಎಲ್ಲಿಯೂ ಕುಡಿಯುವ ನೀರಿಗೆ ಕೊರತೆಯಾಗಬಾರದು. ಸಮಸ್ಯಾತ್ಮಕ ಗ್ರಾಮಗಳ ಬಗ್ಗೆ ವಿಶೇಷ ಗಮನ ನೀಡಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಮುಂಜಾಗ್ರತೆ ವಹಿಸಬೇಕು ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಜಾನುವಾರುಗಳಿಗೆ ಕುಡಿಯುವ ನೀರು, ಮೇವಿಗೆ ಯಾವುದೇ ಕೊರತೆ ಕಾಡಬಾರದು. ಸಾಕಷ್ಟು ಮೇವು ದಾಸ್ತಾನು ಇರಬೇಕು. ಪಶುಪಾಲನೆ ಇಲಾಖೆ ಅಧಿಕಾರಿಗಳು ಜಾನುವಾರುಗಳ ಆರೋಗ್ಯದ ಬಗ್ಗೆಯೂ ಹೆಚ್ಚು ಕಾಳಜಿ ವಹಿಸಬೇಕು ಎಂದರು.

ಬೇಸಿಗೆ ಸಮಯದಲ್ಲಿ ಕೆರೆಗಳನ್ನು ಸೂಕ್ತವಾಗಿ ನಿರ್ವಹಿಸಬೇಕು. ಕೆರೆಗಳ ಸುತ್ತ ಬೆಳೆದಿರುವ ಅನವಶ್ಯಕ ತ್ಯಾಜ್ಯ ಗಿಡಗಳನ್ನು ತೆರವುಗೊಳಿಸಬೇಕು. ಕೆರೆಗಳ ಸಂರಕ್ಷಣೆಗೆ ಗಮನಹರಿಸಬೇಕು. ಕೃಷಿ, ತೋಟಗಾರಿಕೆ ಇಲಾಖೆಗಳು ರೈತರಿಗೆ ಪೂರಕವಾಗಿ ನೆರವಾಗಬೇಕು. ಬಿತ್ತನೆ ಬೀಜ, ರಸಗೊಬ್ಬರಗಳನ್ನು ಅಗತ್ಯಕ್ಕೆ ಅನುಗುಣವಾಗಿ ದಾಸ್ತಾನು ಮಾಡಿ ಪೂರೈಸಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

ಬೇಸಿಗೆ ಕಾಲದಲ್ಲಿ ಹರಡಬಹುದಾದ ಸಾಂಕ್ರಾಮಿಕ ರೋಗಗಳ ತಡೆಗೆ ಆರೋಗ್ಯ ಇಲಾಖೆ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕು. ಶುದ್ಧ ಕುಡಿಯುವ ನೀರಿನ ಮಹತ್ವದ ಬಗ್ಗೆ ತಿಳಿಸಿಕೊಡಬೇಕು. ಗ್ರಾಮ ಪಂಚಾಯಿತಿಗಳಲ್ಲಿ ವಿಶೇಷವಾಗಿ ಸ್ವಚ್ಛತೆ ಕಾಪಾಡಬೇಕು. ನೀರಿನ ತೊಂಬೆ ಕೊಳವೆ ಬಾವಿಗಳ ಸುತ್ತಲು ಕಲುಷಿತ ನೀರು ತ್ಯಾಜ್ಯ ಇರದಂತೆ ನೋಡಿಕೊಳ್ಳಬೇಕು ಎಂದರು.


ಕಾಡ್ಗಿಚ್ಚು ತಡೆಯುವಿಕೆ, ಮಾನವ ಮತ್ತು ಪ್ರಾಣಿ ಸಂಘರ್ಷಕ್ಕೆ ತಡೆ, ಕೋವಿಡ್ ಲಸಿಕೆ ಪ್ರಗತಿ ಸೇರಿದಂತೆ ವಿವಿಧ ವಿಷಯಗಳ ಕುರಿತು ಸಭೆಯಲ್ಲಿ ವಿಸ್ತೃತವಾಗಿ ಚರ್ಚೆ ನಡೆಸಲಾಯಿತು.

ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ಜಂಟಿ ಕೃಷಿ ನಿರ್ದೇಶಕ ಮಧುಸೂದನ್, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಶಿವಪ್ರಸಾದ್, ಡಿವೈಎಸ್‌ಪಿ ಅನ್ಸರ್ ಅಲಿ, ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ಧರಣೇಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕೆ.ಎಂ. ವಿಶ್ವೇಶ್ವರಯ್ಯ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆನಂದಮೂರ್ತಿ, ಜಿಲ್ಲಾ ಸರ್ವಲೆನ್ಸ್ ಅಧಿಕಾರಿ ಡಾ. ನಾಗರಾಜು, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಎಂ.ವಿ., ಸುಧಾ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಪೂರ್ಣಿಮಾ, ಶ್ರೀನಿವಾಸ್, ಮಹೇಶ್, ಇತರೆ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಇಂದು ಯಳಂದೂರು ತಾಲೂಕು ಕಚೇರಿಗೆ ಡಿಸಿ ಭೇಟಿ

ಚಾಮರಾಜನಗರ, ಫೆ.27– ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಫೆ.28ರಂದು ಬೆಳಗ್ಗೆ 11 ರಿಂದ ಯಳಂದೂರು ತಾಲೂಕು ಕಚೇರಿಗೆ ಭೇಟಿ ನೀಡಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸುವರು ಹಾಗೂ ತಾಲೂಕು ಕಚೇರಿಯ ಪರಿಶೀಲನೆ ನಡೆಸುವರು ಎಂದು ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

ರತ್ನಮ್ಮ ನಿಧನ



ಚಾಮರಾಜನಗರ, ಫೆ.27– ಚಾಮರಾಜನಗರದ ಸಿದ್ಧಾರ್ಥ ಚಿತ್ರಮಂದಿರದ ಹತ್ತಿರ ವಾಸವಿದ್ದ ನಾಗಮಣಿ ಅಲಿಯಾಸ್ ರತ್ನಮ್ಮ (75) ಸೋಮವಾರ ಮಧ್ಯಾಹ್ನ ನಿಧನರಾದರು.

ಮೃತರು ಲೇಟ್ ಲಾರಿ ಶಿವಣ್ಣ ಅವರ ಪತ್ನಿ, ಮೃತರು ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ನಾಳೆ (ಮಂಗಳವಾರ) ಬೆಳಗ್ಗೆ 10 ಗಂಟೆಗೆ ನಗರದ ಖಾಸಗಿ ಬಸ್ ನಿಲ್ದಾಣದ ಹಿಂಭಾಗದಲ್ಲಿರುವ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನಡೆಯಲಿದೆ.

ಒಂದನೇ ಪುಟದಿಂದ

ಕರ್ನಾಟಕದಲ್ಲಿ ಮತ್ತಷ್ಟು ಅಭಿವೃದ್ಧಿ ಪರ್ವ

ಮಟ್ಟಿಗೆ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿ ಕಾಣುತ್ತಿದೆ. ರಾಜ್ಯ ಹೆದ್ದಾರಿ, ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆಗೊಳ್ಳುತ್ತಿರುವುದರಿಂದ ಚೆನ್ನೈ ಮುಂಬೈನಂತಹ ವಾಣಿಜ್ಯನಗರಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸಲು ಸಹಕಾರಿಯಾಗುತ್ತಿದೆ ಎಂದರು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲೇಬೇಕೆಂದು ಪಣ ತೊಟ್ಟಿರುವ ಮೋದಿ ಅವರು ಮಾರ್ಚ್ ತಿಂಗಳಲ್ಲಿ ನಾಲ್ಕು ಬಾರಿ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದಾರೆ. ತಮ್ಮ ವರ್ಚಸ್ಸಿನಿಂದಲೇ ಮತ ಬುಟ್ಟಿಯನ್ನು ಗಟ್ಟಿ ಮಾಡಲು ಕಸರತ್ತು ನಡೆಸಿದ್ದಾರೆ. ಇಂದು ಶಿವಮೊಗ್ಗದಲ್ಲಿ ಹೊಸ ವಿಮಾನನಿಲ್ದಾಣ ರಾಷ್ಟ್ರಕ್ಕೆ ಸಮರ್ಪಣೆ ಮಾಡಿ, ಸಾರ್ವಜನಿಕರನ್ನುದ್ದೇಶಿಸಿ ಭಾಷಣ ಮಾಡಿದರೆ, ಬೆಳಗಾವಿ ನಗರದ ಆಸುಪಾಸಿನಲ್ಲಿ 12 ಕಿಲೋಮೀಟರ್ ರೋಡ್ ಶೋ ನಡೆಸಿದರು.

ಮಾ.11ಕ್ಕೆ ಪ್ರಧಾನಿಗಳಿಂದ ಉದ್ಘಾಟನೆ

ಸಹ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು. ಇದಲ್ಲದೆ ಡಬಲ್ ಇಂಜಿನ್ ಸರ್ಕಾರದಿಂದ ಮಾತ್ರ ಸಾಧ್ಯ ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಹಾಡಿ ಹೊಗಳಿದರು.

ನರೇಂದ್ರ ಮೋದಿಯವರು ದೇಶ ಸೇರಿದಂತೆ ಕರ್ನಾಟಕಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಭಾರತ ವಿಶ್ವಮಾನ್ಯವಾದಂತೆ ಕರ್ನಾಟಕ ದೇಶದಲ್ಲಿ ನಂಬರ್ ಒನ್ ಆಗಲಿದೆ ಎಂದರು. 2014 ರಿಂದೀಚೆಗೆ 30ಕ್ಕಿಂತ ಹೆಚ್ಚು ವಿಮಾನ ನಿಲ್ದಾಣಗಳು ಈ ದೇಶದಲ್ಲಿ ಉದ್ಘಾಟನೆಗೊಂಡಿವೆ. ಇನ್ನು 10-15 ವಿಮಾನ ನಿಲ್ದಾಣಗಳು ಉದ್ಘಾಟನೆಗೊಳ್ಳಲಿವೆ. ಸ್ವಾತಂತ್ರ್ಯ ನಂತರ ಆಗಿರುವ ವೈದ್ಯಕೀಯ ಕಾಲೇಜುಗಳಿಗಿಂತಲೂ 2014 ರಿಂದೀಚೆಗೆ ಅತ್ಯಧಿಕ ವೈದ್ಯಕೀಯ ಕಾಲೇಜು ದೇಶದಲ್ಲಿ ಆಗಿವೆ. ಕಳೆದ ವರ್ಷ ರಾಜ್ಯಕ್ಕೆ ನಾಲ್ಕು ವೈದ್ಯಕೀಯ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ.

ಸ್ವಾತಂತ್ರ್ಯ ನಂತರದಲ್ಲಿ ಆಗಿರುವ ಕುಡಿಯುವ ನೀರಿನ ಸೌಲಭ್ಯಕ್ಕಿಂತ ಮೂರು ಪಟ್ಟು ಹೆಚ್ಚು ಕುಡಿಯುವ ನೀರಿನ ಸೌಲಭ್ಯವನ್ನು ಮನೆಮನೆಗೆ ಜಲ್ ಜೀವನ್ ಮಿಷನ್ ಅಡಿಯಲ್ಲಿ ನೀಡಲಾಗಿದೆ ಎಂದರು. 2014 ರ ನಂತರ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಪ್ರಧಾನಿಗಳು ದುಪ್ಪಟ್ಟು ಮನೆಗಳನ್ನು ಕಟ್ಟಿದ್ದಾರೆ.

ಸ್ವಾತಂತ್ರ್ಯ ನಂತರದಲ್ಲಿ ಆಗಿರುವ ಶೌಚಾಲಯಗಳಿಗಿಂತಲೂ ಮೂರು ಪಟ್ಟು ಶೌಚಾಲಯಗಳನ್ನು ಕೇವಲ 7 ವರ್ಷಗಳಲ್ಲಿ ನೀಡಿದ್ದಾರೆ ಎಂದರು. ಭಾರತ ದೇಶ ಆರ್ಥಿಕವಾಗಿ ಸಬಲವಾಗಿದ್ದು, ಜಿ-20 ಅಧ್ಯಕ್ಷ ಸ್ಥಾನ ಭಾರತಕ್ಕೆ ಒಲಿದು ಬಂದಿದೆ. ಅದಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕಾರಣೀಭೂತರು. ಇಡೀ ವಿಶ್ವದ ಆರ್ಥಿಕ, ಸಾಮಾಜಿಕ ಸೇರಿದಂತೆ ಎಲ್ಲಾ ವಲಯಗಳಲ್ಲಿ ನಿರ್ಣಯ ಕೈಗೊಳ್ಳುವ ಜಿ-20 ಅಧ್ಯಕ್ಷ ಸ್ಥಾನ ಭಾರತದ ಪ್ರಧಾನಿಗಳಿಗೆ ಲಭಿಸಿರುವುದು ಹೆಮ್ಮೆಯ ವಿಚಾರ.

ಕರ್ನಾಟಕ, ಭಾರತದ ನಿರ್ಮಾಣದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ಆರ್ಥಿಕವಾಗಿ ಅತೀ ಹೆಚ್ಚು ವಿದೇಶಿ ಬಂಡವಾಳ ರಾಜ್ಯಕ್ಕೆ ಬರುತ್ತಿದೆ. ನಾವೀನ್ಯತೆ, ತಂತ್ರಜ್ಞಾನದಲ್ಲಿ ನಂಬರ್ ಒನ್ ಸ್ಥಾನದಲ್ಲಿದ್ದು, ಸಾಮಾಜಿಕವಾಗಿಯೂ ನಂಬರ್ ಒನ್ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ ಶಿವಮೊಗ್ಗ ವಿಮಾನನಿಲ್ದಾಣ ಉದ್ಘಾಟನೆಗೊಂಡಿದೆ. ಬಿಜಾಪುರ ವಿಮಾನನಿಲ್ದಾಣ ಈಗಾಗಲೇ ಸಿದ್ಧವಿದ್ದು, ಹಾಸನದಲ್ಲಿ ಪ್ರಗತಿಯಲ್ಲಿದೆ. ಕಾರವಾರದಲ್ಲಿ ಕಾಮಗಾರಿ ಪ್ರಾರಂಭವಾಗುತ್ತಿದ್ದು, ರಾಯಚೂರು, ಕೊಪ್ಪಳ ಮತ್ತು ದಾವಣಗೆರೆಯಲ್ಲಿ ಈ ವರ್ಷ ಕಾಮಗಾರಿಗಳು ಪ್ರಾರಂಭವಾಗಲಿದೆ. ವಿಮಾನ ನಿಲ್ದಾಣದ ಜಾಲ ಹಾಗೂ ಪ್ರಧಾನಿಗಳ ಆಶಯದಂತೆ ಸಾಗರಮಾಲಾ ಯೋಜನೆಯಡಿ ಏಳು ಬಂದರುಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ. ಕಳೆದ 5 ವರ್ಷಗಳಲ್ಲಿ ಆರು ಸಾವಿರ ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಮಂಜೂರಾತಿಯಾಗಿದೆ. ಈ ಕಾರ್ಯಕ್ಕಾಗಿ 64 ಸಾವಿರ ಕೋಟಿ ಮಂಜೂರಾಗಿದ್ದು, ಈ ಪೈಕಿ 34 ಕೋಟಿ ರೂ.ಗಳು ಕರ್ನಾಟಕಕ್ಕೆ ಪ್ರಧಾನಿಗಳು ಬಿಡುಗಡೆ ಮಾಡಿದ್ದಾರೆ ಎಂದರು.

ತನ್ವೀರ್ ಸೇಠ್ ನಿರ್ಧಾರ

ಮನಃತೃಪ್ತಿಯಾಗುವಂತೆ ಕೆಲಸ ಮಾಡಲು ಆರೋಗ್ಯ ಸಹಕರಿಸುತ್ತಿಲ್ಲ. ಹೀಗಾಗಿ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲ ಎಂದು ದೃಢವಾಗಿಯೇ ತಿಳಿಸಿದ್ದಾರೆ.

ಕಳೆದ ಮೂರು ದಿನದ ಹಿಂದೆ ರಾಯಪುರದಲ್ಲಿ ನಡೆದ ಕಾಂಗ್ರೆಸ್ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಲು ತನ್ವೀರ್ ಸೇಠ್ ತೆರಳಿದ್ದಾಗ ಹಲವಾರು ಕಾಂಗ್ರೆಸ್ ರಾಷ್ಟ್ರೀಯ ಮುಖಂಡರು ತನ್ವೀರ್ ಅವರನ್ನು ಚುನಾವಣಾ ರಾಜಕೀಯದಿಂದ ಹಿಂದೆ ಸರಿಯಬಾರದು ಎಂದು ಒತ್ತಡ ಹೇರಿದ್ದಾರೆ. ಜೊತೆಗೆ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಕೂಡ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಒತ್ತಡ ಹಾಕಿದರಾದರೂ, ತಮ್ಮ ನಿರ್ಧಾರವನ್ನು ಬದಲಿಸದ ತನ್ವೀರ್ ಸೇಠ್, ಕೊನೆಗೆ ವರಿಷ್ಠರ ಒತ್ತಡದಿಂದ ಪಾರಾಗುವ ನಿಟ್ಟಿನಲ್ಲಿ, ಆರೋಗ್ಯ ದೃಷ್ಟಿಯಿಂದ ನಾನು ಚುನಾವಣೆಯಲ್ಲಿ ಸ್ಪರ್ಧಿಸದಿರಲು ನಿರ್ಧರಿಸಿದ್ದೇನೆ. ಆದರೆ ಪಕ್ಷದ ಹೈಕಮಾಂಡ್ ಯಾವುದೇ ತೀರ್ಮಾನ ಕೈಗೊಂಡರೂ ಅದಕ್ಕೆ ಬದ್ಧನಾಗಿರುತ್ತೇನೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್‌ನ ರಾಷ್ಟ್ರ ಮತ್ತು ರಾಜ್ಯ ಮುಖಂಡರು ನರಸಿಂಹರಾಜ ಕ್ಷೇತ್ರದಲ್ಲಿ 6ನೇ ಬಾರಿಗೆ ಸ್ಪರ್ಧಿಸಲೇಬೇಕೆಂದು ಒತ್ತಡ ಹೇರುತ್ತಿದ್ದರೂ ಕೂಡ ಸ್ಪರ್ಧೆಗಿಳಿಯಲು ತನ್ವೀರ್ ಇದುವರೆಗೆ ಒಪ್ಪಿಗೆ ನೀಡಿಲ್ಲ. ನರಸಿಂಹರಾಜ ಕ್ಷೇತ್ರ ಕಾಂಗ್ರೆಸ್ ಭದ್ರಕೋಟೆಯಾಗಿದ್ದು, ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಈ ಕ್ಷೇತ್ರದಿಂದ ಸ್ಪರ್ಧೆಗಿಳಿದರೆ, ಸುಲಭವಾಗಿ ಗೆಲ್ಲಬಹುದು. ನಾನೂ ಕೂಡ ಅವರ ಗೆಲುವಿಗಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ವರಿಷ್ಠರ ಮುಂದೆ ತನ್ವೀರ್ ಹೇಳಿದ್ದಾರೆ. ಕೊನೇ ಹಂತದಲ್ಲೂ ತನ್ವೀರ್ ಸೇಠ್ ನಿರ್ಧಾರ ಬದಲಾಗದಿದ್ದರೆ ಮಾಜಿ ಮೇಯರ್ ಅಯೂಬ್ ಖಾನ್ ಅವರನ್ನು ಎನ್.ಆರ್. ಕ್ಷೇತ್ರದಿಂದ ಕಣಕ್ಕಿಳಿಸುವ ಬಗ್ಗೆ ವರಿಷ್ಠರು ಚಿಂತನೆ ನಡೆಸಿದ್ದಾರೆ ಎಂದು ಹೇಳಲಾಗಿದೆ.

ಹೆಸರು ಅಂತಿಮ?

ಮೈಸೂರು ನಗರದ ಕೃಷ್ಣರಾಜ ವಿಧಾನಸಭಾ ಕ್ಷೇತ್ರಕ್ಕೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಹೆಸರು ಪ್ರಚಲಿತದಲ್ಲಿರುವಾಗಲೇ ಹಾಲಿ ಬಿಜೆಪಿಯಲ್ಲಿ ಟಿಕೆಟ್‌ಗಾಗಿ ಪೈಪೋಟಿ ನಡೆಸುತ್ತಿರುವ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರನ್ನು ಪಕ್ಷಕ್ಕೆ ಕರೆತಂದು ಈ ಕ್ಷೇತ್ರದಿಂದ ಟಿಕೆಟ್ ಕೊಡಿಸಲು ಸಿದ್ದರಾಮಯ್ಯ ಆಸಕ್ತಿ ಹೊಂದಿದ್ದಾರೆ. ಈ ನಡುವೆ ಯುವ ಮುಖಂಡ ಪ್ರದೀಪ್ ಕುಮಾರ್ ಹೆಸರೂ ಚರ್ಚೆಯಲ್ಲಿದೆ.

ಮಂಡ್ಯದ ಕೆ.ಆರ್.ಪೇಟೆ, ಹಾಸನ, ಹೊಳೆನರಸೀಪುರ ಕ್ಷೇತ್ರಗಳಿಗೆ ಕಾಂಗ್ರೆಸ್‌ನಲ್ಲಿ ಸಮರ್ಥ ಅಭ್ಯರ್ಥಿಗಳಿಲ್ಲದ ಕಾರಣ ಹೊಸ ಮುಖಗಳಿಗಾಗಿ ಹುಡುಕಾಟ ನಡೆದಿದೆ. ಮಂಡ್ಯ ಕ್ಷೇತ್ರದಿಂದ ಡಾ. ಕೃಷ್ಣ, ಪಾಂಡವಪುರ ಕ್ಷೇತ್ರಕ್ಕೆ ರೈತ ನಾಯಕ ದಿವಂಗತ ಕೆ.ಎಸ್.ಪುಟ್ಟಣ್ಣಯ್ಯ ಪುತ್ರ ದರ್ಶನ್ ಪುಟ್ಟಣ್ಣಯ್ಯ, ಮದ್ದೂರಿಗೆ ಉದಯ್, ಶ್ರೀರಂಗಪಟ್ಟಣಕ್ಕೆ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ, ಮಳವಳ್ಳಿಗೆ ಮಾಜಿ ಶಾಸಕ ನರೇಂದ್ರಸ್ವಾಮಿ, ನಾಗಮಂಗಲಕ್ಕೆ ಮಾಜಿ ಸಚಿವ ಎನ್.ಚೆಲುವರಾಯಸ್ವಾಮಿ ಹೆಸರುಗಳು ಅಂತಿಮಗೊಂಡಿವೆ ಎಂದು ಹೇಳಲಾಗುತ್ತಿದೆ. ಆದರೆ ಚೆಲುವರಾಯಸ್ವಾಮಿ ಅವರು ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಯಲು ಆಸಕ್ತಿ ತೋರಿದ್ದು, ಈ ವಿಚಾರವಾಗಿ ವರಿಷ್ಠರು ಯಾವುದೇ ತೀರ್ಮಾನ ಕೈಗೊಂಡಿಲ್ಲ.

"ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ನಾನು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದು, ಮಾಜಿ ಶಾಸಕನಾಗಿರುವ ನನಗೆ ನೂರಕ್ಕೆ ನೂರು ಟಿಕೆಟ್ ದೊರೆಯುತ್ತದೆ. ಆ ನಿಟ್ಟಿನಲ್ಲೇ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇನೆ. ಹೆಚ್.ವಿ.ರಾಜೀವ್ ಅವರನ್ನು ಬಿಜೆಪಿಯಿಂದ ಕಾಂಗ್ರೆಸ್‌ಗೆ ಕರೆತಂದು ಟಿಕೆಟ್ ನೀಡಲಾಗುತ್ತದೆ ಎಂಬುದು ಒಪ್ಪುವ ಮಾತೇ ಅಲ್ಲ. ಬೇರೆ ಪಕ್ಷದವರನ್ನು ಕರೆತಂದು ಟಿಕೆಟ್ ಕೊಡುವ ಮಟ್ಟಕ್ಕೆ ಕೆ.ಆರ್.ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಸಮರ್ಥರು ಇಲ್ಲ ಎಂಬ ವಾತಾವರಣವೇ ಇಲ್ಲ. ಈ ಬಾರಿ ಮತದಾರರ ಒಲವು ನನ್ನ ಪರವಾಗಿದ್ದು, ಪಕ್ಷ ನನಗೇ ಟಿಕೆಟ್ ನೀಡುತ್ತದೆ.

– ಎಂ.ಕೆ.ಸೋಮಶೇಖರ್, ಮಾಜಿ ಶಾಸಕ

"ನಾನು ಮೂರು ದಶಕಕ್ಕಿಂತ ಹೆಚ್ಚು ಕಾಲದಿಂದ ಬಿಜೆಪಿಯಲ್ಲಿದ್ದೇನೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೃಷ್ಣರಾಜ ಕ್ಷೇತ್ರದ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿಯಾಗಿದ್ದೇನೆ. ಈ ಬಾರಿ ನನಗೇ ಟಿಕೆಟ್ ದೊರೆಯುತ್ತದೆ ಎಂಬ ವಿಶ್ವಾಸವೂ ಇದೆ. ಕ್ಷೇತ್ರದಲ್ಲಿ ನನಗೆ ಜನರ ಒಲವು ಹೆಚ್ಚಾಗಿರುವುದರಿಂದ ಚುನಾವಣೆಗಳು ಬಂದಾಗಲೆಲ್ಲಾ ನನ್ನ ಹೆಸರು ಬೇರೆ ಪಕ್ಷಗಳ ಜೊತೆ ತಳುಕು ಹಾಕಿಕೊಂಡು ರಾಜಕೀಯ ವಲಯದಲ್ಲಿ ಮಾತನಾಡುವುದು ಸಹಜವಾಗಿ ನಡೆದುಕೊಂಡೇ ಬರುತ್ತಿದೆ. ಆದರೆ ನಾನಂತೂ ಬಿಜೆಪಿಯವನೇ. ಮುಂದಿನ ಚುನಾವಣೆಯಲ್ಲಿ ನನಗೇ ಟಿಕೆಟ್ ದೊರೆಯುತ್ತದೆ. ಬಿಜೆಪಿ ಅಭ್ಯರ್ಥಿಯಾಗಿಯೇ ಸ್ಪರ್ಧಿಸುತ್ತೇನೆ. ಒಂದು ವೇಳೆ ಟಿಕೆಟ್ ಕೈತಪ್ಪಿದರೂ, ಪಕ್ಷ ಯಾರಿಗೆ ಟಿಕೆಟ್ ನೀಡಿದರೂ ಈ ಹಿಂದಿನಂತೆ ಅವರ ಪರವಾಗಿ ಕೆಲಸ ಮಾಡುತ್ತೇನೆ.

– ಹೆಚ್.ವಿ.ರಾಜೀವ್, ಮುಡಾ ಮಾಜಿ ಅಧ್ಯಕ್ಷ

ಪಯಣದ ಬಗ್ಗೆ 'ನೆನಪುಗಳು' ಪುಸ್ತಕ ರಚನೆ

ವಿವಿಗಳಿಗೂ ಭೇಟಿ ನೀಡಿದ್ದೇನೆ. ನನ್ನ ವಿದ್ಯಾರ್ಥಿ ಜೀವನ, ಯುವಕನಾಗಿ ನಾನು ಮಾಡಿದ ಹೋರಾಟಗಳನ್ನು ನೆನಸಿಕೊಂಡರೆ ರೋಮಾಂಚನ ಆಗುತ್ತದೆ. ಬಿಎಸ್‌ಸಿ ಪೂರೈಸಿದ ಬಳಿಕ ಅನಿವಾರ್ಯವಾಗಿ ರಾಜಕೀಯ ಪ್ರವೇಶಿಸಿದೆ. ನಂತರ ದೂರ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಪಡೆದೆ. ಸಂಶೋಧನಾ ವಿದ್ಯಾರ್ಥಿಯಾಗಿ ಓದುವ ಅವಕಾಶ ಸಿಕ್ಕಿತ್ತು. ಆದರೆ ಬಳಸಿಕೊಳ್ಳಲಾಗಲಿಲ್ಲ ಎಂದು ತಿಳಿಸಿದರು. ಅಧಿಕಾರ ವಿಕೇಂದ್ರೀಕರಣದ ಮೂಲಕ ವಿವಿಧ ಹಂತದ ಜನಪ್ರತಿನಿಧಿಗಳಿಗೆ ನಿಗದಿತ ಹೊಣೆಯನ್ನು ನೀಡಲಾಗಿದೆ. ಆದರೂ ಯಾವ್ಯಾವ ಹಂತದ ಜನಪ್ರತಿನಿಧಿಗಳಿಗೆ ಯಾವ ವಿಚಾರಗಳನ್ನು ಗಮನಕ್ಕೆ ತರಬೇಕೆಂಬ ಬಗ್ಗೆ ನಮ್ಮಲ್ಲಿ ಇನ್ನೂ ಪರಿಪೂರ್ಣ ತಿಳುವಳಿಕೆ ಇಲ್ಲ. ನಾನು ಈ ಹಿಂದೆ ಲೀಡ್ ಮ್ಯಾಗ್‌ಜಿನ್‌ಗಳು, ಸುದ್ದಿ ಪತ್ರಿಕೆಗಳ ಸಂಪಾದಕೀಯ ಸೇರಿದಂತೆ ಸಾಕಷ್ಟು ಓದುತ್ತಿದ್ದೆ. ಆದರೆ ಈಗ ಒತ್ತಡಗಳಿಂದ ಅದು ಸಾಧ್ಯವಾಗುತ್ತಿಲ್ಲ ಎಂದರು.

ಸಂಗ್ರಹ ಮುಂದೂಡಿಕೆಗೆ ಸಂಸದ ಪ್ರತಾಪ್‌ಸಿಂಹ ಮನವಿ

ಅವುಗಳಿಗೆ ಅವಕಾಶ ಕೊಡುವುದಿಲ್ಲ. ದ್ವಿಚಕ್ರ ವಾಹನ ಹಾಗೂ ತ್ರಿಚಕ್ರ ವಾಹನಗಳು ಸರ್ವೀಸ್ ರಸ್ತೆಯನ್ನು ಬಳಸಿಕೊಳ್ಳಬಹುದು. ಇದರಿಂದ ಅವರು ಟೋಲ್ ಪಾವತಿಸುವುದು ಕೂಡ ತಪ್ಪಲಿದೆ ಎಂದು ತಿಳಿಸಿದ್ದರು. ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಬರುವ ಬೆಂಗಳೂರು ನಗರ ಜಿಲ್ಲೆಯ ಕಣಿಮಿಣಿಕೆ ಮತ್ತು ರಾಮನಗರ ಜಿಲ್ಲೆಯ ಶೇಷಗಿರಿ ಬಳಿ ಬೆಂಗಳೂರು–ನಿಡಘಟ್ಟ ವಿಭಾಗದ 6ಲೇನ್‌ಗಳ ಬಳಕೆಗಾಗಿ ಫೆ28ರಿಂದ ಟೋಲ್ ಶುಲ್ಕ ಅನ್ವಯವಾಗಲಿದೆ. ಇದು 55.63 ಕಿ.ಮೀ. ಇದ್ದು, ಟೋಲಿಂಗ್ ರಸ್ತೆಯಾಗಿದೆ ಎಂದು ಪ್ರಾಧಿಕಾರ ಪ್ರಕಟಣೆಯಲ್ಲಿ ತಿಳಿಸಿತ್ತು.

ಕಲ್ಲಂಗಡಿ ಹಣ್ಣಿನತ್ತ ಜನರ ಚಿತ್ತ ; ಬೇಸಿಗೆ ಬೇಗೆಯಲ್ಲಿ

ಬಾಯಾರಿಕೆ ನೀಗಿಸುವ ಕಲ್ಲಂಗಡಿಗೆ ಭಾರೀ ಡಿಮ್ಯಾಂಡು





ಮೈಸೂರು,ಫೆ.27(ಆರ್‌ಕೆ)– ಬಿಸಿಲಿನ ಬೇಗೆಗೆ ಬಸವಳಿದು ಬಾಯಾರಿಕೆ ನೀಗಿಸಿಕೊಳ್ಳಲು ಕಲ್ಲಂಗಡಿ ಹಣ್ಣಿನತ್ತ ಜನರ ಚಿತ್ತ ಮೈಸೂರಿನಲ್ಲೀಗ ಜಾಸ್ತಿಯಾಗುತ್ತಿದೆ. ಬೇಸಿಗೆ ಬಿಸಿಲಿನ ಝಳ ಜಾಸ್ತಿಯಾಗಿರುವ ಹಿನ್ನೆಲೆಯಲ್ಲಿ ಮೈಸೂರಲ್ಲಿ ಜನ ಕಲ್ಲಂಗಡಿ ಹಣ್ಣಿಗೆ ಹೆಚ್ಚಿಗೆ ಮಾರು ಹೋಗುತ್ತಿದ್ದಾರೆ.

ಮೈಸೂರಿನಲ್ಲಿ ಫೆಬ್ರವರಿ 10ರ ನಂತರ ತಾಪಮಾನ ಹೆಚ್ಚುತ್ತಲೇ ಇದ್ದು, ಇದರಿಂದ ಸಹಜವಾಗಿ ಮೈಸೂರಿಗರು ಕಲ್ಲಂಗಡಿಯತ್ತ ಮುಖ ಮಾಡಿದ್ದಾರೆ. ಬಂಡಿಪಾಳ್ಯದ ಎಪಿಎಂಸಿ, ದೇವರಾಜ ಮಾರುಕಟ್ಟೆ, ಹಳೇ ಆರ್‌ಎಂಸಿ ಮಾರುಕಟ್ಟೆಯಲ್ಲದೇ, ನಗರದ ಪ್ರಮುಖ ರಸ್ತೆ, ಸರ್ಕಲ್, ಜಂಕ್ಷನ್‌ಗಳಲ್ಲಿ ಕಲ್ಲಂಗಡಿ ಹಣ್ಣಿನ ರಾಶಿ ರಾಶಿ ಬಿದ್ದಿದ್ದು, ಜನ ಈ ಹಣ್ಣಿನ ಮೊರೆ ಹೋಗುತ್ತಿದ್ದಾರೆ.

ಕಲ್ಲಂಗಡಿ, ಕರ್ಬೂಜ, ಕಿತ್ತಳೆ, ಮೂಸಂಬಿ, ದ್ರಾಕ್ಷಿಯಂತಹ ರಸಭರಿತ ಹಣ್ಣುಗಳ ರಸ ಸೇವಿಸುವ ಜೊತೆಗೆ ಈ ಎಲ್ಲಾ ಬಗೆಯ ಪಾನೀಯ ಸೇವನೆಯೂ ಹೆಚ್ಚಾಗಿದೆ. ಹಾಗಾಗಿ ಹಣ್ಣುಗಳಿಗೆ ಭಾರೀ ಬೇಡಿಕೆ ಬಂದಿದ್ದು, ಬೆಲೆ ಏರಿಕೆಯಾದರೂ ಖರೀದಿ ಮಾತ್ರ ಜೋರಾಗಿಯೇ ಇದೆ.

'ಹುಣಸೂರು, ಮಳವಳ್ಳಿ, ಗುಂಡ್ಲುಪೇಟೆ, ಹೊಳೆನರಸೀಪುರ, ಪಾಂಡವಪುರ, ನಾಗಮಂಗಲ, ಬಿಜಾಪುರ ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಕಲ್ಲಂಗಡಿಯನ್ನು ಬೆಳೆಯಾಗುತ್ತದೆ. ಅದಾಗ್ಯೂ ಆಂಧ್ರ ಪ್ರದೇಶ, ಮಹಾರಾಷ್ಟ್ರ ಗುಜರಾತ್‌ನಿಂದಲೂ ನೂರಾರು ಟನ್ ಕಲ್ಲಂಗಡಿ ಹಣ್ಣನ್ನು ಖರೀದಿಸಿ ಮೈಸೂರಿಗೆ ತರಲಾಗುತ್ತಿದ್ದು, ಅಷ್ಟರ ಮಟ್ಟಿಗೆ ಬೇಡಿಕೆ ಇದೆ' ಎನ್ನುತ್ತಾರೆ ವ್ಯಾಪಾರಿ ಗೋಕುಲಂನ ಎಂ.ಮಹದೇವಯ್ಯ.

ಸುಮಾರು 35 ವರ್ಷಗಳಿಂದ ಕಲ್ಲಂಗಡಿ ವ್ಯಾಪಾರ ಮಾಡುತ್ತಿರುವ ಇವರು, ಪ್ರಸ್ತುತ ಮೈಸೂರಿನ ಕೆಆರ್‌ಎಸ್ ರಸ್ತೆಯ ಇಎಸ್‌ಐ ಆಸ್ಪತ್ರೆ ಎದುರು ಕಲ್ಲಂಗಡಿ ಹಣ್ಣು ವ್ಯಾಪಾರ ಮಾಡುತ್ತಿದ್ದಾರೆ. 'ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಕಲ್ಲಂಗಡಿಯ ಭರ್ಜರಿ ವ್ಯಾಪಾರ ನಡೆಯುತ್ತದೆ. ಅದರಂತೆ ಖರ್ಚು–ವೆಚ್ಚವೂ ಬರುತ್ತದೆ' ಎಂದು 'ಮೈಸೂರು ಮಿತ್ರ'ನಿಗೆ ಅವರು ಮಾಹಿತಿ ನೀಡಿದರು.

ನಂಜನಗೂಡು ರಸ್ತೆಯ ಬಂಡಿಪಾಳ್ಯದ ಎಪಿಎಂಸಿ ಮಾರುಕಟ್ಟೆ ದೇವರಾಜ ಮಾರುಕಟ್ಟೆ ಬಂಬೂ ಬಜಾರ್‌ನ ಹಳೇ ಆರ್‌ಎಂಸಿ ಮಾರುಕಟ್ಟೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಣ್ಣುಗಳು ಹೋಲ್‌ಸೇಲ್‌ನಲ್ಲಿ ಮಾರಾಟವಾಗುತ್ತಿವೆ. ಉಳಿದಂತೆ ಕೆಆರ್‌ಎಸ್ ರಸ್ತೆಯ ಇಎಸ್‌ಐ ಆಸ್ಪತ್ರೆ ಎದುರು, ಕುಕ್ಕರಹಳ್ಳಿ ಕೆರೆ ಜಂಕ್ಷನ್ (ಬೋಗಾದಿ ರಸ್ತೆ), ಹುಣಸೂರು ರಸ್ತೆಯ ಐಶ್ವರ್ಯ ಪೆಟ್ರೋಲ್ ಬಂಕ್ ಬಳಿ, ಉದಯಗಿರಿ ಮೇನ್ ರೋಡ್‌ನ ಸಿಗ್ನಲ್ ಲೈಟ್ ಜಂಕ್ಷನ್, ಬೀಡಿ ಕಾರ್ಮಿಕರ ಆಸ್ಪತ್ರೆ ಸರ್ಕಲ್, ಎನ್‌ಆರ್ ಮೊಹಲ್ಲಾದ ಶಿವಾಜಿ ರಸ್ತೆ, ಜಲಪುರಿ ಕ್ವಾರ್ಟರ್ಸ್ ಬಳಿ, ಕ್ಯಾತಮಾರನಹಳ್ಳಿ ರಸ್ತೆ ಜಂಕ್ಷನ್, ಕುವೆಂಪುನಗರ ಪೊಲೀಸ್ ಠಾಣೆ ರಸ್ತೆ ಸೇರಿದಂತೆ ಮೈಸೂರಿನ ಹಲವು ಪ್ರಮುಖ ರಸ್ತೆ, ಜಂಕ್ಷನ್‌ಗಳಲ್ಲಿ ಕಲ್ಲಂಗಡಿ ಹಣ್ಣುಗಳ ಮಾರಾಟ ಜೋರಾಗಿದೆ.

ಅದೇ ರೀತಿ ಕರ್ಬೂಜಕ್ಕೂ ಭಾರೀ ಬೇಡಿಕೆ ಇದೆಯಾದರೂ ಈ ಬಾರಿ ಹೆಚ್ಚಿನ ಪ್ರಮಾಣದಲ್ಲಿ ಹಣ್ಣು ಮಾರುಕಟ್ಟೆಗೆ ಬಂದಿಲ್ಲ. ಕಿತ್ತಳೆ, ಮೂಸಂಬಿ, ಅನಾನಸ್, ದ್ರಾಕ್ಷಿ ಹಣ್ಣುಗಳ ಜ್ಯೂಸ್ ಸೇವನೆಗೂ ಜನ ಮಾರು ಹೋಗುತ್ತಿದ್ದು, ನಗರದ ಜ್ಯೂಸ್ ಅಂಡಿಗಳಲ್ಲೀಗ ಜನದಟ್ಟಣೆ ಜೋರಾಗಿದೆ. ದಿನೇ ದಿನೆ ಬಿಸಿಲಿನ ಬೇಗೆ ಹೆಚ್ಚಾಗುತ್ತಿದ್ದಂತೆಯೇ ಹಣ್ಣು ಹಾಗೂ ಹಣ್ಣಿನ ಪಾನೀಯಕ್ಕೆ ಜನತೆ ಮಾರುಹೋಗುತ್ತಿದ್ದಾರೆ

ಮೂರು ವಿಧದ ಕಲ್ಲಂಗಡಿಗೂ ಭಾರೀ ಬೇಡಿಕೆ...

'4ರಿಂದ 12 ಕೆಜಿ ತೂಗುವ ಬಿಳಿ ಪಟ್ಟೆ ಮತ್ತು ಹಸಿರು ಬಣ್ಣದ 'ನಾಮದಾರ', 2ರಿಂದ 6 ಕೆಜಿ ತೂಗುವ ಗಾಢಹಸಿರು ಬಣ್ಣದ 'ಶುಗರ್ ಕ್ವೀನ್' ಹಾಗೂ 4ರಿಂದ 15 ಕೆಜಿ ತೂಕವಿರುವ ಲೈಟ್ ಗ್ರೀನ್ ಪಟ್ಟೆಯ 'ಸುಪ್ರಿತಾ' ಎಂಬ ಮೂರು ವಿಧದ ಕಲ್ಲಂಗಡಿಗೂ ಮಾರುಕಟ್ಟೆಯಲ್ಲಿ ಭಾರೀ ಬೇಡಿಕೆ ಇದೆ. ಸಿಹಿ ಮತ್ತು ರಸದಲ್ಲಿ ಒಂದಕ್ಕೊಂದು ಮೀರಿಸುತ್ತವೆ. ಬೇಸಿಗೆಯಲ್ಲಿ ಮೈಸೂರಿಗೆ ತಲಾ 10 ಟನ್‌ನಂತೆ 10 ಲೋಡ್ ಕಲ್ಲಂಗಡಿ ಬರುತ್ತದೆ. ಅಷ್ಟೂ 15ರಿಂದ 20 ದಿನದೊಳಗೆ ಮಾರಾಟವಾಗುತ್ತದೆ. ಸದ್ಯ ಕೆಜಿಗೆ ಸುಮಾರು 35ರಿಂದ 40 ರೂ.ವರೆಗೆ ಕಲ್ಲಂಗಡಿ ಹಣ್ಣು ಮಾರಾಟವಾಗುತ್ತಿದೆ. ಆದರೆ ದಿನದಿಂದ ದಿನಕ್ಕೆ ಅಂಗಡಿಯಿಂದ ಅಂಗಡಿಗೆ ಬೆಲೆಯಲ್ಲಿ ವ್ಯತ್ಯಾಸವಿದೆ.

-ಗೋಕುಲಂನ ಎಂ.ಮಹದೇವಯ್ಯ, ವ್ಯಾಪಾರಿ

ಕಾರ್ಖಾನೆ ಸ್ಥಾಪನೆಗೆ ಭೂಮಿ ನೀಡಿದ ರೈತ ಕುಟುಂಬಗಳಿಗೆ ಉದ್ಯೋಗ ನೀಡದ ಆರೋಪ

ಕಾರ್ಖಾನೆ ಎದುರು ಅನಿರ್ದಿಷ್ಟಾವಧಿ ಅಹೋರಾತ್ರಿ ಹೋರಾಟ



ಮೈಸೂರು,ಫೆ.27(ಪಿಎಂ)– ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಕಾರ್ಖಾನೆ ಸ್ಥಾಪನೆಗೆ ಭೂಮಿ ನೀಡಿದ ರೈತ ಕುಟುಂಬಗಳಿಗೆ ಉದ್ಯೋಗ ನೀಡದೇ ವಂಚಿಸಲಾಗುತ್ತಿದೆ ಎಂದು ಆರೋಪಿಸಿ ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಕೆಆರ್‌ಎಸ್ ರಸ್ತೆಯ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಮೆ. ಆಟೋಲಿವ್ ಇಂಡಿಯಾ ಪ್ರೈ ಲಿಮಿಟೆಡ್ ಕಂಪನಿಯ ಕಾರ್ಖಾನೆಯು 2011–12ರಲ್ಲಿ ಕಾರ್ಯಾರಂಭ ಮಾಡಿದೆ. ಇದರ ಸ್ಥಾಪನೆಗಾಗಿ ಕಡಕೊಳ, ಕೆಎಂ ಹುಂಡಿ ಗ್ರಾಮದ ರೈತರು ಭೂಮಿ ನೀಡಿದ್ದಾರೆ. ಆದರೆ ಭೂಮಿ ನೀಡಿದ ರೈತ ಕುಟುಂಬಗಳಿಗೆ ಕಾನೂನಿನಂತೆ ಉದ್ಯೋಗ ನೀಡದೇ ವಂಚಿಸಲಾಗುತ್ತಿದೆ ಎಂದು ಆರೋಪಿಸಿದರು.

2007–08ರಲ್ಲಿ ಕೆಐಎಡಿಬಿ ಮೂಲಕ ಭೂಸ್ವಾಧೀನ ಪ್ರಕ್ರಿಯೆ ನಡೆಸಲಾಯಿತು. ಕಾರ್ಖಾನೆ ಕಾರ್ಯಾರಂಭ ಮಾಡಿ ಹಲವು ವರ್ಷಗಳೇ ಕಳೆದರೂ ಭೂಮಿ ನೀಡಿದ ರೈತ ಕುಟುಂಬಗಳಿಗೆ ಉದ್ಯೋಗ ನೀಡಿಲ್ಲ. ಕಾರ್ಖಾನೆ ಸ್ಥಾಪನೆಗೆ ಭೂಮಿ ನೀಡಿದ 12 ಕುಟುಂಬಗಳಿಗೆ ತಲಾ ಒಂದು ಉದ್ಯೋಗ ನೀಡಬೇಕು. ಕಾರ್ಖಾನೆ ಸ್ಥಾಪನೆ ಆದಾಗಿನಿಂದ ಈವರೆಗೆ ವೇತನ ಭತ್ಯೆಗಳನ್ನೂ ಉದ್ಯೋಗ ವಂಚಿತ ಕುಟುಂಬಗಳಿಗೆ ನೀಡಬೇಕು ಎಂದು ಆಗ್ರಹಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜುಕಿರಣ್, ರೈತರು ನೀಡಿದ ಭೂಮಿಗೆ ಸಂಬಂಧಿಸಿದಂತೆ ಕೆಐಎಡಿಬಿ ಸರ್ವೇ ನಂಬರ್‌ಗಳನ್ನು ವಿಭಾಗಿಸಿರಲಿಲ್ಲ. ಕೇವಲ 2 ಸರ್ವೇ ಮಾತ್ರ ಉಲ್ಲೇಖಿಸಿದ್ದರು. ಇಂದು ಅದನ್ನು ಪರಿಶೀಲಿಸಿ 12 ಸರ್ವೇ ನಂಬರ್‌ಗಳನ್ನು ನಮೂದಿಸಿದ್ದು, ಹೊಸ ಕರಾರು ಮಾಡಿಕೊಳ್ಳುವ ಸಂಬಂಧ ಕಾರ್ಖಾನೆಗೆ ಕೆಐಎಡಿಬಿ ಅಧಿಕಾರಿಗಳು ಇಂದು ಪತ್ರ ಕಳುಹಿಸುವ ಪ್ರಕ್ರಿಯೆ ನಡೆಸಿದರು ಎಂದರು.

ಹಾಗಾಗಿ ನಾವು ಉದ್ದೇಶಿಸಿದಂತೆ ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನೆ ನಡೆಸದೇ ಸಂಜೆ ವೇಳೆಗೆ ಪ್ರತಿಭಟನೆ ಕೈಬಿಟ್ಟಿದ್ದೇವೆ. ಆದರೆ ಉದ್ಯೋಗ ದೊರೆಯುವವರೆಗೂ ನಮ್ಮ ಹೋರಾಟ ಮುಂದುವರೆಸಲು ನಿರ್ಧರಿಸಿದ್ದು, ನಾಳೆಯಿಂದ (ಫೆ.28) ಸದರಿ ಕಂಪನಿಯ ಕಾರ್ಖಾನೆ ಎದುರು ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನೆ ನಡೆಸಲಿದ್ದೇವೆ ಎಂದು ತಿಳಿಸಿದರು. ಸಂಘದ ಮೈಸೂರು ವಲಯಾಧ್ಯಕ್ಷ ವಿದ್ಯಾಸಾಗರ್ ಟಿ.ರಾಮೇಗೌಡ, ಮುಖಂಡರಾದ ಹಿಮ್ಮಾವು ರಘು, ವೆಂಕಟೇಶ್ ಸೇರಿದಂತೆ ಉದ್ಯೋಗ ವಂಚಿತ 12 ಕುಟುಂಬಗಳ ಹಲವು ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಜನ್ಮದಿನವನ್ನು ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಶ್ರೀ ಅಮೃತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸಾರ್ವಜನಿಕರಿಗೆ ಸಿಹಿ ವಿತರಿಸುವ ಮೂಲಕ ಆಚರಿಸಲಾಯಿತು. ಈ ವೇಳೆ ಶಾಸಕ ಎಲ್.ನಾಗೇಂದ್ರ, ನಗರಪಾಲಿಕೆ ಸದಸ್ಯ ಚಿಕ್ಕವೆಂಕಟು, ನಗರ ಫಲಾನುಭವಿಗಳ ಪ್ರಕೋಷ್ಠದ ಸಂಚಾಲಕ ಆರ್.ಪರಮೇಶ, ಸುರೇಂದ್ರ, ಶ್ರೀನಿವಾಸ್, ಮುಖಂಡರಾದ ಪ್ರಮೋದ್, ಲಕ್ಷ್ಮಿ, ವಿಘ್ನೇಶ್ವರ ಭಟ್, ಪಾಪಣ್ಣ, ಸುದರ್ಶನ್, ಕಿರಣ್, ಮಂಜುನಾಥ್, ಶಿವು, ಕಾಂತಿಲಾಲ್ ಜೈನ್, ಪ್ರವೀಣ್ ಹರನ್, ಶ್ರವಣ್, ನವೀನ್, ದಿನೇಶ್ ಗೌಡ, ಅರವಿಂದ, ಸಂದೀಪ್, ಸೂರಜ್ ಮುಂತಾದವರು ಉಪಸ್ಥಿತರಿದ್ದರು.

ಟ್ರ್ಯಾಕ್ಟರ್‌ಗೆ ಬೈಕ್ ಡಿಕ್ಕಿ; ದಂಪತಿ, ಮಕ್ಕಳು ಸಾವು

ಹಾಸನ, ಫೆ.27– ನಿಂತಿದ್ದ ಟ್ರ್ಯಾಕ್ಟರ್‌ಗೆ ಬೈಕ್ ಡಿಕ್ಕಿಯಾಗಿ ದಂಪತಿ ಹಾಗೂ ಇಬ್ಬರು ಮಕ್ಕಳು ಸೇರಿದತೆ ನಾಲ್ವರು ಸ್ಥಳದಲ್ಲಿಯೇ ಮೃತಪಟ್ಟಿರುವ ದಾರುಣ ಘಟನೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೆಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶನಿವಾರ ತಡರಾತ್ರಿ ನಡೆದಿದೆ.

ತಿಪಟೂರು ಮುಖ್ಯ ರಸ್ತೆಯ ನವಿಲೇ ಗೇಟ್ ಬಳಿ ಈ ಅಪಘಾತ ಸಂಭವಿಸಿದ್ದು, ಮೃತರನ್ನು ತಿಪಟೂರು ತಾಲೂಕಿನ ಎಡಗರಹಳ್ಳಿ ಗ್ರಾಮದ ಯೋಗೇಶ್ ಆಚಾರಿ(35) ಅವರ ಪತ್ನಿ ಲಕ್ಷ್ಮಿ(27) ಹಾಗೂ ಯೋಗೇಶ್ ಆಚಾರಿ ತಂಗಿಯ ಮಕ್ಕಳಾದ ಗಾನವಿ(12) ತೇಜು(4) ಎಂದು ಗುರುತಿಸಲಾಗಿದೆ.

ಮೃತ ದಂಪತಿ ಅನೇಕ ವರ್ಷಗಳಿಂದ ನವಿಲೇ ಗೇಟ್‌ನಲ್ಲಿ ವಾಸವಾಗಿದ್ದರು. ಶನಿವಾರ ತಮ್ಮ ಹುಟ್ಟೂರಿನಿಂದ ನವಲೆ ಗೇಟ್‌ಗೆ ಬರುವಾಗ ಈ ಅಪಘಾತ ಸಂಭವಿಸಿದೆ. ಡೀಸೆಲ್ ಖಾಲಿಯಾದ ಹಿನ್ನೆಲೆಯಲ್ಲಿ ಟ್ರ್ಯಾಕ್ಟರ್ ಅನ್ನು ಚಾಲಕ ಅಜಾಗರೂಕತೆಯಿಂದ ನಡು ರಸ್ತೆಯ ಮೇಲೆ ಬಿಟ್ಟು ಹೋಗಿದ್ದರಿಂದ ಈ ಅಪಘಾತ ಸಂಭವಿಸಿದೆ. ಈ ಸಂಬಂಧ ನುಗ್ಗೇಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮಾಜ ಕಲ್ಯಾಣ ಇಲಾಖೆ ದಿನಗೂಲಿ ನೌಕರರ ಖಾಯಂಗೆ ಆಗ್ರಹ



ಮೈಸೂರು, ಫೆ.27(ಎಂಟಿವೈ)– ಸರ್ವೋಚ್ಚ ನ್ಯಾಯಾಲಯದ ಆದೇಶವಿದ್ದರೂ ದಿನಗೂಲಿ ನೌಕರರನ್ನು ಖಾಯಂ ಮಾಡದೆ ಸಮಾಜ ಕಲ್ಯಾಣ ಇಲಾಖೆ ಉದ್ಧಟತನ ಪ್ರದರ್ಶಿಸುತ್ತಿದೆ. ನಿಯಮಾನುಸಾರ ಈ ನೌಕರರ ಖಾಯಂ ಮಾಡದಿದ್ದರೆ ರಾಜ್ಯ ದಲಿತ ಸಂಘರ್ಷ ಸಮಿತಿ ಡಾ.ಡಿ.ಜಿ.ಸಾಗರ್ ಬಣದ ವತಿಯಿಂದ ಉಗ್ರ ಪ್ರತಿಭಟನೆ ನಡೆಸುವುದಾಗಿ ದಸಂಸ ಜಿಲ್ಲಾ ಸಂಚಾಲಕ ಮಲ್ಲೇಶ್ ಚುಂಚನಹಳ್ಳಿ ಎಚ್ಚರಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸುಪ್ರಿಂಕೋರ್ಟ್ ಆದೇಶದಂತೆ ಈಗಾಗಲೇ ಸಮಾಜ ಕಲ್ಯಾಣ ಇಲಾಖೆಯಲ್ಲಿ 28 ವರ್ಷ ಸೇವೆ ಸಲ್ಲಿಸಿ ಮಾಸಾಂತ್ಯಕ್ಕೆ ನಿವೃತ್ತರಾಗಲಿರುವ ನಿಲಯ ಮೇಲ್ವಿಚಾರಕ ರೇವಣ್ಣ ಅವರನ್ನು ಖಾಯಂಗೊಳಿಸಲಾಗಿದೆ. ಆದರೆ ಇದೇ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿರುವವರನ್ನು ಖಾಯಂಗೊಳಿಸಿಲ್ಲ. ನ್ಯಾಯಾಲಯ ತಪ್ಪು ಮಾಹಿತಿ ನೀಡಿರುವ ಹಿನ್ನೆಲೆಯಲ್ಲಿ ಇತರೆ ದಿನಗೂಲಿ ನೌಕರರನ್ನು ಖಾಯಂ ಮಾಡಿಲ್ಲ. ಹೀಗಾಗಿ ತಪ್ಪು ಮಾಹಿತಿ ನೀಡಿರುವ ಸಿಬ್ಬಂದಿ ಶ್ರೀನಿವಾಸ್ ಅವರನ್ನು ಕೂಡಲೇ ವರ್ಗಾಯಿಸಬೇಕು, ತೀರ್ಪಿನಂತೆ ಇತರ ಅರ್ಹ ದಿನಗೂಲಿ ನೌಕರರನ್ನೂ ಖಾಯಂಗೊಳಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ದಸಂಸ ಡಾ.ಡಿ.ಜಿ.ಸಾಗರ್ ಬಣದ ಹನುಮಂತು ಬೆಲವತ್ತ ಗೋವಿಂದರಾಜು ಅಶೋಕಪುರಂ, ಸುರೇಶ್ ಯರಗನಹಳ್ಳಿ, ಪುಟ್ಟಸ್ವಾಮಿ ದೇವರಸನಹಳ್ಳಿ ಉಪಸ್ಥಿತರಿದ್ದರು.

ಶ್ರೀ ಕಳಲೆ ಕೈವಲ್ಯಾದೇವಿ ಮಡೇ ಉತ್ಸವ

ನಂಜನಗೂಡು, ಫೆ.27–ತಾಲೂಕಿನ ಶ್ರೀ ಕಳಲೆ ಕೈವಲ್ಯಾದೇವಿ ಅಮ್ಮನವರ ಮಡೆ ಉತ್ಸವ ಮಾರ್ಚ್ 1ರ ಬುಧವಾರ ನೆರವೇರಲಿದೆ. ಅಂದು ಸಂಜೆ 5.30ರ ನಂತರ ಅಮ್ಮನವರಿಗೆ ಅಭಿಷೇಕ, ಮೈಸೂರಿನ ವಿದ್ವಾನ್ ವಿ.ಪ್ರಕಾಶ್ ಮತ್ತು ವೃಂದದಿಂದ ನಾದಸ್ವರ, ಅಮ್ಮನವರ ಉತ್ಸವ, ಮಡೆ ಸೇವೆ ಇರಲಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಹಾಪ್‌ಕಾಮ್ಸ್ ನೌಕರರ ಪ್ರತಿಭಟನೆ



ಮೈಸೂರು,ಫೆ.27(ಪಿಎಂ)– ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಮೈಸೂರು ಜಿಲ್ಲಾ ಹಾಪ್‌ಕಾಮ್ಸ್ ಸಂಸ್ಥೆಯ ನೌಕರರು ಹಾಗೂ ಹೊರಗುತ್ತಿಗೆ ನೌಕರರು ಸೋಮವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಕರ್ಜನ್ ಪಾರ್ಕ್ ಆವರಣದಲ್ಲಿರುವ ಜಿಲ್ಲಾ ಹಾಪ್‌ಕಾಮ್ಸ್ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಮೇ 2022ರವರೆಗೆ ನಿವೃತ್ತಿ ಹೊಂದಿದ ನೌಕರರಿಗೆ 16.5 ತಿಂಗಳಿಗೆ ಗ್ರಾಚ್ಯುಯಿಟಿ ಹಣ ಪಾವತಿಸಲಾಗಿದೆ. ಆದರೆ ನಂತರ ನಿವೃತ್ತಿ ಹೊಂದುವ ನೌಕರರಿಗೆ ಕೇವಲ 15 ತಿಂಗಳಿಗೆ ಗ್ರಾಚ್ಯುಯಿಟಿ ಹಣ ನೀಡಲು ಆಡಳಿತ ಮಂಡಳಿ ನಿರ್ಣಯ ಕೈಗೊಂಡಿದ್ದು, ಇದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಡಿಮೆ ವೇತನ ಪಡೆಯುತ್ತಿರುವ ನೌಕರರ ಗ್ರಾಚ್ಯುಯಿಟಿ ಹಣವನ್ನೂ ಕಡಿತಗೊಳಿಸುವುದು ಸರಿಯಲ್ಲ. ಹಾಗಾಗಿ ಈ ಹಿಂದೆ ಪಾವತಿಸುತ್ತಿದ್ದಂತೆಯೇ ಮೇ 2022ರ ನಂತರ ನಿವೃತ್ತಿ ಹೊಂದಿದ ಮತ್ತು ಹೊಂದುವ ನೌಕರರಿಗೂ 16.5 ತಿಂಗಳಿಗೆ ಗ್ರಾಚ್ಯುಯಿಟಿ ಹಣ ಪಾವತಿ ಮಾಡಬೇಕೆಂದು ಒತ್ತಾಯಿಸಿದರು.

ಅಂತೆಯೇ ಹತ್ತಾರು ವರ್ಷಗಳಿಂದ ಹೊರಗುತ್ತಿಗೆಯಡಿ ಕೆಲಸ ಮಾಡುತ್ತಿರುವ ನೌಕರರನ್ನು ಖಾಯಂ ಮಾಡಬೇಕು. ಇದು ಸಾಧ್ಯವಿಲ್ಲದ್ದರೆ ವೇತನ ಹೆಚ್ಚಳಕ್ಕೆ ಶೀಘ್ರವೇ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು. ನೌಕರರಾದ ಮಾಯಣ್ಣಗೌಡ, ನಂಜುಂಡ, ಕಿಶೋರ, ಸುನೀಲ್, ದೀಕ್ಷಿತ್, ನಟರಾಜು ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಹೆಚ್.ವಿ.ರಾಜೀವ್ ಬಳಗದ ವತಿಯಿಂದ ಮಾ.10, 11ರಂದು ಉದ್ಯೋಗ ಮೇಳ



ಮೈಸೂರು,ಫೆ27(ಎಂಟಿವೈ)– ಮೈಸೂರಿನ ಕುವೆಂಪುನಗರದ ಪ್ರಮತಿ ಹಿಲ್ ವ್ಯೂ ಅಕಾಡೆಮಿ ಶಾಲೆಯಲ್ಲಿ ಮಾ.10 ಮತ್ತು 11ರಂದು ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಚ್.ವಿ.ರಾಜೀವ್ ಸ್ನೇಹ ಬಳಗದ ವತಿಯಿಂದ ಮೊದಲ ಬಾರಿಗೆ ವರ್ಚ್ಯುಯಲ್ ಮತ್ತು ಭೌತಿಕ ಮಾದರಿಯಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ಈ ಮೇಳದಲ್ಲಿ 50ಕ್ಕೂ ಹೆಚ್ಚು ಪ್ರತಿಷ್ಠಿತ ಸಂಸ್ಥೆಗಳು ಪಾಲ್ಗೊಳಲಿದ್ದು, 5 ಸಾವಿರ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ನೀಡಲಿವೆ. ಉದ್ಯೋಗಾಕಾಂಕ್ಷಿಗಳು ಈ ಬೃಹತ್ ಉದ್ಯೋಗ ಮೇಳದ ಸದುಪಯೋಗ ಪಡಿಸಿಕೊಳ್ಳುವಂತೆ ಕೋರಿದರು.

ಈ ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಲು ಬಯಸುವ ಅಭ್ಯರ್ಥಿಗಳು ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಮಾ. 4ರಂದು ಬೆಳಿಗ್ಗೆ 9.30ರಿಂದ ಆರಂಭವಾಗುವ ಉದ್ಯೋಗ ಪೂರ್ವ ಸಂದರ್ಶನದಲ್ಲಿ ಪಾಲ್ಗೊಳ್ಳಬೇಕು. ಮೊದಲನೇ ದಿನವಾದ ಮಾ. 10ರಂದು ಬೆಳಿಗ್ಗೆ 9.30 ಕ್ಕೆ ಪ್ರಾರಂಭವಾಗುವ ಉದ್ಯೋಗ ಮೇಳದಲ್ಲಿ 10ನೇ ತರಗತಿ, ದ್ವಿತೀಯ ಪಿಯುಸಿ, ಐಟಿಐ, ಜೆಒಸಿ, ಡಿಪ್ಲೋಮಾ ಅಭ್ಯರ್ಥಿಗಳಿಗೆ ನೇರ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುತ್ತದೆ. ಈ ಅಭ್ಯರ್ಥಿಗಳಿಗೆ ಉದ್ಯೋಗ ಪೂರ್ವ ಸಂದರ್ಶನ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮೇಳದ ಎರಡನೇ ದಿನವಾದ ಮಾ.11ರಂದು ಬೆಳಗ್ಗೆ 9.30ರಿಂದ ನಡೆಯುವ ಉದ್ಯೋಗ ಮೇಳದಲ್ಲಿ ಉದ್ಯೋಗ ಪೂರ್ವ ಸಂದರ್ಶನದಲ್ಲಿ ಭಾಗವಹಿಸಿದ್ದ ಎಲ್ಲಾ ಪದವಿಧರರು, ಪಿಜಿ ಮತ್ತು ಎಂಜಿನಿಯರ್ ಪದವೀಧರ ಅಭ್ಯರ್ಥಿಗಳಿಗೆ ಸಾಮಾನ್ಯ ಜ್ಞಾನ, ಮೌಖಿಕ ಸಾಮರ್ಥ್ಯ ಹಾಗೂ 30 ನಿಮಿಷಗಳ ಕಾಲ ವಿಶ್ಲೇಷಣಾತ್ಮಕ ಕೌಶಲ್ಯಗಳ ಬಗ್ಗೆ ಉತ್ತರಿಸಬೇಕಾಗುತ್ತದೆ. ಆಸಕ್ತರು ಸಹಾಯವಾಣಿ ಸಂಖ್ಯೆ 9513373737 ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಬಿ.ಎಲ್. ಭೈರಪ್ಪ ಮುಖಂಡರಾದ ಎಸ್.ವಿ. ವೆಂಕಟೇಶ್, ಜಯಂತ್, ರಾಂಪ್ರಸಾದ್ ಇದ್ದರು.

ಪಕ್ಷದ ನಿರ್ಧಾರಕ್ಕೆ ಬದ್ಧ

ಕೆ.ಆರ್.ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷ ಯಾರಿಗೆ ಟಿಕೆಟ್ ನೀಡುತ್ತದೋ ಅವರ ಪರವಾಗಿ ಕೆಲಸ ಮಾಡಲು ನಾವು ಬದ್ಧರಾಗಿದ್ದೇವೆ. ನಾನು ಸಹ ಕೆ.ಆರ್.ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ. ವರಿಷ್ಠರ ಗಮನಕ್ಕೂ ತಂದಿದ್ದೇನೆ. ಕೆಲ ವಿಪ್ರ ಮುಖಂಡರು ಕೆ.ಆರ್.ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಅವರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವುದು ಅವರ ವೈಯಕ್ತಿಕ ವಿಚಾರವಾಗಿದೆ.

- ಹೆಚ್.ವಿ.ರಾಜೀವ್, ಮುಡಾ ಮಾಜಿ ಅಧ್ಯಕ್ಷ

ನಂ.ಗೂಡಲ್ಲಿ 8 ಕೋಟಿ ವೆಚ್ಚದಲ್ಲಿ ಸಮಾನತೆ ಸಮುಚ್ಛಯ ನಿರ್ಮಾಣ

● ವಿವಿಧ ಸಮುದಾಯಗಳ ಭವನ ನಿರ್ಮಾಣಕ್ಕೆ ಜಾಗ, ಅನುದಾನ ಹಂಚಿಕೆ ● ನಂಜನಗೂಡು

ಸರ್ವ ಜನಾಂಗದ ಶಾಂತಿಯ ತೋಟ: ಸಂಸದ ವಿ.ಶ್ರೀನಿವಾಸ ಪ್ರಸಾದ್ ವಿಶ್ವಾಸ

ನಂಜನಗೂಡು, ಫೆ.27– ನಗರದ ಬೈಪಾಸ್ ರಸ್ತೆಯಲ್ಲಿ 2 ಕೋಟಿ ವೆಚ್ಚದಲ್ಲಿ ಉಪ್ಪಾರ ಸಮುದಾಯ ಭವನ ಹಾಗೂ 8 ಕೋಟಿ ವೆಚ್ಚದಲ್ಲಿ ಸಮಾನತೆ ಸಮುಚ್ಛಯ ನಿರ್ಮಾಣ ಕಾಮಗಾರಿ ಮುಂದಿನ ತಿಂಗಳು ಆರಂಭ ವಾಗಲಿದೆ ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ತಿಳಿಸಿದರು.

ತಾಲೂಕು ಕಚೇರಿ ಸಭಾಂಗಣದಲ್ಲಿ ಉಪ್ಪಾರ ಸಮುದಾಯ ಭವನಕ್ಕೆ 20 ಗುಂಟೆ, ಗೆಜ್ಜಗಾರ ಸಮು ದಾಯ ಭವನಕ್ಕೆ 8 ಗುಂಟೆ, 24 ಮನೆ ತೆಲುಗುಶೆಟ್ಟರ ಸಮುದಾಯ ಭವನಕ್ಕೆ 8 ಗುಂಟೆ ಜಾಗ ಮಂಜೂರಾತಿ ಹಕ್ಕುಪತ್ರಗಳನ್ನು ಸಮುದಾಯದ ಮುಖಂಡರಿಗೆ ವಿತರಿಸಿ, ಅವರು ಮಾತನಾಡಿದರು.

ನಾನು ಸಂಸದನಾಗಿದ್ದ ವೇಳೆ ಹಿಂದುಳಿದ ವರ್ಗದ ವರು ಸಮುದಾಯ ಭವನ ನಿರ್ಮಿಸಿಕೊಡುವಂತೆ ಅರ್ಜಿ ಕೊಡುತ್ತಿದ್ದರು. ನಗರದ ಮಧ್ಯಭಾಗದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗ ಎಲ್ಲಾ ವರ್ಗ ದವರ ಸಮುದಾಯ ಭವನಗಳು ನಿರ್ಮಾಣವಾಗ ಬೇಕು. ಆ ಮೂಲಕ ನಂಜನಗೂಡು ಕ್ಷೇತ್ರ ಸರ್ವ ಜನಾಂಗದ ಶಾಂತಿಯ ತೋಟವಾಗಬೇಕೆಂಬುದು ನನ್ನ ಬಹುದಿನದ ಕನಸಾಗಿತ್ತು. ಅದರಂತೆ ನಾನು ಕಂದಾಯ ಸಚಿವ ನಾಗಿದ್ದ ವೇಳೆ, ಚಾಮರಾಜನಗರ ಬೈಪಾಸ್ ರಸ್ತೆಯಲ್ಲಿ 6 ಎಕರೆ 20 ಗುಂಟೆ ಸರ್ಕಾರಿ ಜಾಗವನ್ನು ಪತ್ತೆ ಹಚ್ಚಿ ವಾಲ್ಮೀಕಿ ಸಮುದಾಯ ಭವನ, ಬಾಬು ಜಗಜೀವನ ರಾಂ ಸಮುದಾಯ ಭವನ ಹಾಗೂ ಈಡಿಗ, ನಯನ ಕ್ಷತ್ರಿಯ, ಮಡಿವಾಳ ಜನಾಂಗದವರ ಸಮುದಾಯ ಭವನಕ್ಕೆ ಜಾಗ ನೀಡಲಾಗಿದೆ. ಈಗ ಉಪ್ಪಾರ ಸಮುದಾಯ ಭವನಕ್ಕೆ 20 ಗುಂಟೆ, ಗೆಜ್ಜಗಾರ ಸಮುದಾಯ ಭವನಕ್ಕೆ 8 ಗುಂಟೆ, 24 ಮನೆ ತೆಲುಗುಶೆಟ್ಟರ ಸಮುದಾಯ ಭವನಕ್ಕೆ 8 ಗುಂಟೆ ಜಾಗ ಮಂಜೂರು ಮಾಡಿಸಿ



ಹಕ್ಕುಪತ್ರ ವಿತರಣೆ ಮಾಡಲಾಗಿದೆ. ಭೋವಿ ಜನಾಂಗಕ್ಕೆ 8 ಗುಂಟೆ ವಿತರಣೆ ಮಾಡಿದಲ್ಲಿ ಎಲ್ಲಾ ವರ್ಗದವರಿಗೂ ಜಾಗ ವಿತರಣೆ ಮಾಡಿದಂತಾಗುತ್ತದೆ. ಇದೇ ಜಾಗದಲ್ಲಿ ಖಾಸಗಿ ಬಸ್ ನಿಲ್ದಾಣಕ್ಕೂ ಜಾಗ ನೀಡಲಿದ್ದೇವೆ ಎಂದರು.

ಮಾರ್ಚ್ ತಿಂಗಳಲ್ಲಿ ಕಾಮಗಾರಿ ಆರಂಭ: ಸಮಾನತೆ ಸಮುಚ್ಛಯ ನಿರ್ಮಾಣಕ್ಕೆ ಶ್ರೀಕಂಠೇಶ್ವರ ದೇವಾಲಯದ ಅನುದಾನ ಬಳಕೆ ಮಾಡಿಕೊಳ್ಳಲು ಮುಖ್ಯಮಂತ್ರಿಗಳು ಒಪ್ಪಿಗೆ ಸೂಚಿಸಿದ್ದು, ಈಗಾಗಲೇ ಪ್ರಕ್ರಿಯೆ ಪೂರ್ಣ ಗೊಂಡಿದೆ. ಮುಂದಿನ 2 ದಿನದಲ್ಲಿ ಜಿಲ್ಲಾಧಿಕಾರಿಗಳ ಖಾತೆಗೆ ಹಣ ಬರಲಿದ್ದು, ಏಜೆನ್ಸಿ ಮೂಲಕ ಅನುದಾನ ಒದಗಿಸಿ ಕಾಮಗಾರಿ ಆರಂಭಿಸಲಾಗುವುದು. 2 ಕೋಟಿ ಯಲ್ಲಿ ಉಪ್ಪಾರ ಸಮುದಾಯ ಭವನ ನಿರ್ಮಾಣ ವಾಗಲಿದೆ. ಈ ಸಮಾನತೆ ಸಮುಚ್ಛಯ ರಾಜ್ಯದಲ್ಲಿ ಎಲ್ಲೂ ಇಲ್ಲ. ನಂಜನಗೂಡಿನಲ್ಲಿ ಮೊದಲು ನಿರ್ಮಾಣ ಗೊಂಡು ರಾಜ್ಯಕ್ಕೆ ಮಾದರಿಯಾಗಲಿದೆ ಎಂದರು.

1500 ನಿವೇಶನ ಹಂಚಿಕೆ: ತಾಲೂಕಿನ ಮಹದೇವ ನಗರದ ಬಳಿ ಎಲ್ಲಾ ಜನಾಂಗದ ಬಡವರಿಗೂ ನಿವೇಶನ ಹಂಚಿಕೆಗೆ ಕ್ರಮವಹಿಸಿ ಪ್ರಕ್ರಿಯೆ ಪೂರ್ಣಗೊಂಡಿ ರುವುದಲ್ಲದೆ. ಫಲಾನುಭವಿಗಳ ಆಯ್ಕೆಯೂ ನಡೆದಿದೆ ಶೀಘ್ರದಲ್ಲೇ 1500 ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು ಎಂದರು.

ಒಕ್ಕಲಿಗರ ಭವನಕ್ಕೆ 10 ಲಕ್ಷ: ಒಕ್ಕಲಿಗರ ಭವನಕ್ಕೆ ಸಂಸದರ ನಿಧಿಯಿಂದ 10 ಲಕ್ಷ ಅನುದಾನ ನೀಡಲಾ ಗಿದೆ. ಈ ಭವನ ಪೂರ್ಣಗೊಳ್ಳಲು 5.5 ಕೋಟಿ ಬೇಕಾಗುತ್ತದೆ. ಆದ್ದರಿಂದ ಚುನಾವಣೆ ಮುಗಿದ ನಂತರ ಯಾರೇ ಮುಖ್ಯಮಂತ್ರಿಯಾದರೂ ಸರಿಯೆ ನಾನು ಪ್ರಸ್ತಾಪ ಸಲ್ಲಿಸಿ, ಭವನ ಪೂರ್ಣಗೊಳಿಸಿಕೊಡುವು ದಾಗಿ ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

ಐದು ವರ್ಷದಲ್ಲಿ ಎಲ್ಲಾ ಅಭಿವೃದ್ಧಿ ಪೂರ್ಣ

ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, 13 ಸಮು ದಾಯ ಭವನಗಳನ್ನು ನಿರ್ಮಿಸುವ ಮೂಲಕ ಸಮಾನತೆ ಸಮುಚ್ಛಯ ನಿರ್ಮಿಸಬೇಕೆಂಬುದು ಪ್ರಸಾದ್ ಅವರ 10 ವರ್ಷದ ಕನಸಾಗಿತ್ತು ಮುಂದಿನ ತಿಂಗಳಲ್ಲಿ ಕಾಮಗಾರಿ ಆರಂಭವಾಗುವ ಮೂಲಕ ಅದು ನನಸಾಗಲಿದೆ. ಬರೀ ಹಕ್ಕುಪತ್ರ ವಿತರಣೆ ಮಾಡುವುದು ನನಗೆ ಸಮಾಧಾನ ತಂದಿಲ್ಲ. ಅನುದಾನ ನೀಡಿದ್ದರೆ ಸಮಾಧಾನವಾಗುತ್ತಿತ್ತು. ವಾಲ್ಮೀಕಿ ಭವನ ಪೂರ್ಣಗೊಳ್ಳಲು ಹಣ ನೀಡಿದ್ದು ನಮ್ಮ ಬಿಜೆಪಿ ಸರ್ಕಾರದಲ್ಲಿ, ಅಲ್ಲದೇ ಜಗಜೀವನ ರಾಂ ಸಮುದಾಯ ಭವನ ಕಾಮಗಾರಿಯೂ ಕೂಡ ಪ್ರಗತಿಯಲ್ಲಿದೆ. ಉಪ್ಪಾರ ಸಮುದಾಯ ಭವನ ನಿರ್ಮಾಣಕ್ಕೆ 2 ಕೋಟಿ ಅನುದಾನ ಕೊಟ್ಟು ಮುಂದಿನ ತಿಂಗಳಲ್ಲಿ ಚಾಲನೆ ನೀಡಲಾಗುವುದು. ಮುಂದಿನ 5 ವರ್ಷದಲ್ಲಿ ಎಲ್ಲಾ ಕಾಮಗಾರಿ ಮುಕ್ತಾಯಗೊಂಡು ನಂಜನಗೂಡು ಸ್ಯಾಟಲೈಟ್ ಟೌನ್ ಆಗಿ ಅಭಿವೃದ್ಧಿ ಹೊಂದಲಿದೆ ಎಂದರು.

ಇದೇ ಸಂದರ್ಭ ಸಂಸದರ ಅನುದಾನದಲ್ಲಿ 5 ಲಕ್ಷ ವೆಚ್ಚದಲ್ಲಿ ರೋಟರಿ ಶಾಲೆ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು. 5 ಜನ ವಿಕಲಾಂಗರಿಗೆ ತ್ರಿಚಕ್ರ ಮೋಟಾರ್ ವಾಹನ ವಿತರಣೆ ಮಾಡಲಾಯಿತು.

ಇದೇ ಸಂದರ್ಭ ತಹಸೀಲ್ದಾರ್ ಎಂ.ಶಿವಮೂರ್ತಿ, ಸುಬ್ಬಣ್ಣ, ಯು.ಎನ್.ಪದ್ಮನಾಭರಾವ್, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗನಾಯಕ, ಎಸ್.ಎಂ.ಕೆಂಪಣ್ಣ, ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ಮುಖಂಡರಾದ ಹೆಮ್ಮರಗಾಲ ಸೋಮಣ್ಣ, ಶಿವಣ್ಣ, ಅಣ್ಣಯ್ಯಶೆಟ್ಟಿ, ಬಾಲಚಂದ್ರು, ಮಂಜುಕುಮಾರ್, ಚಿಕ್ಕಣ್ಣ, ಗಜೇಂದ್ರ, ದೊಡ್ಡಂಕ ಶೆಟ್ಟರು, ಕಾಳಪ್ಪ ಗ್ರಾಪಂ ಸದಸ್ಯರಾದ ಶಿವು, ಪುಟ್ಟಸ್ವಾಮಿ, ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.

ಮಾರಿಯಮ್ಮ ದೇವಸ್ಥಾನಕ್ಕೆ ಶಾಸಕ ಹೆಚ್‌ಪಿಎಂ ಭೇಟಿ



ಹುಣಸೂರು, ಫೆ.27– ನಾನು ಶಾಸಕನಾಗುವುದಕ್ಕೂ ಮುಂಚಿನಿಂದಲೂ ತಾಲೂಕಿನ ಬಹುತೇಕ ದೇವಸ್ಥಾನಗಳ ಅಭಿವೃದ್ಧಿಗೆ ನನ್ನ ತಾಯಿ ಹೆಸರಲ್ಲಿ ಹಣ ನೀಡುತ್ತಾ ಬಂದಿದ್ದು, ಇದರಲ್ಲಿ ಯಾವುದೇ ಸ್ವಾರ್ಥ ಇಲ್ಲ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದ ಶ್ರೀಕೋಲನೂರು ಮಾರಿಯಮ್ಮ ದೇವಸ್ಥಾನಕ್ಕೆ ಭೇಟಿ ನೀಡಿ, ಪೂಜೆ ಸಲ್ಲಿಸಿ, ಸ್ಥಳೀಯರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಅಲ್ಪಸಂಖ್ಯಾತ ಸಮುದಾಯಗಳ ಜನರು ಒಗ್ಗಟ್ಟು ಪ್ರದರ್ಶಿಸುವ ಮೂಲಕ ಸಮುದಾಯದ ಬೆಳವಣಿಗೆಗೆ ಕಾರಣರಾಗಬೇಕು ಎಂದು ಕಿವಿಮಾತು ಹೇಳಿದರು.

ಇದೇ ವೇಳೆ ಸ್ಥಳೀಯ ಜನತೆ ಮನವಿಗೆ ಸ್ಪಂದಿಸಿದ ಶಾಸಕರು, ದೇವಸ್ಥಾನದ ರಾಜ ಗೋಪುರ ಹಾಗೂ ಅಶ್ವಥಕಟ್ಟೆ ಅಭಿವೃದ್ಧಿಗೆ ತಮ್ಮ ತಾಯಿ ರತ್ನಮ್ಮ ಹೆಸರಲ್ಲಿ 5 ಲಕ್ಷ ರೂ. ನೀಡುವುದಾಗಿ ತಿಳಿಸಿ ಸ್ಥಳದಲ್ಲೇ ಒಂದು ಲಕ್ಷ ನೀಡಿದರು. ಜೊತೆಗೆ ಶಾಸಕರ ನಿಧಿಯಡಿ ಸಮುದಾಯ ಭವನಕ್ಕೆ 5 ಲಕ್ಷ ಮಂಜೂರು ಮಾಡಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ನಗರಸಭೆ ಸದಸ್ಯ ರಮೇಶ್, ಮುಖಂಡರಾದ ರಾಜಣ್ಣ, ಷಣ್ಮುಗಂ, ಮಣಿ, ಚಂದ್ರ, ದೊರೆಸ್ವಾಮಿ, ಈಶ್ವರ್, ಮಹಾಲಿಂಗ, ಗಜ, ಗೋಪಾಲ, ಪುಟ್ಟಿ, ಮಹೀಂದ್ರ, ಮಂಜುನಾಥ್ ಸೇರಿದಂತೆ ಇತರರಿದ್ದರು

ವರುಣಾದಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಶ್ರಮಿಸಿ

ದಾಸನೂರಲ್ಲಿ ಪ್ರಗತಿ ರಥ ಉದ್ಘಾಟಿಸಿದ ಕ್ಷೇತ್ರಾಧ್ಯಕ್ಷ ಕೆ.ಬಿ.ವಿಜಯಕುಮಾರ್



ತಿ.ನರಸೀಪುರ, ಫೆ.27– ಮುಂಬರುವ ಚುನಾವಣೆಯಲ್ಲಿ 150 ಕ್ಷೇತ್ರಗಳನ್ನು ಗೆಲ್ಲುವ ಗುರಿ ಹೊಂದಿರುವ ರಾಜ್ಯ ಬಿಜೆಪಿ ನಾಯಕರ ಆಶಯ ಈಡೇರಿಸಲು ಕಾರ್ಯಕರ್ತರು ಶ್ರಮಿಸಬೇಕು ಎಂದು ವರುಣಾ ಕ್ಷೇತ್ರದ ಅಧ್ಯಕ್ಷ ಕೆ.ಬಿ.ವಿಜಯಕುಮಾರ್ ತಿಳಿಸಿದರು.

ವರುಣಾ ವಿಧಾನಸಭಾ ಕ್ಷೇತ್ರದ ದಾಸ ನೂರು ಗ್ರಾಮದಲ್ಲಿ ಪ್ರಗತಿ ರಥ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನಪರ ಯೋಜನೆ, ಸಾಧನೆಗಳನ್ನು ಜನರಿಗೆ ತಿಳಿಸುವ ಉದ್ದೇ ಶದಿಂದ ಪ್ರತಿ ಬೂತ್‌ಗಳಿಗೆ ಪ್ರಗತಿ ರಥ ಸಂಚರಿಸಲಿದೆ. ಆ ಮೂಲಕ ಮುಂದಿನ ಚುನಾವಣೆಯಲ್ಲಿ ಮತ್ತೊಮ್ಮೆ ರಾಜ್ಯದಲ್ಲಿ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರಲು ಹಾಗೂ ವರುಣಾದಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲಿಸಲು ಪಣ ತೊಡಬೇಕು ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಚುನಾವಣಾ ಪೂರ್ವ ದಲ್ಲಿ ನೀಡಿದ್ದ ಭರವಸೆ ಈಡೇರಿಸಿವೆ. ಪ.ಜಾತಿ ಮತ್ತು ಪಂಗಡದವರಿಗೆ 75 ಯೂನಿಟ್ ಉಚಿತ ವಿದ್ಯುತ್, ನೇಕಾರ ಸಮ್ಮಾನ್ ನೆರವಿನ ಮೊತ್ತವನ್ನು 2 ರಿಂದ 5 ಸಾವಿರ ರೂ.ಗೆ ಹೆಚ್ಚಳ ಸೇರಿದಂತೆ ಪ.ಜಾತಿ ಮತ್ತು ವರ್ಗದವರಿಗೆ ಮೀಸಲಾತಿ ಹೆಚ್ಚಳ ಮಾಡಲಾಗಿದೆ. ಹಾಗಾಗಿ ಈ ಬಾರಿ ಕೇಂದ್ರ ಮತ್ತು ರಾಜ್ಯ ದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ತರಲು ಎಲ್ಲರೂ ಶ್ರಮಿಸಬೇಕೆಂದು ಕರೆ ನೀಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಂಗೂ ನಾಯಕ ಮಾತನಾಡಿ, ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲಿಸುವ ಸುಬಂಧ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರದ ಅಭಿವೃದ್ಧಿ ಕೆಲಸಗಳನ್ನು ಮತದಾರರಿಗೆ ಮನದಟ್ಟು ಮಾಡಿ ಬಿಜೆಪಿ ಪಕ್ಷವನ್ನು ಬೆಂಬಲಿಸು ವಂತೆ ಮನವೊಲಿಸಬೇಕು ಎಂದರು.

ಈ ಸಂದರ್ಭ ಬಿಜೆಪಿ ಜಿಲ್ಲಾ ಉಪಾ ಧ್ಯಕ್ಷ ಕಾಪು ಸಿದ್ದವೀರಪ್ಪ, ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷ ಸಿ.ಎಂ.ಮಹದೇವಯ್ಯ, ಯುವ ಮೋರ್ಚಾ ಅಧ್ಯಕ್ಷ ಮೋಹನ್ ಕುಮಾರ, ಕೌಲಂದೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಮಲ್ಲಣ್ಣ, ತಗಡೂರು ಮಹಾಶಕ್ತಿ ಕೇಂದ್ರ ಅಧ್ಯಕ್ಷ ನಗರ್ಲೆ ಮಹೇಶ, ಕ್ಷೇತ್ರ ಉಪಾಧ್ಯಕ್ಷ ರೇವಣ್ಣ, ಡಿ.ಕೆ.ಮಲ್ಲಣ್ಣ, ದಾಸನೂರು ಅಭಿ ಹಾಗೂ ಕಾರ್ಯ ಕರ್ತರು ಹಾಜರಿದ್ದರು.

ಬಿಎಸ್‌ವೈ ಹುಟ್ಟುಹಬ್ಬ: ಶ್ರೀಕಂಠೇಶ್ವರನಿಗೆ ವಿಶೇಷ ಪೂಜೆ



ನಂಜನಗೂಡು, ಫೆ.27– ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ 80ನೇ ಹುಟ್ಟುಹಬ್ಬದ ಅಂಗವಾಗಿ ಶಾಸಕ ಬಿ.ಹರ್ಷವರ್ಧನ್ ನಗರದ ಶ್ರೀಕಂಠೇಶ್ವರ ದೇವಾಲಯದಲ್ಲಿ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು.

ನಂತರ ಮಾತನಾಡಿದ ಅವರು, ಬಿ.ಎಸ್.ಯಡಿಯೂರಪ್ಪ ನವರು ರಾಜ್ಯ ಕಂಡ ಅತ್ಯುತ್ತಮ ರಾಜಕಾರಣಿ. ಅವರ ಸಂಘ ಟನೆಯಿಂದಾಗಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವದಲ್ಲಿದೆ. ಜೊತೆಗೆ ಮೊಟ್ಟ ಮೊದಲ ಬಾರಿಗೆ ರೈತರ ಬಜೆಟ್ ಮಂಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರ ಆಡಳಿತಾವಧಿಯಲ್ಲಿ ಬಡವರ, ದೀನ ದಲಿತರ ಪರ ಅನೇಕ ಯೋಜನೆಗಳನ್ನು ಜಾರಿಗೊಳಿಸಿ ರಾಜ್ಯವನ್ನು ಅಭಿವೃದ್ಧಿಪಥದತ್ತ ಕೊಂಡೊಯ್ದ ದಣಿವರಿಯದ ನಾಯಕರಾಗಿದ್ದಾರೆ. ಮುಂದಿನ ಚುನಾವಣೆಯಲ್ಲಿ ಅವರ ಆಶೀರ್ವಾದ, ಮಾರ್ಗದರ್ಶನದಲ್ಲಿ ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರ ಅಧಿಕಾರ ಹಿಡಿಯುವುದು ನಿಶ್ಚಿತ. ದೇವರು ಅವರಿಗೆ ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಶ್ರೀಕಂಠೇಶ್ವರನಲ್ಲಿ ಪ್ರಾರ್ಥಿಸಿ, ವಿಶೇಷ ಪೂಜೆ ಸಲ್ಲಿಸಿದ್ದೇನೆ ಎಂದರು.

ಇದೇ ವೇಳೆ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಮುಖಂಡರಾದ ಪುಟ್ಟಸ್ವಾಮಿ, ಶ್ರೀಕಂಠ, ಸಿದ್ದರಾಜು, ಬಿಜೆಪಿ ಕಾರ್ಯಕರ್ತರು ಇದ್ದರು.



ಹುಣಸೂರಿನ ತಾಪಂ ಕಚೇರಿಯಲ್ಲಿ ತಾಲೂಕು ಸ್ವೀಪ್ ಸಮಿತಿ ಮುಂಬರುವ ಚುನಾವಣೆಗೆ ಸಂಬಂಧಿಸಿದಂತೆ ಜಾಗೃತಿ ಅಭಿಯಾನ ನಡೆಸಿತು. ತಹಶೀಲ್ದಾರ್ ಡಾ.ಅಶೋಕ್ ಗ್ರಾಪಂಗಳಲ್ಲಿ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಪಿಡಿಓಗಳಿಗೆ ಮಾಹಿತಿ ನೀಡಿದರು. ಈ ವೇಳೆ ತಾಪಂ ಇಓ, ನರೇಗಾ ಸಹಾಯಕ ನಿರ್ದೇಶಕರು, ತಾಲೂಕು ಅಧಿಕಾರಿಗಳು ಹಾಗೂ ಪಂಚತಂತ್ರ ಸಹಾಯಕ ನಿರ್ದೇಶಕರು ಉಪಸ್ಥಿತರಿದ್ದರು.



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ 80ನೇ ಹುಟ್ಟುಹಬ್ಬದ ಅಂಗವಾಗಿ ಬಿಜೆಪಿ ಮುಖಂಡ ಡಾ.ಹೆಚ್.ವಿ.ಕೃಷ್ಣಸ್ವಾಮಿ ಹೆಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು. ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ಗುರುಸ್ವಾಮಿ, ಪ್ರಧಾನ ಕಾರ್ಯದರ್ಶಿಗಳಾದ ವಿವೇಕ್, ಚೆನ್ನಪ್ಪ, ಜಿಲ್ಲಾ ಸಹ ವಕ್ತಾರ ಸಿ.ಕೆ.ಗಿರೀಶ್, ಎಸ್‌ಸಿ ಮೋರ್ಚಾ ಅಧ್ಯಕ್ಷ ರಾಜು, ಉಪಾಧ್ಯಕ್ಷ ಗೋಪಾಲಯ್ಯ, ಕಾರ್ಯದರ್ಶಿ ಜವರಯ್ಯ, ಕೃಷ್ಣಸ್ವಾಮಿ ಆಪ್ತ ಸಹಾಯಕ ಶಿವ ಕುಮಾರ್, ಶಿವು, ಮಾದೇಶ್, ಸೋಮಚಾರಿ, ನಂಜುಂಡಸ್ವಾಮಿ, ಮಧುಸೂದನ್ ಗೌಡ, ಲೋಕೇಶ್, ಗುರುಸ್ವಾಮಿ, ಅಭಿ, ವೈದ್ಯನಾಥ್, ನಾಗರಾಮ್, ರಾಜೇಶ್, ಮಹದೇವಪ್ಪ, ಕುಮಾರ್, ಸಿದ್ದೇಗೌಡ, ಕೃಷ್ಣಕುಮಾರ್, ರಾಮುಲು, ಬಸವರಾಜು, ಬೆಟ್ಟಯ್ಯ, ಸೋಮಶೇಖರ್, ವಿರಾಜ್ ನಾಯಕ್, ವೈದ್ಯರಾದ ಸೋಮಣ್ಣ ಸೇರಿದಂತೆ ಬಿಜೆಪಿ ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

ಸರಗೂರು ಪಪಂ ಬಜೆಟ್ ಪೂರ್ವಭಾವಿ ಸಭೆ

ಪಟ್ಟಣದ ಅಭಿವೃದ್ಧಿಗೆ ಸಲಹೆ ನೀಡಿದ ಸಾರ್ವಜನಿಕರು



ಸರಗೂರು, ಫೆ.27– ಇಲ್ಲಿನ ಪಟ್ಟಣ ಪಂಚಾಯಿತಿಯಲ್ಲಿ ಸೋಮವಾರ ಅಧ್ಯಕ್ಷೆ ರಾಧಿಕಾ ಅಧ್ಯಕ್ಷತೆಯಲ್ಲಿ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಸಾರ್ವಜನಿಕರು ಪಟ್ಟಣದ ಅಭಿವೃದ್ಧಿಗೆ ಸಲಹೆ ಸೂಚನೆ ನೀಡಿದರು.

ಸಾರ್ವಜನಿಕರ ಅನುಕೂಲಕ್ಕಾಗಿ ಶವ ಸಾಗಿಸುವ ವಾಹನ ಖರೀದಿಸಬೇಕು. 12 ವಾರ್ಡ್‌ಗಳ ಚರಂಡಿ ನೀರು ನೇರವಾಗಿ ಕಪಿಲಾ ನದಿ ಸೇರುತ್ತಿದ್ದು, ತಡೆಗಟ್ಟಲು ಕ್ರಮ ವಹಿಸಬೇಕು. 40 ಲಕ್ಷ ವೆಚ್ಚದಲ್ಲಿ ಸಂತೇಮಾಳದಲ್ಲಿ ನೂತನವಾಗಿ ನಿರ್ಮಿ ಸಿರುವ ಕಟ್ಟಡಕ್ಕೆ ರೋಲಿಂಗ್ ಷಟರ್ ಹಾಕಿ ಬಾಡಿಗೆಗೆ ನೀಡಿದರೆ ಪಪಂಗೆ ಮತ್ತಷ್ಟು ಲಾಭ ಬರಲಿದ್ದು, ಇದರಿಂದ ಬಡವರಿಗೆ ಅನುಕೂಲವಾಗಲಿದೆ ಎಂದು ಸಭೆಯಲ್ಲಿದ್ದ ಸಾರ್ವಜನಿಕರು ಸಲಹೆ ನೀಡಿದರು.

ಪಟ್ಟಣದ ಹೃದಯ ಭಾಗದಲ್ಲಿರುವ ಜಯ ಚಾಮರಾಜೇಂದ್ರ ಒಡೆಯರ್ ಕ್ರೀಡಾಂ ಗಣದ ಅಭಿವೃದ್ಧಿಗೆ ಪೂರಕ ಅನುದಾನ ಮೀಸಲಿಡಬೇಕು. ಇಲ್ಲವಾದಲ್ಲಿ ಕ್ರೀಡೆಗೆ ಹಿನ್ನಡೆಯಾಗಲಿದೆ. ಅಲ್ಲದೆ ಪಟ್ಟಣದ ಮುಖ್ಯ ರಸ್ತೆಯಲ್ಲಿ ಝೀಬ್ರಾ ಕ್ರಾಸಿಂಗ್ ಹಾಕಿಸಬೇಕು ಎಂದರು.

ಮುಖ್ಯಾಧಿಕಾರಿ ಕೆ.ಪಿ.ವಸಂತಕುಮಾರಿ ಮಾತನಾಡಿದರು. ಪಪಂ ಉಪಾಧ್ಯಕ್ಷ ವಿನಾ ಯಕ ಪ್ರಸಾದ್, ಸ್ಥಾಯಿ ಸಮಿತಿ ಅಧ್ಯಕ್ಷ ಉಮಾರಾಮು, ಸದಸ್ಯರಾದ ಎಸ್.ಎಲ್. ರಾಜಣ್ಣ, ಹೇಮಾವತಿ, ಚೈತ್ರಾ, ಸಣ್ಣತಾ ಯಮ್ಮ, ಶ್ರೀನಿವಾಸ್, ನೂರಾಳಸ್ವಾಮಿ, ದಿವ್ಯಾ, ಶಿವಕುಮಾರ್, ಚಲುವಕೃಷ್ಣ, ರಂಗಸ್ವಾಮಿ, ಪ್ರತಾಪ್, ರಮೇಶ್, ವರ್ತಕ ಮಂಡಳಿ ಅಧ್ಯಕ್ಷ ಎಸ್.ಎಂ.ಶ್ರೀನಿವಾಸ್, ಕಾರ್ಯದರ್ಶಿ ವೆಂಕ ಟೇಶ್, ಕೆ.ಸುರೇಶ್ ಜೈನ್, ನಟರಾಜ್, ಸವಿತಾ ಸಮಾಜದ ಅಧ್ಯಕ್ಷ ಬಸವರಾಜು, ಕೃಷ್ಣ, ರಸ್ತೆ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಕೃಷ್ಣ, ಆಟೋ ಜೋಗಪ್ಪಸೇರಿದಂತೆ ಇನ್ನಿತರರಿದ್ದರು.

ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ತಿ.ನರಸೀಪುರ, ಫೆ27– ಪುರಸಭೆ ವ್ಯಾಪ್ತಿಯ ಆಲಗೂಡು ಗ್ರಾಮದ ಸಮಗ್ರ ಅಭಿವೃದ್ಧಿಗೆ ಶಾಸಕ ಡಾ.ಯತೀಂದ್ರ ಕೊಡುಗೆ ಅಪಾರ ಎಂದು ಪುರಸಭೆ ನಿಕಟಪೂರ್ವ ಅಧ್ಯಕ್ಷ ಎಸ್.ಮದನ್‌ರಾಜ್ ತಿಳಿಸಿದರು.

ಶಾಸಕ ಡಾ.ಯತೀಂದ್ರ ಅವರ 19 ಲಕ್ಷ ರೂ. ಅನುದಾನದಲ್ಲಿ ಗ್ರಾಮದ ಲಕ್ಷ್ಮೀ ದೇವ ಸ್ಥಾನದ ಹಿಂಭಾಗದ ರಸ್ತೆ ಹಾಗೂ ಸಿಸಿ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಶಾಸಕರು ಜನಪರ ಕಾಳಜಿಯುಳ್ಳವರಾ ಗಿದ್ದು, ಹಳ್ಳಿಗಳು ಅಭಿವೃದ್ಧಿಯಾದರೆ ದೇಶವೇ ಅಭಿವೃದ್ಧಿಯಾದಂತೆ ಎಂಬ ಪರಿಕಲ್ಪನೆಯಡಿ ಕ್ಷೇತ್ರದ ಪ್ರತಿಯೊಂದು ಗ್ರಾಮದ ಪ್ರತಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಪಡಿಸುವ ಮೂಲಕ ಗ್ರಾಮ ವಿಕಾಸ ಮಾಡಲು ಮುಂದಾಗಿ ದ್ದಾರೆ. ಕಾಮಗಾರಿ ವೇಳೆ ಗ್ರಾಮಸ್ಥರು ಮುಂದೆ ನಿಂತು ಗುಣಮಟ್ಟದ ಕಾಮಗಾರಿ ಮಾಡಿ ಸಬೇಕು. ಗುತ್ತಿಗೆದಾರರು ಗುಣಮಟ್ಟದ ಸಿಮೆಂಟ್ ಹಾಗೂ ಇನ್ನಿತರೆ ಸಾಮಗ್ರಿ ಬಳಸಿ ದರೆ ಕಾಮಗಾರಿ ದೀರ್ಘ ಕಾಲ ಉಳಿಯು ವುದು. ಇದರಿಂದ ಸರ್ಕಾರದ ಅನುದಾನ ಪ್ರಯೋಜನವಾಗುವುದು ಎಂದರು.

ದೇಶ ಅಭಿವೃದ್ಧಿಯಾಗಲು ಮೊದಲು ಗ್ರಾಮಗಳ ಅಭಿವೃದ್ಧಿಯಾಗಬೇಕು. ಗ್ರಾಮೀಣ ಪ್ರದೇಶದಲ್ಲಿ ಮೂಲ ಸೌಲಭ್ಯ ಸಮರ್ಪಕ ವಾಗಿ ದೊರೆತಾಗ ಮಾತ್ರ ಜನರು ಅಭಿವೃದ್ಧಿ ಹೊಂದಲು ಸಾಧ್ಯ. ಹೀಗಾಗಿ ಕ್ಷೇತ್ರದ ಪ್ರತಿ ಯೊಂದು ಗ್ರಾಮಗಳ ಅಭಿವೃದ್ಧಿಗೆ ಶಾಸಕರು ಪಣ ತೊಟ್ಟು ಕೆಲಸ ಮಾಡುತ್ತಿದ್ದಾರೆ. ಗ್ರಾಮೀಣ ಜನರಿಗೆ ಸ್ಪಂದಿಸುವ ಶಾಸಕರಿಗೆ ಅಭಿವೃದ್ಧಿಯೇ ಮೂಲಮಂತ್ರವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ, ಕುಡಿಯುವ ನೀರು, ಚರಂಡಿ, ವಿದ್ಯುತ್ ಸೇರಿದಂತೆ ವಿವಿಧ ಮೂಲ ಸೌಲಭ್ಯ ಒದಗಿಸುವಲ್ಲಿ ಶಾಸಕರ ಶ್ರಮ ಸ್ಮರಣೀಯ ಎಂದರು.

ಪುರಸಭಾಧ್ಯಕ್ಷನಾಗಿದ್ದ ವೇಳೆ ಶಾಸಕರು ನನಗೆ ನೀಡಿದ ಪ್ರೋತ್ಸಾಹ ಮರೆಯಲಾ ಗದು. ಪಟ್ಟಣ ವ್ಯಾಪ್ತಿಯ ಹದಗೆಟ್ಟ ರಸ್ತೆಗಳ ಅಭಿವೃದ್ಧಿಗೆ ಕೋಟ್ಯಾಂತರ ರೂ. ಅನು ದಾನ ನೀಡಿ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಸ್ಪಂದಿಸಿದ್ದ ಅವರ ಸಹಕಾರ ಎಂದಿಗೂ ಮರೆಯಲಾಗದು ಎಂದು ಸ್ಮರಿಸಿದರು.

ಈ ವೇಳೆ ಗ್ರಾಮದ ಯಜಮಾನರಾದ ಕರಿಯಪ್ಪ ಮೆಕಟುರಾಜು, ರಾಚಪ್ಪಾಜಿ, ಮುಖಂ ಡರಾದ ಚಂದ್ರು, ನಂಜುಂಡಿ, ಪ್ರಕಾಶ್, ಸೋಮಣ್ಣ, ದಿನಕರ್, ಕೃಷ್ಣ, ಪ್ರಭು, ರಾಶಿ, ಮಟನ್ ಸಂತೋಷ್, ಟೈಲರ್ ನರಸಿಂಹ, ಕಡೆಹಟ್ಟಿ ರಾಜು ಸೇರಿದಂತೆ ಯಜ ಮಾನರು, ಗ್ರಾಮಸ್ಥರು ಹಾಜರಿದ್ದರು.



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ 80ನೇ ಹುಟ್ಟುಹಬ್ಬದ ಅಂಗವಾಗಿ ತಿ.ನರಸೀಪುರದ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಬಿಜೆಪಿ ಕಾರ್ಯಕರ್ತರು ಹಣ್ಣು, ಬ್ರೆಡ್ ವಿತರಿಸಿದರು. ಬಿಜೆಪಿ ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಕರೋಹಟ್ಟಿ ಮಹದೇವಯ್ಯ, ಪುರಸಭೆ ಸದಸ್ಯ ಎನ್.ಲೋಕೇಶ್, ಜಿಲ್ಲಾ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಚೌಹಳ್ಳಿ ಸಿದ್ದರಾಜು, ಸೋಸಲೆ ಶಕ್ತಿ ಕೇಂದ್ರದ ಅಧ್ಯಕ್ಷ ಪುಟ್ಟಸ್ವಾಮಿ, ಮುಖಂಡರಾದ ಶಿವಕುಮಾರ್, ಕೃಷ್ಣ, ಅನಿಲ್, ಮಂಜು, ವೆಂಕಟರಮಣಶೆಟ್ಟಿ, ಕಿಟ್ಟಿ, ಮಹೇಶ್, ರಮೇಶ್ ಮತ್ತಿತರರಿದ್ದರು.



ಬಿಜೆಪಿ ಜಿಲ್ಲಾ ಎಸ್‌ಸಿ ಮೋರ್ಚಾ ಉಪಾಧ್ಯಕ್ಷರಾಗಿ ನಿಲುವಾಗಿಲು ಗೋಪಾಲಯ್ಯ, ಕಾರ್ಯದರ್ಶಿಯಾಗಿ ಜವರಯ್ಯ ಅವರನ್ನು ನೇಮಕ ಮಾಡಿ ಬಿಜೆಪಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್ ನೇಮಕಾತಿ ಪತ್ರ ವಿತರಿಸಿದರು. ಈ ವೇಳೆ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮಹದೇವಯ್ಯ, ರಾಜು, ಸುನಂದರಾಜು, ಸಿ.ಚೆಲುವಯ್ಯ ನಾಗರಾಜು ಇತರರಿದ್ದರು.

ನಿಂಗಮ್ಮ ನಿಧನ



ಪಿರಿಯಾಪಟ್ಟಣ, ಫೆ.27– ತಾಲೂಕಿನ ಬೆಟ್ಟದಪುರ ನಿವಾಸಿ ರಾಮೇಗೌಡರ ತಾಯಿ ನಿಂಗಮ್ಮ(75) ಭಾನುವಾರ ಸಂಜೆ ನಿಧನ ರಾದರು. ಮೃತರು ಆರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ತಾಲೂಕಿನ ದೊಡ್ಡಮಾಗಳಿ ಗ್ರಾಮದಲ್ಲಿ ನೆರವೇರಿತು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ರಿಂಗ್ ರಸ್ತೆಯುದ್ದಕ್ಕೂ ಸ್ವಚ್ಛತಾ ಕಾರ್ಯ ಆರಂಭ

● ಪಾಲಿಕೆಯ ಆಯಾಯ ವಲಯ ಕಚೇರಿ ಅಧಿಕಾರಿಗಳ ನೇತೃತ್ವದಲ್ಲಿ ಪೌರ ಕಾರ್ಮಿಕರಿಂದ ನಾನಾ ರೀತಿಯ ತ್ಯಾಜ್ಯ ತೆರವು ● ಪದೇ ಪದೆ ಕಸ ತಂದು ಸುರಿಯುತ್ತಿರುವುದಕ್ಕೆ ಕಡಿವಾಣ ಹಾಕಲು ಆಗ್ರಹ ● ಪೊಲೀಸ್ ಗಸ್ತು, ಸಿಸಿ ಕ್ಯಾಮರಾ ಕಣ್ಗಾವಲು, ಕ್ರಿಮಿನಲ್ ಕೇಸ್ ದಾಖಲಿಸಲು ನಾಗರಿಕರ ಒತ್ತಾಯ



ಬೋಗಾದಿ ಬಳಿ ರಿಂಗ್ ರಸ್ತೆಬದಿ ಸುರಿದಿದ್ದ ಕಟ್ಟಡ ತ್ಯಾಜ್ಯವೂ ಸೇರಿದಂತೆ ನಾನಾ ರೀತಿಯ ಕಸ ತೆರವುಗೊಳಿಸುತ್ತಿರುವುದು. ಚಿತ್ರದಲ್ಲಿ ಪಾಲಿಕೆ ವಲಯ ಕಚೇರಿ–3ರ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ ಅವರನ್ನು ಕಾಣಬಹುದು.

ಮೈಸೂರು, ಫೆ.27(ಆರ್‌ಕೆ)– ಮೈಸೂರಿನ ಹೊರ ವರ್ತುಲ ರಸ್ತೆಯ (ರಿಂಗ್ ರಸ್ತೆ) ಇಕ್ಕೆಲಗಳಲ್ಲಿ ಸುರಿದಿರುವ ಕಟ್ಟಡ ತ್ಯಾಜ್ಯವೂ ಸೇರಿದಂತೆ ನಾನಾ ರೀತಿಯ ಕಸದ ರಾಶಿ ತೆರವು ಕಾರ್ಯಾಚರಣೆ ಇಂದಿನಿಂದ ಆರಂಭವಾಗಿದೆ. ಸಂಸದ ಪ್ರತಾಪ್ ಸಿಂಹ ಮತ್ತು ಮೇಯರ್ ಶಿವಕುಮಾರ್ ಇತ್ತೀಚೆಗೆ ಪಾಲಿಕೆ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಪಾಲಿಕೆ ವ್ಯಾಪ್ತಿಗೆ ಬರುವ ರಿಂಗ್ ರಸ್ತೆ ಬದಿ ಸ್ವಚ್ಛತಾ ಅಭಿಯಾನ ಮಾಡಿ ನಾನಾ ರೀತಿಯ ತ್ಯಾಜ್ಯ ತೆರವುಗೊಳಿಸುವಂತೆ ಸೂಚನೆ ನೀಡಿದ್ದರು. ಅದರಂತೆ ಇಂದು ಬೆಳಗ್ಗೆಯಿಂದ ಏಕ ಕಾಲದಲ್ಲಿ ತಮ್ಮ ವ್ಯಾಪ್ತಿಗೆ ಬರುವ ರಿಂಗ್ ರಸ್ತೆಯಲ್ಲಿ ಸಾರ್ವಜನಿಕರು ರಾತ್ರೋರಾತ್ರಿ ಕದ್ದು ಮುಚ್ಚಿ ತಂದು ಸುರಿದಿದ್ದ ತ್ಯಾಜ್ಯವನ್ನು, ಪಾಲಿಕೆಯ 6 ವಲಯ ಕಚೇರಿ ವಲಯಾಧಿಕಾರಿಗಳು, ಅಭಿವೃದ್ಧಿ ಅಧಿಕಾರಿಗಳ ನೇತೃತ್ವದಲ್ಲಿ ಪೌರಕಾರ್ಮಿಕರು, ಜೆಸಿಬಿ, ಟ್ರಕ್‌ಗಳನ್ನು ಬಳಸಿ ತೆರವು ಕಾರ್ಯಾಚರಣೆ ಆರಂಭಿಸಿದ್ದಾರೆ. 42.5 ಕಿ.ಮೀ. ಉದ್ದದ ಮೈಸೂರು ಹೊರ ವರ್ತುಲ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸೇರಿದೆ. ಆದರೆ, ಅಭಿವೃದ್ಧಿ ಮತ್ತು ರಸ್ತೆ ನಿರ್ವಹಣೆಗೆ ಕೇಂದ್ರದ ಅನುದಾನ ಬಳಕೆ ಮಾಡಬಹುದೇ ಹೊರತು, ಕಸ ಹಾಕದಂತೆ ನಿಯಂತ್ರಣ, ಸ್ವಚ್ಛತೆಗೆ ಹಣ ಖರ್ಚು ಮಾಡಲು ಅವಕಾಶವಿಲ್ಲ. ಮೈಸೂರು ಮಹಾನಗರ ಪಾಲಿಕೆಗೆ ಈ ಜವಾಬ್ದಾರಿ ವಹಿಸಲಾಗಿದೆ. ಸಂಸದ ಪ್ರತಾಪ್ ಸಿಂಹ ಅವರೇ ಆಸಕ್ತಿ ವಹಿಸಿ ಹಲವು ಬಾರಿ ರಿಂಗ್ ರಸ್ತೆ ಬದಿಯಲ್ಲಿ ಸುರಿದಿದ್ದ ನಾನಾ ತ್ಯಾಜ್ಯ ತೆರವುಗೊಳಿಸಿ, ಸರಹದ್ದಿನ ಠಾಣಾ ಪೊಲೀಸರು ಕಸ ಸುರಿಯುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಕಾನೂನು ರೀತ್ಯಾ ಕ್ರಮ ಜರುಗಿಸುವಂತೆ ನಿರ್ದೇಶನ ನೀಡಿದ್ದರಾದರೂ ರಾತ್ರೋರಾತ್ರಿ ಜನರೇ ಕಸ ತಂದು ಸುರಿಯುತ್ತಿದ್ದರಿಂದ ಮತ್ತೊಮ್ಮೆ ಸ್ವಚ್ಛತಾ ಕಾರ್ಯ ಕೈಗೊಂಡು ಕಸ ತೆರವುಗೊಳಿಸಬೇಕೆಂದು ಅಧಿಕಾರಿಗಳಿಗೆ ತಾಕೀತು ಮಾಡಿದ್ದರು. ಜಿಲ್ಲಾಡಳಿತ, ಮುಡಾ ಹಾಗೂ ಮಹಾನಗರ ಪಾಲಿಕೆಯಿಂದ ಈ ಹಿಂದೆಯೂ ಹಲವು ಬಾರಿ ರಿಂಗ್ ರಸ್ತೆ ಸ್ವಚ್ಛತಾ ಅಭಿಯಾನ ನಡೆಸಲಾಗಿತ್ತಾದರೂ ತೆರವುಗೊಳಿಸಿದ ಮರುದಿನವೇ ಮತ್ತೆ ಕಸ ಪ್ರತ್ಯಕ್ಷವಾಗುತ್ತಿತ್ತು. ಪರಿಣಾಮ ಅಲ್ಲಿನ ನಿವಾಸಿಗಳು ಹಾಗೂ ರಿಂಗ್ ರಸ್ತೆ ಬಳಕೆದಾರರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದರಿಂದ ಈ ಸಮಸ್ಯೆಗೆ ಖಾಯಂ ಪರಿಹಾರ ಕಂಡುಹಿಡಿಯಬೇಕೆಂದು ಸಂಸದರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಕಸ ಸುರಿಯುವವರನ್ನು ಪತ್ತೆ ಮಾಡಿ ಕ್ರಿಮಿನಲ್ ಕೇಸ್ ಹಾಕಿ, ದಂಡ ವಸೂಲಿ ಮಾಡಲು ರಿಂಗ್ ರೋಡ್ ಉದ್ದಕ್ಕೂ ಸಿಸಿ ಟಿವಿ ಕ್ಯಾಮರಾ ಅಳವಡಿಸಲು ಮುಂದಾಗಿರುವ ಪಾಲಿಕೆಯು, ಅದರಿಂದ ಅಪಘಾತ, ಮದ್ಯಪಾನ ಮಾಡಿ ಬಾಟಲಿಗಳನ್ನು ಬಿಸಾಡುವುದು, ದರೋಡೆ, ಸುಲಿಗೆಯಂತಹ ಪ್ರಕರಣಗಳನ್ನೂ ಪತ್ತೆ ಮಾಡಬಹುದೆಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ರಿಂಗ್ ರೋಡ್‌ಗೆ ಹೊಂದಿಕೊಂಡಂತಿರುವ ಬಾರ್ ಅಂಡ್ ರೆಸ್ಟೋರೆಂಟ್, ವಸತಿ ಬಡಾವಣೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ವಿಲೇವಾರಿಗೆ ಅಗತ್ಯ ಸೌಲಭ್ಯಗಳಿಲ್ಲದಿರುವುದರಿಂದ ಜನರು ರಿಂಗ್ ರಸ್ತೆಯ ಸರ್ವಿಸ್ ರೋಡ್‌ಗೆ ರಾತ್ರೋರಾತ್ರಿ ತ್ಯಾಜ್ಯಗಳನ್ನು ತಂದು ಸುರಿಯುತ್ತಿರುವುದರಿಂದ ಈ ಸಮಸ್ಯೆ ಉಂಟಾಗುತ್ತಿದೆ ಎಂದು ನಿವಾಸಿಗಳು ದೂರಿದ್ದಾರೆ.

ಪ್ರಧಾನಿ ಮೋದಿ ಪ್ರಶಂಸೆಗೆ ಪಾತ್ರವಾದ ಕೊಳ್ಳೇಗಾಲದ ಮಂಜುನಾಥರ 'ಮಲಗು ಕಂದ' ಲಾಲಿ ಹಾಡು



ಮಂಜುನಾಥ ಮತ್ತು ನರೇಂದ್ರಮೋದಿ

ಮೈಸೂರು, ಫೆ.27– ಅಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಲಾಲಿ ಹಾಡು ಸ್ಪರ್ಧೆ ಯಲ್ಲಿ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲದ ಎಲ್‌ಐಸಿ ಏಜೆಂಟ್ ಮಂಜುನಾಥ್ ಅವರ 'ಮಲಗು ಕಂದ' ಲಾಲಿ ಹಾಡಿಗೆ ಪ್ರಥಮ ಬಹುಮಾನ ಲಭಿಸಿದ್ದು, ಮಂಜುನಾಥ್ ಅವರು ರಾಷ್ಟ್ರೀಯ ಮನ್ನಣೆ ಜೊತೆಗೆ 6 ಲಕ್ಷ ರೂ. ಬಹುಮಾನ ಪಡೆದಿದ್ದಾರೆ. ಪ್ರಧಾನಿ ಮೋದಿಯವರು ಭಾನುವಾರದಂದು ಮನ್ ಕೀ ಬಾತ್‌ನಲ್ಲಿ ಈ ಹಾಡಿಗೆ ಅತೀವ ಮೆಚ್ಚುಗೆ ಸೂಚಿಸಿದ್ದರು. ಪ್ರಧಾನಿ ಮೆಚ್ಚುಗೆಗೆ ಪಾತ್ರವಾದ ಮಂಜುನಾಥರ **ಲಾಲಿ ಹಾಡಿದು;**

ಮಲಗು ಕಂದ ಮಲಗು ಕೂಸೆ,
ಮಲಗು ನನ್ನ ಜಾಣ ಮರಿಯೇ,
ಹಗಲು ಕಳೆದು ಇರುಳು ಮೆರೆದು,
ನಿದಿರೆ ದೇವಿ ಬರುವಳಯ್ಯ,
ತಾರೆಗಳ ತೋಟದಿಂದ
ಕನಸ ಕೊಯ್ದು ಬರುವಳಯ್ಯ...
ಜೋ.. ಜೋ.. ಜೋ... ಜೋ..
ಜೋ.. ಜೋ... ಜೋ... ಜೋ..

ಎನಿತು ಸದ್ದು ಏನು ಮುದ್ದು
ಬೀಗೆ ಮೆರೆವೆ ಎದೆಯ ಗೆದ್ದು
ಜಗವೇ ಮಲಗಿ ನಿದ್ದೆಗ್ಹೋಯ್ತು

ಮುಗಿಯದೇನು ನಿನ್ನ ಆಟ
ಮಲಗು ಚಿನ್ನ ಮುತ್ತು ರತ್ನ
ಪಚ್ಚೆ ನೀಲ ಕೆಂಪು ಹವಳ
ಜೋ.. ಜೋ... ಜೋ... ಜೋ..
ಜೋ.. ಜೋ... ಜೋ... ಜೋ..

ನಗೆಯಲೇನು ದೇವಗಾನ
ನಿಡುಲಿಹುದು ದುಗ್ಧೆಯ ಪಾನ
ಸುಳಿದ ಏಳೊ ಅಲೆಗಳಲ್ಲೂ
ಕಂದ ಕೇಳೋ ನಿನದೆ ಧ್ಯಾನ
ಹಾಳು ಮೂಳು ಕಣ್ಣು ತಾಗಿ
ಉದರಬೇನೆ ಬಾರದಿರಲಿ

ಜೋ.. ಜೋ... ಜೋ... ಜೋ..
ಜೋ.. ಜೋ... ಜೋ... ಜೋ..

ಒಡಲಿಗೊಲಿವ ತಾಯ ಸಿರಿಯೇ
ಎದೆಯಲೇಳೊ ಹೊನ್ನೆ ತೆರೆಯೆ
ಉಸಿರಿಲ್ಲೂ ಹಸಿರು ಮೀಟೊ
ತನ್ನೊಲುಮೆಯ ಗಿಳಿಯಗೀತೆ
ಇಂದು ಸಾಕು ನಾಳೆಗಿರಲಿ
ಮತ್ತೆ ಮೂಡೂ ಉದಯನೊಡನೆ..
ಜೋ.. ಜೋ... ಜೋ... ಜೋ..
ಜೋ.. ಜೋ... ಜೋ... ಜೋ..

ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆಯಾಗಿ ನಟಿ ಖುಷ್ಬೂ ನಾಮನಿರ್ದೇಶನ



ಚೆನ್ನೈ, ಫೆ27– ತಮಿಳುನಾಡು ಭಾರತೀಯ ಜನತಾ ಪಕ್ಷದ ಅಧ್ಯಕ್ಷ ಕೆ. ಅಣ್ಣಾಮಲೈ ಅವರು, ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯೆ, ನಟಿ ಖುಷ್ಬು ಅವರನ್ನು ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ ಎಂದು ಸೋಮವಾರ ಹೇಳಿದ್ದಾರೆ.

ಎನ್‌ಸಿಡಬ್ಲ್ಯು ನಿರ್ದೇಶಕರು ಹೊರಡಿಸಿದ ಆದೇಶದಲ್ಲಿ ನಾಮ ನಿರ್ದೇಶನವು ಅಧಿಕಾರ ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಅಥವಾ 65 ವರ್ಷ ವಯಸ್ಸಿನವರೆಗೆ ಇರಲಿದೆ ಎಂದು ಹೇಳಿದೆ. ಎನ್‌ಸಿಡಬ್ಲ್ಯು ಸದಸ್ಯ ಸ್ಥಾನಕ್ಕೆ ನಾಮನಿರ್ದೇಶನಗೊಂಡಿರುವ ಖುಷ್ಬೂ ಅವರನ್ನು ಅಣ್ಣಾಮಲೈ ಅಭಿನಂದಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಇದು ಅವರ ಪಟ್ಟುಬಿಡದ ಅನ್ವೇಷಣೆ ಮತ್ತು ಮಹಿಳೆಯರ ಹಕ್ಕುಗಳಿಗಾಗಿ ನಿರಂತರ ಹೋರಾಟದ ಫಲ!' ಎಂದಿದ್ದಾರೆ. ಅಣ್ಣಾಮಲೈ ಯಾವಾಗಲೂ ನನಗೆ ಉತ್ತಮ ಪ್ರೋತ್ಸಾಹ ನೀಡುತ್ತಿದ್ದಾರೆ ಎಂದು ಖುಷ್ಬೂ ಪ್ರತಿ ಕ್ರಿಯಿಸಿದ್ದಾರೆ. ಪ್ರತಿಸ್ಪರ್ಧಿ ರಾಜಕೀಯ ನಾಯಕರ ವಿರುದ್ಧ ಕಿಡಿಕಾರಿರುವ ಖುಷ್ಬು ಸುದ್ದಿಯಲ್ಲಿದ್ದಾರೆ.

ಮಾ.1, 2 ರಂದು ನೀರು ಸರಬರಾಜಿನಲ್ಲಿ ವ್ಯತ್ಯಯ

ಮೈಸೂರು, ಫೆ27–ಮೈಸೂರು ನಗರದ ಜೆ.ಪಿ.ನಗರ ಹೊರವರ್ತುಲ ರಸ್ತೆಯ ರೈಲ್ವೆ ಬ್ರಿಡ್ಜ್ ಅಗಲೀಕರಣವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಕೈಗೊಳ್ಳಲಾಗುತ್ತಿದ್ದು, ಮುಖ್ಯ ನೀರು ಸರಬರಾಜು ಕೊಳವೆ ಮಾರ್ಗವನ್ನು ಸ್ಥಳಾಂತರಿಸಿ, ಜೋಡಣೆ ಕಾಮಗಾರಿಯನ್ನು ಮಾ.1 ಮತ್ತು 2ರಂದು ಹಮ್ಮಿಕೊಳ್ಳಲಾಗಿದೆ.

ಹಾಗಾಗಿ ಮೈಸೂರಿನ ವಾರ್ಡ್ ನಂ.45ರಿಂದ 51(ಶಾರದಾದೇವಿ ನಗರ, ದಟ್ಟಗಳ್ಳಿ 3ನೇ ಹಂತ, ಕುವೆಂಪುನಗರ, ಜಯನಗರ, ಲಕ್ಷ್ಮೀಪುರಂ, ಸುಣ್ಣದಕೇರಿ, ಅಗ್ರಹಾರ) ಹಾಗೂ 57ರಿಂದ 65(ಗುಂಡೂರಾವ್‌ನಗರ, ಚಾಮುಂಡಿಪುರಂ, ಕೃಷ್ಣಮೂರ್ತಿಪುರಂ, ಕುವೆಂಪುನಗರ ಸಿಐಟಿಬಿ, ರಾಮಕೃಷ್ಣನಗರ, ಕುವೆಂಪುನಗರ ಎಂ.ಬ್ಲಾಕ್, ಅಶೋಕಪುರಂ, ವಿದ್ಯಾರಣ್ಯಪುರಂ ಭಾಗಶಃ ಪ್ರದೇಶ, ವಿಶ್ವೇಶ್ವರನಗರ, ಜೆ.ಪಿ.ನಗರ, ಅರವಿಂದನಗರ, ಶ್ರೀರಾಂಪುರ) ಹಾಗೂ ಇತರೆ ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಈ ಭಾಗದ ಸಾರ್ವಜನಿಕರು ಸಹಕರಿಸುವಂತೆ ಮೈಸೂರ ನಗರ ಪಾಲಿಕೆಯ ನೀರು ಸರಬರಾಜು ಮತ್ತು ಒಳಚರಂಡಿ ಪೂರ್ವ ವಿಭಾಗದ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ನಿಧಿ ಆಪ್ಕೆ ನಿಕಟ್ 2.0' ಅಡಿ ಕಾರ್ಮಿಕರಿಗೆ ಭವಿಷ್ಯ ನಿಧಿ ಮಾಹಿತಿ



ಮೈಸೂರು, ಫೆ.27(ಎಂಕೆ)– ನಂಜನಗೂಡಿನ ಕೈಗಾರಿಕಾ ಪ್ರದೇಶದಲ್ಲಿರುವ ಇಂಡಸ್ಟ್ರಿಸ್ ಅಸೋಸಿಯೇಷನ್‌ನಲ್ಲಿ ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ ಮೈಸೂರು ಪ್ರಾದೇಶಿಕ ಕಚೇರಿ ವತಿಯಿಂದ 'ನಿಧಿ ಆಪ್ಕೆ ನಿಕಟ್ 2.0' ಯೋಜನೆಯಡಿ ಜಿಲ್ಲಾ ವ್ಯಾಪ್ತಿಯ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ನಂಜನಗೂಡು ಇಂಡಸ್ಟ್ರೀಸ್ ಅಸೋಸಿಯೇಷನ್ ಅಧ್ಯಕ್ಷ ರಾಮ್ ಪ್ರಸಾದ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ವೇಳೆ ಮೈಸೂರು ಪ್ರಾದೇಶಿಕ ಕಚೇರಿಯ ಹಣಕಾಸು ಅಧಿಕಾರಿ ಎ.ಬಾಲಾಜಿ, ಡಿಎನ್‌ಓ ಎಸ್.ಸಂಪತ್‌ಕುಮಾರ್, ಸುಭಾಷ್ ಕುಮಾರ್ ಭವಿಷ್ಯ ನಿಧಿ ಸದಸ್ಯರು, ಕಾರ್ಮಿಕರಿಗೆ ಭವಿಷ್ಯ ನಿಧಿ ಕುರಿತು ಮಾಹಿತಿ ನೀಡಿದರು. ಅಲ್ಲದೆ ಕುಂದುಕೊರತೆಗಳಿಗೆ ಸ್ಥಳದಲ್ಲೇ ಪರಿಹಾರ ನೀಡಲಾಯಿತು.









ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳ ಮಾಲೀಕರಾದ ಮೈಸೂರು ಸಿಟಿ–570 010, ಇಟ್ಟಿಗೆ ಗೂಡು, ಝೂ ಹತ್ತಿರ, ಇಂದಿರಾ ನಗರ, ಮಾನಸರ ರಸ್ತೆ, ಮನೆ ನಂ. 1 ರಲ್ಲಿ ವಾಸವಾಗಿರುವ ಲೇಟ್ ಡಿ. ತಿರುಮಲ ರಾವ್ ರವರ ಮಗನಾದ ಶ್ರೀ ಡಿ.ಟಿ. ಪ್ರಕಾಶ್ (Aadhaar No. 6741 8791 9735) ಇವರೊಂದಿಗೆ ಜಂಟಿ ಅಭಿವೃದ್ಧಿ ಕರಾರು ಮತ್ತು ಸಾಮಾನ್ಯ ಅಧಿಕಾರ ಪತ್ರವನ್ನು ಮಾಡಿಕೊಳ್ಳಲು ಉದ್ದೇಶಿಸಿದ್ದು, ಆ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಲ್ಲದೆ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಜಂಟಿ ಅಭಿವೃದ್ಧಿ ಕರಾರು ಮತ್ತು ಸಾಮಾನ್ಯ ಅಧಿಕಾರ ಪತ್ರವನ್ನು ನೋಂದಣಿ ಮಾಡಿಕೊಳ್ಳುವರು.

ಷೆಡ್ಯೂಲ್ ಸ್ವತ್ತು

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮಕ್ಕೆ ಸೇರಿದ ಕೃಷಿ ಹಾಗೂ ಮೈಸೂರು ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತಗೊಂಡು, ಅಭಿವೃದ್ಧಿಯಾಗದಿರುವ ಈ ಕೆಳಗೆ ನಮೂದಿಸಿರುವ ಸರ್ವೆ ನಂಬರಿನ ಜಮೀನುಗಳು.

ಕ್ರಮ ಸಂಖ್ಯೆ	ಸರ್ವೆ ನಂ.	ವಿಸ್ತೀರ್ಣ ಎಕರೆ ಮತ್ತು ಗುಂಟೆಗಳು	ಕೃಷಿ ಅಥವಾ ಅನ್ಯಕ್ರಾಂತ ಜಮೀನುಗಳು	ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
1	206/6	0–12	ಕೃಷಿ ಜಮೀನು	ಲಾ.ಹಿ. ನಂ. 11	ಲಾ.ಹಿ. ನಂ. 12	ಲಾ.ಹಿ. ನಂ. 8	ಲಾ.ಹಿ. ನಂ. 3
2	206/7	0–33	ಕೃಷಿ ಜಮೀನು	ಲಾ.ಹಿ. ನಂ. 13 ಮತ್ತು ಲಾ.ಸ. ನಂ. 208	ಲಾ.ಹಿ. ನಂ. 10 ಮತ್ತು 11	ಲಾ.ಸ. ನಂ. 205 ಮತ್ತು 208	ಲಾ.ಹಿ. ನಂ. 3 ಮತ್ತು 10
3	206/8	0–11	ಕೃಷಿ ಜಮೀನು	ಲಾ.ಹಿ. ನಂ. 10 ಮತ್ತು 11	ಲಾ.ಹಿ. ನಂ. 12 ಮತ್ತು 16	ಲಾ.ಸ. ನಂ. 16	ಲಾ.ಹಿ. ನಂ. 6
4	206/10	0–09	ಅನ್ಯಕ್ರಾಂತ ಆದೇಶ ಸಂಖ್ಯೆ 301823 ದಿನಾಂಕ 24–03–2022	ಲಾ.ಹಿ. ನಂ. 7	ಲಾ.ಹಿ. ನಂ. 3 ಮತ್ತು 8	ಲಾ.ಸ. ನಂ. 205	ಲಾ.ಹಿ. ನಂ. 11
5	206/11	0–09	ಅನ್ಯಕ್ರಾಂತ ಆದೇಶ ಸಂಖ್ಯೆ 301414 ದಿನಾಂಕ 24–03–2022	ಲಾ.ಹಿ. ನಂ. 7	ಲಾ.ಹಿ. ನಂ. 6 ಮತ್ತು 8	ಲಾ.ಹಿ. ನಂ. 10	ಲಾ.ಹಿ. ನಂ. 3
6	206/12	0–28	ಅನ್ಯಕ್ರಾಂತ ಆದೇಶ ಸಂಖ್ಯೆ 301418 ದಿನಾಂಕ 11–03–2022	ಲಾ.ಹಿ. ನಂ. 8 ಮತ್ತು 6	ಲಾ.ಹಿ. ನಂ. 9	ಲಾ.ಸ. ನಂ. 204 ಮತ್ತು ಲಾ.ಹಿ. ನಂ,. 3	ಲಾಹಿ. ನಂ. 3
7	206/13	0–21	ಅನ್ಯಕ್ರಾಂತ ಆದೇಶ ಸಂಖ್ಯೆ 301421 ದಿನಾಂಕ 11–03–2022	ಲಾ.ಹಿ. ನಂ. 14	ಲಾ.ಹಿ. ನಂ. 7	ಲಾ.ಸ. ನಂ. 208	ಬ್ಲಾಕ್ 1
8	206/14	0–37	ಅನ್ಯಕ್ರಾಂತ ಆದೇಶ ಸಂಖ್ಯೆ 301423 ದಿನಾಂಕ 11–03–2022	ಲಾ.ಸ. ನಂ. 207	ಲಾ.ಹಿ. ನಂ. 13	ಲಾ.ಸ. ನಂ. 208	ಬ್ಲಾಕ್ 1
9	206/15	0–26	ಕೃಷಿ ಜಮೀನು	ಲಾ.ಹಿ. ನಂ. 10	ಸರ್ವೆ ನಂ. 204	ಲಾ.ಸ. ನಂ. 205	ಲಾ.ಹಿ. ನಂ. 16
10	206/16	0–03	ಕೃಷಿ ಜಮೀನು	ಲಾ.ಹಿ. ನಂ. 8 ಮತ್ತು 10	ಸರ್ವೆ ನಂ. 204	ಲಾ.ಹಿ. ನಂ. 15	ಲಾ.ಹಿ. ನಂ. 8 ಮತ್ತು 12
	ಒಟ್ಟು ವಿಸ್ತೀರ್ಣ	4–29					

ಸಹಿ/– ಕೆ.ಎನ್. ಮಹದೇವಸ್ವಾಮಿ, ಬಿ.ಎಸ್‌ಸಿ., ಎಲ್.ಎಲ್.ಬಿ., ವಕೀಲರು ಮತ್ತು ನೋಟರಿ,
ರೂಂ. ನಂ. ಎಫ್–1 & 2, ಒಂದನೇ ಮಹಡಿ, 5ನೇ ಕ್ರಾಸ್, ಅಲ್ಲಮ್ಮ ಪ್ರಭು ಕೃಪ ಕಾಂಪ್ಲೆಕ್ಸ್, ರಾಮಾನುಜ ರಸ್ತೆ,
ಮೈಸೂರು–570 004. Mob: 94482-22522, Office No. 0821-4287998.

ದಿನಾಂಕ: 27–02–2023